بِسْمِ اللهِ الرَّحْمٰنِ الرَّحِيْمِ    نَحْمَدُهٗ وَنُصَلِّىْ عَلٰى رَسُوْلِهِ الْكَرِيْمِ    وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

# ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ವರ್ಷ: 05

ಸಂಚಿಕೆ: 34–35

ವಾರ್ಷಿಕ ಶುಲ್ಕ ರೂ.600/–

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

22, 29 ಆಗಸ್ಟ್ 2024, 22, 29 ಝುಹೂರ್ 1403 ಹಿಜರಿ ಶಮ್‌ಸಿ,
16, 23 ಸಫರ್ 1445 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– ಆಮೀನ್

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِىْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

وَاَقِمِ الصَّلٰوةَ طَرَفَيِ النَّهَارِ وَزُلَفًا مِّنَ الَّيْلِ ؕ اِنَّ الْحَسَنٰتِ يُذْهِبْنَ السَّيِّاٰتِ ؕ ذٰلِكَ ذِكْرٰى لِلذّٰكِرِيْنَ ﴿۱۱۵﴾

(ಸೂರಃ ಹೂದ್ : 115)

ಅಂದರೆ: ಹಗಲಿನ ಎರಡು ಅಂಶಗಳಲ್ಲೂ ರಾತ್ರಿಯ ವೇಳೆಗಳಲ್ಲೂ ನಮಾಝುನ್ನು ನಿರ್ವಹಿಸಿರಿ. ಖಂಡಿತವಾಗಿಯೂ ಸತ್ಕರ್ಮಗಳು ದುಷ್ಕರ್ಮಗಳನ್ನು ಹೋಗಲಾಡಿಸುವುವು. ಇದು ನೆನಪಿಟ್ಟುಕೊಳ್ಳುವವರಿಗೆ ಒಂದು ಬೋಧನೆಯಾಗಿದೆ.

## ಪ್ರವಾದಿ ಮುಹಮ್ಮದ್[ಸ] ರವರ ಉಪದೇಶ

* ಹಝ್‌ರತ್ ಝೈದ್ ಬಿನ್ ಖಾಲಿದ್ ಜಮ್ನಿ[ರ] ವರದಿ ಮಾಡುತ್ತಾರೆ. ರಸೂಲುಲ್ಲಾಹ್[ಸ]ರು ಹುದೈಬಿಯದಲ್ಲಿ ನಮಗೆ ಫಜ್ರ್ (ಸುಬ್‌ಹ್) ನಮಾಝ್ ಮಳೆಯಾದ ನಂತರ ನಿರ್ವಹಿಸಿಕೊಟ್ಟರು. ಅದು ರಾತ್ರಿಯಿಂದಲೇ ಪ್ರಾರಂಭವಾಗಿತ್ತು. ರಸೂಲುಲ್ಲಾಹ್(ಸ) ನಮಾಝಿನಿಂದ ಬಿಡುವಾದ ಮೇಲೆ ಜನರಿಗೆ ಸಂಬೋಧಿಸಿ ಹೇಳಿದರು. ನಿಮ್ಮ ಪ್ರಭೂ ಏನು ಹೇಳಿದ್ದಾನೆ ಎಂಬುದು ನಿಮಗೆ ಗೊತ್ತೆ? ಅವರು ಹೇಳಿದರು. ಅಲ್ಲಾಹ್ ಮತ್ತು ಅವನ ಪ್ರವಾದಿ ಉತ್ತಮ ರೀತಿಯಲ್ಲಿ ಬಲ್ಲರು. (ಅವರು ನುಡಿದರು). ಅಲ್ಲಾಹನು ಹೇಳುತ್ತಾನೆ. ಇಂದು ಮುಂಜಾನೆ ನನ್ನ ದಾಸರಲ್ಲಿ ಒಬ್ಬನು ನನ್ನ ವಿಶ್ವಾಸಿಯಾಗಿದ್ದರೆ, ಇನ್ನೊಬ್ಬರು ನನ್ನ ಅವಿಶ್ವಾಸಿಯಾಗಿದ್ದಾನೆ. ಯಾರು ಹೀಗೆ ಹೇಳುವನೋ. ನಮ್ಮ ಮೇಲೆ ಅಲ್ಲಾಹನ ಅನುಗ್ರಹದಿಂದ ಮಳೆಯಾಗಿದೆ. ಅವನು ವಿಶ್ವಾಸಿಯಾಗಿರುತ್ತಾನೆ. ಅವನು ನಕ್ಷತ್ರಗಳನ್ನು ನಂಬುವುದಿಲ್ಲ. ಯಾರು ಹೀಗೆ ಹೇಳುವನು. ಇಂತಿಂತಹ ನಕ್ಷತ್ರ ಬಲದಿಂದಾಗಿ ಮಳೆಯಾಗಿದೆ ಎನ್ನುತ್ತಾರೋ, ಅವರು ಅವಿಶ್ವಾಸಿಗಳು, ಅವರು ನನ್ನನ್ನು ನಿರಾಕರಿಸುವವರು ಮತ್ತು ನಕ್ಷತ್ರಗಳಲ್ಲಿ ವಿಶ್ವಾಸವಿಟ್ಟವರಾಗಿದ್ದಾರೆ.

* ಹಝ್‌ರತ್ ಇಬ್ನು ಉಮರ್(ರ) ವರದಿ ಮಾಡುತ್ತಾರೆ. ರಸೂಲುಲ್ಲಾಹ್(ಸ) ನುಡಿದರು. ಅಗೋಚರ ಜ್ಞಾನದ ಐದು ಕೀಲಿಗೈಗಳಿವೆ. ಕೇವಲ ಅಲ್ಲಾಹನು ಅದನ್ನು ಬಲ್ಲನು. ಹೊರತು ನಾಳೆ ಏನು ಆಗುವುದು ಎಂಬುದು ಯಾರಿಂದಲೂ ಅರಿಯಲು ಸಾಧ್ಯವಿಲ್ಲ. ಮತ್ತು ಉದರದಲ್ಲಿ ಏನಿದೆ ಎಂಬುದು ಯಾರೂ ಸಹ ಅರಿಯರು. ನಾಳೆ ಏನು ಗಳಿಸಬಹುದು ಎಂಬುದು ಯಾವ ಜೀವವು ಅರಿಯದು ಮತ್ತು ಯಾರು ಯಾವ ದೇಶದಲ್ಲಿ ಮರಣ ಹೊಂದುವರೋ ಅರಿಯರು. ಮಳೆ ಯಾವಾಗ ಬರುವುದು ಯಾರೂ ಅರಿಯರು.

**(ಸಹೀಹ್ ಬುಖಾರಿ, ಕಿತಾಬುಲ್ ಇಸ್ತಿಸ್‌ಖಾ, ಮುದ್ರಣ ಖಾದಿಯಾನ್ 2006)**

## ಪರಸ್ಪರ ಸಹೋದರತೆ ಮತ್ತು ಪ್ರೀತಿಯನ್ನು ಬೆಳೆಸಿರಿ ಮತ್ತು ಅಮಾನವೀಯತೆ ಹಾಗೂ ಭಿನ್ನತೆಯನ್ನು ತ್ಯಜಿಸಿರಿ.

**ಎಲ್ಲ ರೀತಿಯ ಆಡಂಬರ ಹಾಗೂ ಅಪಹಾಸ್ಯದಿಂದ ಪ್ರತ್ಯೇಕಗೊಳ್ಳಿರಿ. ಏಕೆಂದರೆ ಅಪಹಾಸ್ಯ ಮಾಡುವ ಪ್ರವೃತ್ತಿಯು ಮನುಷ್ಯನ ಹೃದಯದಿಂದ ಸತ್ಯವನ್ನು ಅಳಿಸಿ ಹಾಕುತ್ತದೆ ಮತ್ತು ಎಲ್ಲೆಂದರಲ್ಲಿಯೂ ದೂರ ಮಾಡಿ ಬಿಡುತ್ತದೆ.**

**ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು**

ತಮ್ಮ ಜೀವನದಲ್ಲಿ ಪರಿವರ್ತನೆಯನ್ನು ಉಂಟುಮಾಡಿಕೊಳ್ಳಿ. ನಿಜವಾಗಿ ಹೇಳಬೇಕಾದರೆ ಅಲ್ಲಾಹನು ತಾನು ಬಯಸಿದ್ದನ್ನು ಮಾಡಲು ಶಕ್ತನಿದ್ದಾನೆ. ನಿರ್ಜನ ಅವಸ್ತೆಯನ್ನು ಮಾರ್ಪಾಡು ಮಾಡಬಲ್ಲವನಾಗಿದ್ದಾನೆ. ಬಾಬುಲ್ ನಗರ ಅವಸ್ತೆ ಏನಾಯಿತು? ಅಲ್ಲಿ ಜನನ ವಸತಿ ಯೋಜನೆ ಹಾಕಲಾಗಿತ್ತು. ಆದರೆ ಅಲ್ಲಿ ಸ್ಮಶಾನವಾಯಿತು. ಅಲ್ಲಿ ಈಗ ಗೂಬೆಗಳು ವಾಸಿಸುತ್ತವೆ. ಎಲ್ಲಿ ಮನುಷ್ಯನು ಸ್ಮಶಾನವಾಗಬೇಕೆಂದು ಆಶಿಸಿದ್ದನೋ ಅದು ಲೋಕದಾದ್ಯಂತ ಯಾತ್ರಿಕರ ಸ್ಥಳವಾಯಿತು.  ಆದುದರಿಂದ ಚೆನ್ನಾಗಿ ನೆನಪಿಡಿರಿ. ಅಲ್ಲಾಹನ ಮೇಲೆ ಭರವಸೆ ಬಿಡುವುದು ಮೂರ್ಖತನವಾಗಿದೆ. ಒಂದು ಹೊಸದಾದ ಜೀವನ ನಿರ್ಮಿಸಬೇಕು. ಯಥೇಚ್ಛವಾಗಿ 'ಅಸ್ತಗಾರ್' ಪಠಿಸಬೇಕು. ಯಾರಿಗೆ ಸ್ವಲ್ಪವು ಪುರುಸೊತ್ತಿಲ್ಲವೋ ಅವರು ಹೆಚ್ಚು ಭಯಪಡುವ ಅಗತ್ಯವಿದೆ. ಸರಕಾರಿ ನೌಕರರ ಜನರ  ನಮಾಝುಗಳು ಹೆಚ್ಚಾಗಿ ವರ್ಜಿಸಲ್ಪಡುತ್ತವೆ. ಆದುದರಿಂದ ಕೆಲ ಸಂದರ್ಭಗಳಲ್ಲಿ ಝುಹರ್ ಮತ್ತು ಅಸರ್ ಹಾಗೂ ಮಗ್ರೀಬ್ ಮತ್ತು ಇಶಾಅ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸುವುದು ಧರ್ಮಬದ್ಧವಾಗಿವೆ. ಹಿರಿಯ ಅಧಿಕಾರಿಗಳ ಆಧೀನದಲ್ಲಿ ಕೆಳ ಅಧಿಕಾರಿಗಳ ನಿರ್ದೇಶನಗಳಿರುತ್ತವೆ.  ನಮಾಝ್ ಬಿಡಲು ಇಂತಹ ನೆಪಗಳು ಆತ್ಮವಂಚನೆ ಹೊರತು ಇನ್ನೇನಿಲ್ಲ. ಅವನ ಸೃಷ್ಟಿಗಳ ಹಕ್ಕು ಪಾಲನೆಯಲ್ಲಿ ಮತ್ತು ಅಲ್ಲಾಹನ ಹಕ್ಕುಗಳ ಪಾಲನೆಯಲ್ಲಿ ದೌರ್ಜನ್ಯವೆಸಗದಿರಿ.

ನೀವು ಅಲ್ಲಾಹನ ಪ್ರಿಯರಲ್ಲಿ ಸೇರುವವರಾಗಿರಿ. ಬಹಳ ಸೂಕ್ಷ್ಮ ರೀತಿಯ ದಿನಗಳಾಗಿವೆ. ಅಲ್ಲಾಹನ ಪ್ರಕೋಪದಿಂದ ಎಲ್ಲರಿಗೂ ಭಯಪಡಬೇಕಾಗಿದೆ. ಅಲ್ಲಾಹನು ಸಜ್ಜನರ ಹೊರತು ಯಾರನ್ನು ಲೆಕ್ಕಿಸುವುದಿಲ್ಲ ಪರಸ್ಪರ ಸಹೋದರತೆ ಮತ್ತು ಪ್ರೀತಿಯನ್ನು ಉಂಟು ಮಾಡಿರಿ. ಅಮಾನವೀಯತೆ ಹಾಗೂ ವಿಛಿದ್ರಕಾರಿಕೆ ಬಿಟ್ಟುಬಿಡಿ. ಎಲ್ಲ ರೀತಿಯ ಆಡಂಬರ ಹಾಗೂ ಅಪಹಾಸ್ಯದಿಂದ ಪ್ರತ್ಯೇಕಗೊಳ್ಳಿರಿ. ಏಕೆಂದರೆ ಅಪಹಾಸ್ಯ ಮಾಡುವ ಪ್ರವೃತ್ತಿಯೂ ಮನುಷ್ಯನ ಹೃದಯದಿಂದ ಸತ್ಯವನ್ನು ಅಳಸಿಹಾಕುತ್ತದೆ. ಒಬ್ಬರು ಮತ್ತೊಬ್ಬರೊಡನೆ ಆದರದಿಂದ ವರ್ತಿಸಿರಿ. ಪ್ರತಿಯೊಬ್ಬರು ತಮಗಿಂತ ತಮ್ಮ ಸಹೋದರನ ಹಿತಕ್ಕೆ ಆಧ್ಯತೆ ಕೊಡುವವರಾಗಿರಿ. ಅಲ್ಲಾಹನೊಂದಿಗೆ ಒಂದು ನೈಜವಾದ ಮೈತ್ರಿಯನ್ನು ಸಾಧಿಸಿರಿ. ಮತ್ತು ಅವನ ಅನುಸರಣೆಗೆ ಒಳಗಾಗಿರಿ. ಅಲ್ಲಾಹನ ಪ್ರಕೋಪ ಭೂಮಿಯ ಮೇಲೆ ಅವತರಿಸುತ್ತದೆ. ಯಾರು ಪರಿಪೂರ್ಣ ರೂಪದಲ್ಲಿ ತನ್ನ ಎಲ್ಲ ಪಾಪಗಳಿಂದ ಕ್ಷಮೆ ಬೇಡುತ್ತ ಅದರಿಂದ ರಕ್ಷಿಸಿಕೊಳ್ಳುವವರಾಗುವರೋ ಅವರೇ ಸುರಕ್ಷಿತರಾಗುವರು.

**(ಮಲ್ಫೂಝಾತ್, ಸಂಪುಟ 1, ಪುಟ–241–243, ಮುದ್ರಣ ಖಾದಿಯನ್ 2018)**

## ಖಾದಿಯಾನ್ ದಾರುಲ್ ಅಮಾನ್‌ನಲ್ಲಿ ಸಾಲಾನ ಇಜ್ತೆಮಾ 2024 ನಡೆಯುವ ದಿನಾಂಕಗಳು

ಸಯ್ಯದನಾ ಹಝ್‌ರತ್ ಅಮೀರುಲ್ ಮೂಮಿನೀನ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಆಝೀಝ್‌ರವರು ಭಾರತದಲ್ಲಿ ಅಂಗ ಸಂಸ್ಥೆಗಳ (ಮಜ್ಲಿಸ್ ಅನ್ಸರುಲ್ಲಾ, ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ, ಲಜ್ನಾ ಇಮಾಇಲ್ಲಾ) ರಾಷ್ಟ್ರೀಯ ವಾರ್ಷಿಕ ಕೂಟಗಳನ್ನು (ಇಜ್ತೆಮಾ) 25, 26 ಮತ್ತು 27ನೇ ಅಕ್ಟೋಬರ್ 2024 ರಂದು  (ಶುಕ್ರವಾರ, ಶನಿವಾರ, ಭಾನುವಾರ) ಆಯೋಜಿಸಲು ಅನುಮತಿ ನೀಡಿದ್ದಾರೆ.

ಎಲ್ಲಾ ಉಪ ಸಂಸ್ಥೆಗಳ ಸದಸ್ಯರು ಖಾದಿಯಾನಿನಲ್ಲಿ ಈ ಆಧ್ಯಾತ್ಮಿಕ ಪರಿಸರದಲ್ಲಿ ಆಯೋಜಿಸಲಾಗುವಂತಹ ಇಜ್ತೆಮಾಗಳಲ್ಲಿ ಪಾಲ್ಗೊಳ್ಳಲು ಇಂದಿನಿಂದಲೆ ತಯಾರಿ ಪ್ರಾರಂಭಿಸಿರಿ. ಈ ಇಜ್ತೆಮಾಗಳು ತರಬೇತಿಯ ಮುಖ್ಯ ಮೂಲವಾಗಿದೆ.

**(ಸದರ್ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಭಾರತ)**

# ಖುತ್‌ಬ ಜುಮುಅ

ಬನೂ ಮುಸ್ತಲಿಖ್‌ನ ಸರದಾರ ಹಾರಿಸ್ ಬಿನ್ ಅಬೀ ಝಿರಾರ್ ತನ್ನ ಸಮುದಾಯ ಮತ್ತು ಅರೇಬಿಯದ ನಿವಾಸಿಗಳನ್ನು ಹಝ್ರತ್ ಪೈಗಂಬರ್(ಸ)ರ ವಿರುದ್ಧ ಯುದ್ಧ ಮಾಡಲಿಕ್ಕಾಗಿ ಸಿದ್ಧಗೊಳಿಸಿದ್ದನು ಮತ್ತು ಮದೀನದಿಂದ 96 ಮೈಲು ದೂರದ ಒಂದು ಪ್ರದೇಶದಲ್ಲಿ ಸೇನೆಯನ್ನು ಒಟ್ಟುಗೂಡಿಸಲು ಆರಂಭಿಸಿದ್ದನು.

ಬನೂ ಮುಸ್ತಲಿಕ್ ದಿವಸ ಮುಸ್ಲಿಮರ ಧ್ಯೇಯವಾಕ್ಯವು **ಯಾ ಮನ್ಸೂರು ಅಮಿತ್ ಉಮಿತ್** ಎಂದಾಗಿತ್ತು

**ಬನೂ ಮುಸ್ತಲಕ್ ಯುದ್ಧಕ್ಕೆ ಕಾರಣಗಳು ಹಾಗೂ ಘಟನೆಗಳ ವಿವರಾತ್ಮಕ ಪ್ರಸ್ತಾವನೆ ಹಾಗೂ ಮುಹರ್ರಮ್ ಮಾಸದಲ್ಲಿ ದರೂದೆ ಷರೀಫ್ ಪಠಿಸಲು ಹಾಗೂ ದುಆ ಮಾಡಲು ಕೋರಿಕೆ**

ಈ ದಿನಗಳಲ್ಲಿ ದುರೂದ್ ಮಾಡಲು ಮತ್ತು ಮುಸ್ಲಿಮರ ಐಕ್ಯಕ್ಕಾಗಿ ವಿಶೇಷವಾಗಿ ದುಆಗಳನ್ನು ಮಾಡಲು ಅಹ್ಮದಿಯರು ಗಮನ ನೀಡಬೇಕು. ತಮ್ಮ ಅವಸ್ಥೆಗಳನ್ನು ಉತ್ತಮಗೊಳಿಸಲು ಮತ್ತು ಅಲ್ಲಾಹನೊಂದಿಗೆ ಸಂಬಂಧವನ್ನು ವರ್ಧಿಸಲು ಸಹ ವಿಶೇಷ ಗಮನ ನೀಡಬೇಕು. ಅಲ್ಲಾಹನು ಎಲ್ಲರಿಗೂ ಅದರ ಸೌಭಾಗ್ಯ ನೀಡಲಿ.

ಇತ್ತೀಚಿಕೆ ನಿಧನರಾದ ಐದು ದಿವಂಗತರು ಸನ್ಮಾನ್ಯ ಬೊಂಜಾ ಮಹ್ಮೂದ್ ಸಾಹಿಬ್, ಸನ್ಮಾನ್ಯ ರಶೀದ್ ಅಹ್ಮದ್ ಸಾಹಿಬ್, ಸನ್ಮಾನ್ಯ ಚೌಧರಿ ಮುತಿಯುರ್ ರೆಹಮಾನ್ ಸಾಹಿಬ್, ಮಂಝೂರ್ ಬೇಗಂ ಸಾಹಿಬಾ ಮತ್ತು ಮಾಸ್ಟರ್ ಸಾದತ್ ಅಹ್ಮದ್ ಅಶ್ರಫ್ ಸಾಹಿಬ್ ಅವರೆಲ್ಲರ ಸದ್ಗುಣಗಳ ಪ್ರಸ್ತಾವನೆ ಹಾಗೂ ನಮಾಝೆ ಜನಾಝ ನಿರ್ವಹಣೆ

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **'ಮಸ್ಜಿದ್ ಮುಬಾರಕ್'** ನಿಂದ **12-07-2024** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ- بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ.

إِيَّاكَ نَعْبُدُ وَإِيَّاكَ نَسْتَعِيْنُ. اِهْدِنَا الصِّرَاطَ الْمُسْتَقِيْمَ.

صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

ಇಂದು ನಾನು ಬನೂ ಮುಸ್ತಲಖ್ ಅಥವಾ ಮುರೈಸೀಅ್ ಯುದ್ಧದ ಪ್ರಸ್ತಾಪ ಮಾಡುತ್ತೇನೆ. ಈ ಯುದ್ಧ ಯಾವಾಗ ನಡೆಯಿತು ಎಂಬುದರ ಬಗ್ಗೆ ಚರಿತ್ರೆಗಾರರಲ್ಲಿ ಭಿನ್ನಾಭಿಪ್ರಾಯವಿದೆ. ಅಲ್ಲಾಮ ಇಬ್ನೆ ಇಸ್‌ಹಾಖ್, ತಬರಿ ಹಾಗೂ ಇಬ್ನೆ ಹಿಶಾಮ್ ಅವರ ಪ್ರಕಾರ ಇದು ಹಿಜರೀ 6ರಲ್ಲಿ ಶಅ್‌ಬಾನ್ ತಿಂಗಳಲ್ಲಿ ನಡೆದಿದೆ.(ಅಸ್ಸೀರತುನ್ನಬವಿಯ ಇಬ್ನೆ ಇಸ್‌ಹಾಖ್, ಪುಟ-439, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್) (ಅಸ್ಸೀರತುನ್ನಬವಿಯ ಲಿಇಬ್ನೆ ಹಿಶಾಮ್, ಪುಟ-669-670, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್) (ತಾರೀಖ್ ಅತ್ತಬರಿ, ಸಂಪುಟ-2, ಪುಟ-109, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಇನ್ನು ಕೆಲವರ ಪ್ರಕಾರ ಹಿಜರೀ 5ರಲ್ಲಿ ಎಂದು ಹೇಳಲಾಗಿದೆ.

(ತಬಖಾತುಲ್ ಕುಬ್ರ ಲಿಇಬ್ನೆ ಸಾಅದ್, ಸಂಪುಟ-2, ಪುಟ-48, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್ 1990) (ಕಿತಾಬುಲ್ ಮಗ್ಹಾಝಿ ಲಿಲ್‌ವಾಖದಿ, ಸಂಪುಟ-1, ಪುಟ-341, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್ 2004)

ಸಹೀಹ್ ಬುಖಾರಿಯಲ್ಲಿ, ಹಿಜ್ರಿ 4 ರಂದು ಬನೂ ಮುಸ್ತಲಿಖ್ ಯುದ್ಧವು ನಡೆಯಿತು ಎಂದು ಮೂಸಾ ಬಿನ್ ಉಕ್ಬಾಹ್ ವರದಿ ಮಾಡಿದ್ದಾರೆ. (ಫತ್‌ಹಲ್-ಬಾರಿ, ಸಂಪುಟ-7, ಪುಟ-430, ಕಿತಾಬುಲ್ ಮಗ್ಹಾಝಿ ಮಕ್ತಬತ್ ಅಲ್-ಸಲ್ಫಿಯಾ)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ)ರ ಸಂಶೋಧನೆ ಪ್ರಕಾರ ಅದರ ತಾರೀಕು ಹಿಜರೀ 5ರ ಶುಅ್‌ಬಾನ್ ತಿಂಗಳಲ್ಲಿ ಆಗಿತ್ತು. (ಸೀರತ್ ಖಾತಮುನ್ನಬಿಯೀನ್(ಸ), ಹಝ್ರತ್ ಸಾಹಿಬ್‌ಝಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ-557)

ಈ ಯುದ್ಧ ಬನೂ ಖುಝಾಅದ ಒಂದು ಶಾಖೆಯಾದ ಬನೂ ಮುಸ್ತಲಖ್‌ನೊಂದಿಗೆ ನಡೆದಿತ್ತು. ಆದ್ದರಿಂದ ಈ ಯುದ್ಧವನ್ನು ಬನೂ ಮುಸ್ತಲಖ್ ಎಂದು ಕರೆಯಲಾಗುತ್ತದೆ. ಈ ಗೋತ್ರ ಮುರೈಸೀಅ್ ಎಂಬ ಹೆಸರಿನ ಒಂದು ಬಾವಿಯ ಸಮೀಪ ನೆಲೆಸಿತ್ತು. ಆದ್ದರಿಂದ ಈ ಯುದ್ಧದ ಮತ್ತೊಂದು ಹೆಸರು ಮುರೈಸೀಅ್ ಯುದ್ಧ ಎಂದಾಗಿದೆ. ಮುರೈಸೀ ಮದೀನದಿಂದ ಸುಮಾರು 108 ಮೈಲಿ ದೂರದಲ್ಲಿದೆ.

(ಅತ್ತಬಖಾತುಲ್ ಕುಬ್ರ, ಸಂಪುಟ-2, ಪುಟ-48, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್ 1990) (ಉರ್ದು ಲುಗ್‌ತ್, ಸಂಪುಟ-17, ಪುಟ-773, "ಮರ್‌ಹಲ" ಪದದ ವಿವರಣೆಯಲ್ಲಿ)

ಬನೂ ಮುಸ್ತಲಖ್ ಖುರೈಶಿಯರ ಮಿತ್ರ ಪಕ್ಷವಾಗಿತ್ತು. ಅವರು ಮಕ್ಕಾದ ಇಳು ಪ್ರದೇಶದಲ್ಲಿದ್ದ 'ಹಬಶಿ' ಎಂಬ ಹೆಸರಿನ ಪರ್ವತದಲ್ಲಿ ಸೇರಿ "ನಾವು ಒಂದಾಗಿ ಖುರೈಶಿಯರ ಜೊತೆಗೆ ಇರುವೆವು" ಎಂದು ಈ ಗೋತ್ರದವರು ಪ್ರತಿಜ್ಞೆ ಮಾಡಿದ್ದರು. ಆದ್ದರಿಂದ ಆ ಜನರನ್ನು ಅಹಾಬೀಶ್ ಎಂದು ಹೇಳಲಾಗುತ್ತದೆ ಮತ್ತು ಇದೇ ಒಪ್ಪಂದದ ಪ್ರಕಾರ ಬನೂ ಮುಸ್ತಲಖ್ ಗೋತ್ರ ಉಹುದ್ ಯುದ್ಧದಲ್ಲಿ ಖುರೈಶಿಯರ ಸೇನೆಯಲ್ಲಿ ಭಾಗಿಯಾಗಿತ್ತು.(ಸೀರತ್ ಹಲಬೀಯಾ, ಸಂಪುಟ-2, ಪುಟ-297, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಬನೂ ಮುಸ್ತಲಖ್ ಗೋತ್ರ ಇಸ್ಲಾಮಿನ ವಿರೋಧದಲ್ಲಿ ಮಿತಿ ಮೀರಿದ್ದರು ಎಂಬುದಾಗಿತ್ತು ಈ ಯುದ್ಧದ ಒಂದು ಕಾರಣ. ಅವರಿಗೆ ಖುರೈಶಿನ ಸತ್ಯನಿಷೇಧಿಗಳ ಪೂರ್ಣ ಬೆಂಬಲ ಮತ್ತು ಸಹಾಯ ಲಭಿಸಿತ್ತು. ಉಹುದ್ ಯುದ್ಧದಲ್ಲಿ ಮುಸ್ಲಿಮರ ವಿರುದ್ಧದ ಹೋರಾಟದಲ್ಲಿ ಭಾಗವಹಿಸಿದ ಕಾರಣದಿಂದ ಈಗ ಅವರು ಬಹಿರಂಗವಾಗಿಯೇ ಮುಸ್ಲಿಮರ ಎದುರಾಗಿ ಯುದ್ಧ ನಡೆಸಲು ಇಳಿದಿದ್ದರು ಮತ್ತು ಅವರ ದ್ರೋಹಗಳು ಬಹಳಷ್ಟು ವರ್ಧಿಸಿದ್ದುವು. ಮತ್ತೊಂದು ಕಾರಣವೇನೆಂದರೆ, ಮಕ್ಕಾದಿಂದ ಹೊರಡುವ ಹೆದ್ದಾರಿಯಲ್ಲಿ ಬನೂ ಮುಸ್ತಲಿಖ್ ಗೋತ್ರದ ನಿಯಂತ್ರಣವಿತ್ತು. ಈ ಜನರು ಮಕ್ಕದಲ್ಲಿ ಮುಸ್ಲಿಮರ ಪ್ರವೇಶವನ್ನು ತಡೆಯಲಿಕ್ಕಾಗಿ ಸುದೃಢವಾದ ತಡೆಯನ್ನು ಉಂಟುಮಾಡುತ್ತಿದ್ದರು. (ಮುರವ್ವಿಯಾತ್ ಗಝ್ವಾ ಬನೂ ಮುಸ್ತಲಖ್, ಇಬ್ರಾಹೀಮ್, ಪುಟ-89, ಅಹ್ಯಾಉತ್ತುರಾಸುಲ್ ಇಸ್ಲಾಮಿ)

ಮೂರನೇ ಮುಖ್ಯವಾದ ಕಾರಣವೇನೆಂದರೆ, ಬನೂ ಮುಸ್ತಲಿಖ್‌ನ ಸರದಾರ ಹಾರಿಸ್ ಬಿನ್ ಅಬೀ ಝಿರಾರ್ ತನ್ನ ಸಮುದಾಯ ಮತ್ತು ಅರೇಬಿಯದ ನಿವಾಸಿಗಳನ್ನು ಹಝ್ರತ್ ಪೈಗಂಬರ್(ಸ)ರ ವಿರುದ್ಧ ಯುದ್ಧ ಮಾಡಲಿಕ್ಕಾಗಿ ಸಿದ್ಧಗೊಳಿಸಿದ್ದನು ಮತ್ತು ಮದೀನದಿಂದ 96 ಮೈಲು ದೂರದ ಒಂದು ಪ್ರದೇಶದಲ್ಲಿ ಸೇನೆಯನ್ನು ಒಟ್ಟುಗೂಡಿಸಲು ಆರಂಭಿಸಿದ್ದನು. (ಸಬ್ಲುಲ್ ಹುದಾ ವರ್‌ರಶಾದ್, ಸಂಪುಟ-4, ಪುಟ-344, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್ 1993) (ಫರ್ಹಂಗ್ ಸೀರತ್, ಪುಟ-226, ಝುವಾರಾ ಅಕಾಡಮಿ ಕರಾಚಿ)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಸೀರತ್ ಖಾತಮುನ್ನಬಿಯ್ಯೀನ್‌ನಲ್ಲಿ ಈ ಕುರಿತು ಹೀಗೆ ಬರೆದಿರುವರು: ಖುರೈಶಿಯರ ವಿರೋಧವು ದಿನೇ ದಿನೇ ಹೆಚ್ಚು ಅಪಾಯಕಾರಿ ಸ್ಥಿತಿಗೆ ತಲುಪುತ್ತಿತ್ತು. ಅವರು ತಮ್ಮ ಕುತಂತ್ರಗಳಿಂದ ಅರೇಬಿಯದ ಅನೇಕ ಗೋತ್ರಗಳನ್ನು ಇಸ್ಲಾಂ ಮತ್ತು ಇಸ್ಲಾಮಿನ ಸ್ಥಾಪಕರ ವಿರುದ್ಧ ನಿಲ್ಲಿಸಿದ್ದರು. ಆದರೆ ಈಗ ಅವರ ವಿರೋಧ ಒಂದು ಹೊಸ ಅಪಾಯವನ್ನು ಉಂಟುಮಾಡಿತ್ತು. ಅದೇನೆಂದರೆ, ಮುಸ್ಲಿಮರೊಂದಿಗೆ ಉತ್ತಮ ಸಂಬಂಧಗಳನ್ನು ಹೊಂದಿದ್ದ

ಅರೇಬಿಯದ ಕೆಲವು ಗೋತ್ರಗಳು ಕೂಡ ಖುರೈಶಿಯರ ಪಿತೂರಿಯಿಂದ ಮುಸ್ಲಿಮರ ವಿರುದ್ಧ ಏಳಲು ಆರಂಭಿಸಿದವು. ಬನೂ ಖುಝಾಅ ಗೋತ್ರದ ಒಂದು ಶಾಖೆಯಾದ ಬನೂ ಮುಸ್ತಲಕ್ ಇದರಲ್ಲಿ ಮುಂಚೂಣಿಯಲ್ಲಿ ನಿಂತು ಮದೀನದ ಮೇಲೆ ದಾಳಿ ನಡೆಸಲು ತಯಾರಿಯನ್ನು ಆರಂಭಿಸಿದರು. ಅವರ ಸರದಾರ ಹಾರಿಸ್ ಬಿನ್ ಅಬೀ ಝಿರಾರ್ ಆ ಪ್ರದೇಶದ ಇತರ ಗೋತ್ರಗಳನ್ನು ಕೂಡ ತನ್ನ ಜೊತೆಗೆ ಸೇರಿಸಿದನು.

(ಸೀರತ್ ಖಾತಮನ್ನಬೀಯೀನ್(ಸ), ಹಝ್ರತ್ ಸಾಹಿಬ್‌ಝಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ-557)

ಹಝ್ರತ್ ಪೈಗಂಬರ್(ಸ)ರಿಗೆ ಇದರ ಮಾಹಿತಿ ಲಭಿಸಿದಾಗ ಅವರು ಮುಂಜಾಗ್ರತೆ ವಹಿಸಲಿಕ್ಕಾಗಿ ಒಬ್ಬ ಸಹಾಬಿಯಾದ ಬುರೈದ ಬಿನ್ ಅಲ್‌ಹುಸೈಬ್(ರ)ರನ್ನು ಸ್ಥಿತಿಗತಿಗಳ ಬಗ್ಗೆ ತಿಳಿಯಲಿಕ್ಕಾಗಿ ಬನೂ ಮುಸ್ತಲಿಖ್ ಗೋತ್ರಕ್ಕೆ ಕಳುಹಿಸಿದರು. ಅವರು ಹೊರಟು ಅವರ ಕಾರಂಜಿ ಬಳಿ ಅವರನ್ನು ಕಂಡುಕೊಂಡರು. ಬುರೈದರವರು ಅವರನ್ನು ಮೋಸಗಾರ ಸಮುದಾಯವನ್ನಾಗಿ ನೋಡಿದರು ಅವರು ಸ್ವತಃ ಒಟ್ಟುಗೂಡಿಸಿದ್ದು ಮಾತ್ರವಲ್ಲದೆ ಅವರು ತಮ್ಮ ಸುತ್ತಲೂ ಜನರ ಸೈನ್ಯವನ್ನು ಕೂಡ ಸಂಗ್ರಹಿಸಿದ್ದರು. ಆ ಜನರು ಹಝ್ರತ್ ಬುರೈದ(ರ) ಅವರನ್ನು ನೀವು ಯಾರು? ಎಂದು ಕೇಳಿದರು ಅದಕ್ಕೆ ಹಝ್ರತ್ ಬುರೈದ(ರ) ಹೇಳಿದರು: ನಾನು ನಿಮ್ಮಲ್ಲಿ ಒಬ್ಬನಾಗಿದ್ದೇನೆ. ನಾನು ನಿಮ್ಮ ಸೈನ್ಯದ ಸಿದ್ಧತೆಗಳನ್ನು ಆಲಿಸಿಯೇ ಇಲ್ಲಿಗೆ ಬಂದಿದ್ದೇನೆ. ಈ ರೀತಿಯಾಗಿ, ಹಝ್ರತ್ ಬುರೈದ(ರ) ಅವರು ತಮ್ಮ ತಂತ್ರದಿಂದ ಈ ಜನರ ಯುದ್ಧದ ಸಿದ್ಧತೆಗಳನ್ನು ಕೂಲಂಕಷವಾಗಿ ಮೌಲ್ಯಮಾಪನ ಮಾಡಿದ ನಂತರ ಹಝ್ರತ್ ಪೈಗಂಬರ್(ಸ) ಅವರ ಸೇವೆಗೆ ಬಂದು ಆ ಜನರ ಪರಿಸ್ಥಿತಿಗಳನ್ನು ತಿಳಿಸಿದರು. ಹಝ್ರತ್ ಪೈಗಂಬರ್(ಸ) ಮುಸ್ಲಿಮರನ್ನು ಕರೆದು ಶತ್ರುಗಳ ಈ ಯೋಜನೆಯ ಬಗ್ಗೆ ತಿಳಿಸಿದರು. ಹಾಗೆ ಇಸ್ಲಾಮಿನ ಸೇನೆ ವೇಗದಿಂದ ತಯಾರಾಗಿ ಹೊರಟಿತು.

ಹಝ್ರತ್ ಪೈಗಂಬರ್(ಸ)ರ ಹೊರಡುವಿಕೆಯ ಬಗ್ಗೆ ಈ ರೀತಿ ವಿವರಿಸಲ್ಪಟ್ಟಿದೆ. ಒಂದು ವರದಿಯ ಪ್ರಕಾರ ಹಝ್ರತ್ ಪೈಗಂಬರ್(ಸ) ಹಝ್ರತ್ ಝೈದ್ ಬಿನ್ ಹಾರಿಸ(ರ)ರನ್ನು ಮದೀನದ ಪ್ರತಿನಿಧಿಯನ್ನಾಗಿ ಮಾಡಿದರು. ಆದರೆ ಇಬ್ನು ಹಿಶಾಮ್, ಹಝ್ರತ್ ಅಬೂಧರ್ ಗಿಫ್ಫಾರಿ(ರ)ರ ಹೆಸರನ್ನು ಪ್ರಸ್ತಾಪಿಸಿದ್ದಾರೆ. ಅದೇ ರೀತಿಯಲ್ಲಿ ಹಝ್ರತ್ ನುಮೈಲ ಬಿನ್ ಅಬ್ದುಲ್ಲಾಹ್(ರ)ರ ಹೆಸರು ಕೂಡ ಹೇಳಲಾಗುತ್ತದೆ. ಅಂತೂ ಸೇನೆ ಹೊರಟಿತು. ಇಸ್ಲಾಮಿನ ಸೇನೆ 700 ಜನರನ್ನು ಹೊಂದಿತ್ತು. ಹಝ್ರತ್ ಪೈಗಂಬರ್(ಸ) ಹಿಜರೀ 5ರ ಶುಅಬಾನ್ ತಿಂಗಳ 2ನೇ ತಾರೀಕು ಸೋಮವಾರದಂದು ಮದೀನದಿಂದ ಬನೂ ಮುಸ್ತಲಿಖ್‌ನ ಕಡೆಗೆ ಹೊರಟರು. ಹಝ್ರತ್ ಮಸ್‌ಊದ್ ಬಿನ್ ಹುನೈದ(ರ) ಮಾರ್ಗದ ಗೈಡ್ ಆಗಿದ್ದರು. ಈ ಪ್ರಯಾಣದಲ್ಲಿ, ಮುಸ್ಲಿಮರು ಒಟ್ಟು ಮೂವತ್ತು ಕುದುರೆಗಳನ್ನು ಹೊಂದಿದ್ದರು, ಅದರಲ್ಲಿ ಮುಹಾಜಿರ್‌ಗಳು ಹತ್ತು ಕುದುರೆಗಳನ್ನು ಹೊಂದಿದ್ದರು. ಹಝ್ರತ್ ಪೈಗಂಬರ್(ಸ)ರು ಎರಡು ಕುದುರೆಗಳು ಲಿಝಾಝ್ ಮತ್ತು ಝುರಿಬ್ ಹೊಂದಿದ್ದರು. ಕುದುರೆಗಳನ್ನು ಹೊಂದಿದ್ದ ಮುಹಾಜಿರೀನರ ಹೆಸರುಗಳು ಈ ಕೆಳಗಿನಂತಿವೆ. ಹಝ್ರತ್ ಅಬುಬಕರ್ ಸಿದ್ದೀಕ್(ರ), ಹಝ್ರತ್ ಉಮರ್ ಫಾರೂಕ್(ರ), ಹಝ್ರತ್ ಉಸ್ಮಾನ್ ಘನಿ(ರ), ಹಝ್ರತ್ ಅಲಿ(ರ), ಹಝ್ರತ್ ಝುಬೈರ್(ರ), ಹಝ್ರತ್ ಅಬ್ದುಲ್ ರೆಹಮಾನ್ ಬಿನ್ ಔಫ್(ರ), ಹಝ್ರತ್ ತಲ್ಹಾ ಬಿನ್ ಉಬೈದುಲ್ಲಾಹ್(ರ), ಹಝ್ರತ್ ಮಿಕ್ದಾದ್ ಬಿನ್ ಅಮ್ರ್(ರ). ಮತ್ತು ಅನ್ಸಾರ್ ಸಹಾಬರ ಇಪ್ಪತ್ತು ಕುದುರೆ ಸವಾರರ ಹೆಸರುಗಳಲ್ಲಿ ಹದಿನೈದು ಕುದುರೆ ಸವಾರರ ಹೆಸರುಗಳು ಲಭಿಸಿವೆ ಅವುಗಳು ಹೀಗಿವೆ: ಹಝ್ರತ್ ಸಾಅದ್ ಬಿನ್ ಮುಆದ್(ರ), ಹಝ್ರತ್ ಉಸೈದ್ ಬಿನ್ ಹುಝೈರ್(ರ), ಹಝ್ರತ್ ಅಬು ಅಬ್ಬಾಸ್ ಬಿನ್ ಜಬರ್(ರ), ಹಝ್ರತ್ ಕತಾದಾ ಬಿನ್ ನುಮಾನ್(ರ), ಹಝ್ರತ್ ಉವೈಮ್ ಬಿನ್ ಸಾಯಿದಾ(ರ), ಹಝ್ರತ್ ಮಾಅನ್ ಇಬ್ನೆ ಆದಿ(ರ), ಹಝ್ರತ್ ಸಾಅದ್ ಬಿನ್ ಝೈದ್ ಅಶ್‌ಹಲಿ(ರ), ಹಝ್ರತ್ ಹಾರಿಸ್ ಬಿನ್ ಹಝ್‌ಮಹ(ರ), ಹಝ್ರತ್ ಮುಆದ್(ರ), ಜಬಲ್(ರ), ಹಝ್ರತ್ ಅಬು ಖತಾದಾ(ರ), ಹಝ್ರತ್ ಅಬುವಾಬಿ ಬಿನ್ ಕಾಬ್(ರ), ಹಝ್ರತ್ ಹುಬಾಬ್ ಬಿನ್ ಮುಂಝೀರ್(ರ), ಹಝ್ರತ್ ಝಿಯಾದ್ ಬಿನ್ ಲಬೈದ್(ರ), ಹಝ್ರತ್ ಫರ್‌ವಾಹ್ ಬಿನ್ ಅಮ್ರ್(ರ), ಹಝ್ರತ್ ಮುಆಝ್ ಬಿನ್ ರಿಫಾಅ ಬಿನ್ ರಾಫಿಅ್(ರ).

ಆದಾಗ್ಯೂ, ಇದರ ಬಗ್ಗೆ ಇನ್ನಷ್ಟು ವಿವರಣೆ ಹೀಗಿದೆ: ಹಝ್ರತ್ ಪೈಗಂಬರ್(ಸ)ರ ಜೊತೆಗೆ ಅನೇಕ ಕಪಟವಿಶ್ವಾಸಿಗಳು ಕೂಡ ಹೊರಟಿದ್ದರು. ಅವರು ಇದಕ್ಕಿಂತ ಮುಂಚೆ ಈ ರೀತಿಯಾಗಿ ಯಾವುದೇ ಯುದ್ಧಕ್ಕಾಗಿ ಹೊರಟಿರಲಿಲ್ಲ. ಅವರ ಉದ್ದೇಶ ಯುದ್ಧ ಮಾಡುವುದಾಗಿರಲಿಲ್ಲ. ಬದಲಾಗಿ ಅವರು ಯುದ್ಧ ಸಂಪತ್ತಿಗಾಗಿ ಹೊರಟಿದ್ದರು. ಯುದ್ಧ ಜಯಿಸಿದರೆ ಯುದ್ಧ ಸಂಪತ್ತು ಲಭಿಸುವುದು ಎಂಬ ಆಸೆಯಿಂದ ಹೊರಟಿದ್ದರು.

(ಸಬ್ಲುಲ್ ಹುದಾ ವಾಲ್-ರಶಾದ್, ಸಂಪುಟ-4, ಪುಟ-344, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್, 1993) (ಅಲ್-ಬದಯಾ ವನ್ನಹಾಯಾ, ಸಂಪುಟ-4, ಪುಟ-169, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್, 2001) (ಕಿತಾಬುಲ್ ಮಘಾಜಿ, ಸಂಪುಟ-1, ಪುಟಗಳು-341, 343, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್, 2004) (ಅಲ್-ಅಸಬಾ ಫಿ ತಮೀಜ್ ಅಲ್-ಸಹಾಬಾ, ಸಂಪುಟ-6, ಪುಟ-82, ದಾರುಲ್ ಕುತುಬ್ ಇಲ್‌ಮಿಯಾ, ಬೈರುತ್, 1995) (ಸೀರತ್ ಎನ್ಸೈಕ್ಲೋಪೀಡಿಯಾ, ಸಂಪುಟ-7, ಪುಟ-154, ದಾರುಸ್ಸಲಾಮ್)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಅವರು ಇದರ ಬಗ್ಗೆ ಈ ಕೆಳಗಿನಂತೆ ವಿವರಿಸಿದ್ದಾರೆ: "ಹಝ್ರತ್ ಪೈಗಂಬರ್(ಸ)ರಿಗೆ ಇದರ ಮಾಹಿತಿ ಲಭಿಸಿದಾಗ ಅವರು ಮುಂಜಾಗ್ರತೆ ವಹಿಸಲಿಕ್ಕಾಗಿ ಒಬ್ಬ ಸಹಾಬಿಯಾದ ಬುರೈದ ಬಿನ್ ಅಲ್‌ಹುಸೈಬ್(ರ)ರನ್ನು ಸ್ಥಿತಿಗತಿಗಳ ಬಗ್ಗೆ ತಿಳಿಯಲಿಕ್ಕಾಗಿ ಬನೂ ಮುಸ್ತಲಿಖ್ ಗೋತ್ರಕ್ಕೆ ಕಳುಹಿಸಿದರು. ಮದೀನದ ಮೇಲೆ ದಾಳಿ ನಡೆಸಲು ಅತ್ಯಂತ ಶೀಘ್ರ ಮತ್ತು ಸುಶಕ್ತ ತಯಾರಿ ನಡೆಯುತ್ತಿವೆ ಎಂದು ಅವರು ಮರಳಿ ಬಂದು ತಿಳಿಸಿದರು. ಹಝ್ರತ್ ಪೈಗಂಬರ್(ಸ) ಮುಸ್ಲಿಮರನ್ನು ಕರೆದು ಶತ್ರುಗಳ ಈ ಯೋಜನೆಯ ಬಗ್ಗೆ ತಿಳಿಸಿದರು. ಮತ್ತು ಹಝ್ರತ್ ಪೈಗಂಬರ್(ಸ) ಮುಸ್ಲಿಮರನ್ನು ಮೊದಲ ಹೆಜ್ಜೆಯಾಗಿ ಬನೂ ಮುಸ್ತಾಲಿಕ್ ಕಡೆಗೆ ಹೋಗಲು ಪ್ರೇರೇಪಿಸಿದರು." ಅವರು ಮೊದಲು ದಾಳಿ ಮಾಡುವ ಬದಲು, ಅತೀ ಶೀಘ್ರವಾಗಿ ಮೊದಲು ಅವರ ಬಳಿಗೆ ಹೋಗಲು ಆಜ್ಞಾಪಿಸಿದರು. ಹಝ್ರತ್ ಪೈಗಂಬರ್(ಸ) ಅವರೊಂದಿಗೆ ಅನೇಕ ಸಹಾಬೀಯರು ಹೊರಡಲು ತಯಾರಾದರು ಅವರಲ್ಲದೆ ಕಪಟವಿಶ್ವಾಸಿಗಳ ಒಂದು ದೊಡ್ಡ ಗುಂಪು ಕೂಡ ಅವರೊಂದಿಗೆ ಹೊರಡಿದರು. ಹಝ್ರತ್ ಪೈಗಂಬರ್(ಸ)ರು ಅಬು ಧರ್ ಘಫಾರಿ(ರ) ಅಥವಾ ಕೆಲವು ವರದಿಗಳ ಪ್ರಕಾರ, ಝೈದ್ ಬಿನ್ ಹಾರಿಸಾ ಅವರನ್ನು ಮದೀನಾದ ತಮ್ಮ ಪ್ರತಿನಿಧಿಯನ್ನಾಗಿ ನೇಮಿಸಿದರು ಮತ್ತು ಅಲ್ಲಾಹನ ಹೆಸರಿನಿಂದ ಶಅಬಾನ್ 5 ಹಿಜರಿಯಲ್ಲಿ ಮದೀನಾವನ್ನು ತೊರೆದರು. ಸೈನ್ಯದಲ್ಲಿ ಕೇವಲ ಮೂವತ್ತು ಕುದುರೆಗಳಿದ್ದುವು. ಆದರೆ ಒಂಟೆಗಳ ಸಂಖ್ಯೆ ಸ್ವಲ್ಪ ಹೆಚ್ಚಿತ್ತು. ಈ ಕುದುರೆಗಳ ಮತ್ತು ಒಂಟೆಗಳ ಮೇಲೆ ಎಲ್ಲ ಮುಸ್ಲಿಮರು ಸರದಿ ಪ್ರಕಾರ ಸವಾರರಾಗುತ್ತಿದ್ದರು. (ಸೀರತ್ ಖಾತಮನ್ನಬಿಯೀನ್(ಸ), ಹಝ್ರತ್ ಸಾಹಿಬ್ಜಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ(ರ), ಪುಟ-557, 558)

ಈ ಬಗ್ಗೆ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಅವರು ಮತ್ತಷ್ಟು ಹೇಳುತ್ತಾರೆ, "ದಾರಿಯಲ್ಲಿ ಮುಸ್ಲಿಮರು ಸತ್ಯನಿಷೇಧಿಗಳ ಒಬ್ಬ ಗೂಢಚಾರಿಯನ್ನು ಕಂಡರು. ಆತನನ್ನು ಅವರು ಹಿಡಿದು ಹಝ್ರತ್ ಪೈಗಂಬರ್(ಸ)ರ ಸನ್ನಿಧಿಯಲ್ಲಿ ಹಾಜರುಪಡಿಸಿದರು. ಆತನು ನಿಜವಾಗಿಯೂ ಗೂಢಚಾರಿಯೆಂದು ತನಿಖೆಯಿಂದ ಗೊತ್ತಾದಾಗ ಸತ್ಯನಿಷೇಧಿಗಳ ಕುರಿತು ಕೆಲವು ಸ್ಥಿತಿಗತಿಗಳನ್ನು ಮತ್ತು ಇತರ ಸಂಗತಿಗಳನ್ನು ಆತನೊಡನೆ ಕೇಳಲು ಬಯಸಿದರು. ಆದರೆ ಆತನು ಅದನ್ನು ಹೇಳಲು ನಿರಾಕರಿಸಿದನು. ಆತನ ವರ್ತನೆ ಸಂಶಯಾಸ್ಪದವಾಗಿದ್ದ ಕಾರಣದಿಂದ ರೂಢಿಯಲ್ಲಿದ್ದ ಯುದ್ಧ ಕಾನೂನಿನ ಪ್ರಕಾರ ಹಝ್ರತ್ ಉಮರ್(ರ) ಆತನನ್ನು ವಧಿಸಿದರು. ಅನಂತರ ಇಸ್ಲಾಮಿನ ಸೇನೆ ಮುಂದಕ್ಕೆ ಸಾಗಿತು. ಬನೂ ಮುಸ್ತಲಿಖ್ ಗೋತ್ರದವರಿಗೆ ಮುಸ್ಲಿಮರ ಆಗಮನ ಮತ್ತು ಅವರ ಗೂಢಾಚಾರಿಯನ್ನು ವಧಿಸಿದ್ದ ಬಗ್ಗೆ ಸುದ್ದಿ ಲಭಿಸಿದಾಗ ಅವರು ಬಹಳ ಭಯಗೊಂಡರು. ಏಕೆಂದರೆ ಯಾವುದಾದರೂ ರೀತಿಯಲ್ಲಿ ಮದೀನದ ಮೇಲೆ ಅಚಾನಕ್ಕಾದ ದಾಳಿ ನಡೆಸಲು ಅವರು ಉದ್ದೇಶ ಹೊಂದಿದ್ದರು. ಆದರೆ ಹಝ್ರತ್ ಪೈಗಂಬರ್(ಸ)ರ ಜಾಗೃತಿ ಮತ್ತು ಸೂಕ್ಷ್ಮಬುದ್ಧಿಯ ಕಾರಣದಿಂದ ಈಗ ಅವರಿಗೆ ಲಾಭದ ಬದಲಾಗಿ ನಷ್ಟವುಂಟಾಯಿತು. ಅವರು ಬಹಳ ಭಯಗೊಂಡರು ಮತ್ತು ಅವರ ಸಹಾಯಕ್ಕಾಗಿ ಒಟ್ಟುಸೇರುತ್ತಿದ್ದ ಇತರ ಗೋತ್ರಗಳು ಕೂಡ ದೈವಿಕ ಸ್ವಾಧೀನದಿಂದ ಎಷ್ಟು ಭಯಗೊಂಡರು ಎಂದರೆ ಬೇಗನೇ ಅವರ ಜೊತೆಯನ್ನು ಬಿಟ್ಟು ತಮ್ಮ ಮನೆಗಳಿಗೆ ಹಿಂದಿರುಗಿದರು. ಆದರೆ ಬನೂ ಮುಸ್ತಲಿಖ್‌ರಿಗೆ ಖುರೈಶಿಗಳು ಮುಸ್ಲಿಮರೊಂದಿಗೆ ಶತ್ರುತ್ವವನ್ನು ಎಷ್ಟು ಉಂಟುಮಾಡಿಸಿದ್ದರು ಎಂದರೆ, ಅವರು ಯುದ್ಧ ಮಾಡುವ ಉದ್ದೇಶದಿಂದ ಹಿಂದೆ ಸರಿಯಲಿಲ್ಲ ಮತ್ತು ಪೂರ್ತಿ ಸಿದ್ಧತೆ ಯೊಂದಿಗೆ ಇಸ್ಲಾಮಿನ ಸೇನೆಯನ್ನು ಎದುರಿಸಲು ಸನ್ನದ್ಧರಾದರು.

(ಸೀರತ್ ಖಾತಮುನ್ನಬಿಯೀನ್(ಸ), ಹಝ್ರತ್ ಸಾಹಿಬ್‌ಝಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ(ರ), ಪುಟ-558)

ಹಝ್ರತ್ ಪೈಗಂಬರ್(ಸ) ಮುರೈಸೀಅ್ ತಲುಪಿದಾಗ ಅವರಿಗಾಗಿ ಚರ್ಮದ ಡೇರೆಯನ್ನು ಹಾಕಲಾಯಿತು. ಹಝ್ರತ್ ಆಯಿಶ(ರ) ಅವರ

ಜೊತೆಗೆ ಇದ್ದರು. ಕೆಲವು ಇತಿಹಾಸಕಾರರ ಪ್ರಕಾರ ಹಝ್ರತ್ ಉಮ್ಮೆ ಸಲಮಾ(ರ) ಅವರು ಸಹ ಹಝ್ರತ್ ಆಯಿಷಾ(ರ) ಅವರೊಂದಿಗೆ ಇದ್ದರು ಎಂದು ಉಲ್ಲೇಖಿಸಿದ್ದಾರೆ, ಆದರೆ ಅಲ್ಲಾಮಾ ಇಬ್ನ್ ಹಜರ್ ಅವರು ಹಝ್ರತ್ ಉಮ್ಮೆ ಸಲಮಾ(ರ) ಅವರೊಂದಿಗೆ ಇದ್ದರು ಎಂಬಂತಹ ವರದಿಗಳನ್ನು ದುರ್ಬಲವೆಂದು ವಿವರಿಸಿದ್ದಾರೆ. ಅವರ ಪ್ರಕಾರ, ಬುಖಾರಿಯ ವರದಿಯಲ್ಲಿ ಹಝ್ರತ್ ಆಯಿಷಾ(ರ) ಅವರ ಈ ಪದಗಳಿವೆ: **ಫಖರಜ ಸಹ್ಮೀ** ಅಂದರೆ: ನನ್ನ ಹೆಸರಿನ ಚೀಟಿ ಹೊರಬಂದಿತು. ಈ ಮಾತಿನಿಂದ ತಿಳಿದುಬರುವುದೇನೆಂದರೆ ಈ ಯುದ್ಧದಲ್ಲಿ ಹಝ್ರತ್ ಪೈಗಂಬರ್(ಸ) ಅವರೊಂದಿಗೆ ಹೋದ ಪರಿಶುದ್ಧ ಧರ್ಮಪತ್ನಿಯರಲ್ಲಿ ಹಝ್ರತ್ ಆಯಿಷಾ(ರ) ಮಾತ್ರ ಇದ್ದರು ಎಂದು ತಿಳಿದುಬರುತ್ತದೆ. (ಫ್ತ್‌ಹಲ್ ಬಾರಿ ಅನುವಾದಕ (ಫೈಝುಲ್-ಬಾರಿ) ಭಾಗ-19, ಪುಟ-193, ಕಿತಾಬುತ್ತಫ್ಸೀರ್ ಅಸ್‌ಹಾಬುಲ್ ಹದೀಸ್ ಲಾಹೋರ್)

ಈ ಯುದ್ಧದಲ್ಲಿ ಮುಸ್ಲಿಮರ ಧ್ಯೇಯವಾಕ್ಯವೇನು? ಬನೂ ಮುಸ್ತಲಿಕ್ ದಿವಸ ಮುಸ್ಲಿಮರ ಧ್ಯೇಯವಾಕ್ಯವು **ಯಾ ಮನ್ಸೂರು ಅಮಿತ್ ಉಮಿತ್** ಎಂದಾಗಿತ್ತು ಎಂದು ಇಬ್ನ್ ಹಿಶಾಮ್ ಬರೆದಿದ್ದಾರೆ.

ಅದರ ಅನುವಾದ ಹೀಗಿದೆ: ಓ ಸಹಾಯ ಪಡೆದವನೇ! ವಧಿಸು, ವಧಿಸು. ಈ ಘೋಷವಾಕ್ಯವನ್ನು ಬಳಸುವುದರಲ್ಲಿ ಯುಕ್ತಿ ಏನೆಂದರೆ, ಮುಸ್ಲಿಮರು ಮತ್ತು ಸತ್ಯನಿಷೇಧಿಗಳ ನಡುವೆ ಯಾವುದೇ ಗೊಂದಲವಿರಬಾರದು ಮತ್ತು ರಾತ್ರಿಯ ಕತ್ತಲೆಯಲ್ಲಿಯೂ ಮುಸ್ಲಿಮರು ಒಬ್ಬರನ್ನೊಬ್ಬರು ಗುರುತಿಸಬಹುದು ಎಂದಾಗಿತ್ತು.

(ಸಬ್ಲುಲ್ ಹುದಾ ವಲ್-ರಶಾದ್, ಸಂಪುಟ-4, ಪುಟ-358, ದಾರುಲ್ ಕುತುಬ್ ಇಲ್ಮಿಯಾ, ಬೈರುತ್, 1993) (ಮುರವ್ವಿಯಾತ್ ಘಝ್ವಾತ್ ಬನೀ ಮುಸ್ತಲಿಕ್, ಇಬ್ರಾಹಿಂ ಬಿನ್ ಇಬ್ರಾಹಿಂ, ಪುಟ-109, ಅಹ್ಮಾಉತ್ತುರಾಸುಲ್ ಇಸ್ಲಾಮಿ) (ಅಸ್ಸೀರತುನ್ನಬವೀಯಾ ಲಿಇಬ್ನೆ ಹಿಶಾಮ್, ಪುಟ-673, ದಾರುಲ್ ಕುತುಬ್ ಇಲ್ಮಿಯಾ ಬೈರುತ್ 2001)

ಹಝ್ರತ್ ಪೈಗಂಬರ್(ಸ) ಸಹಾಬಿಯರ ಸೇನಾ ಪಂಕ್ತಿಯನ್ನು ಸರಿಪಡಿಸಿದರು. ಮುಹಾಜಿರೀನರ ಧ್ವಜವನ್ನು ಹಝ್ರತ್ ಅಬೂಬಕರ್(ರ)ರಿಗೆ ನೀಡಿದರು. ಹಝ್ರತ್ ಅಮ್ಮಾರ್ ಬಿನ್ ಯಾಸಿರ್(ರ)ರಿಗೆ ಧ್ವಜ ನೀಡಲಾಗಿತ್ತು ಎಂದು ಮತ್ತೊಂದು ಹೇಳಿಕೆಯಿದೆ. ಅನ್ಸಾರರ ಧ್ವಜವನ್ನು ಹಝ್ರತ್ ಸಅದ್ ಬಿನ್ ಉಬಾದ(ರ)ರಿಗೆ ನೀಡಲಾಯಿತು. ಹಝ್ರತ್ ಪೈಗಂಬರ್(ಸ) ಹಝ್ರತ್ ಉಮರ್(ರ)ರೊಡನೆ ಶತ್ರುಗಳ ಮುಂದೆ ಹೀಗೆ ಘೋಷಿಸಲು ಆದೇಶ ನೀಡಿದರು: ಎಲೈ ಜನರೇ, ಅಲ್ಲಾಹನಲ್ಲದೇ ಆರಾಧನೆಗೆ ಅರ್ಹನು ಬೇರೆ ಯಾರೂ ಇಲ್ಲ. ಅವನ ಮೂಲಕ ತಮ್ಮ ಜೀವಗಳನ್ನು ಮತ್ತು ಸಂಪತ್ತುಗಳನ್ನು ಸಂರಕ್ಷಿಸಿರಿ. ಹಝ್ರತ್ ಉಮರ್(ರ) ಹಾಗೆಯೇ ಮಾಡಿದರು. ಆದರೆ ಮುಶ್ರಿಕರು ನಿರಾಕರಿಸಿದರು. ಸ್ವಲ್ಪ ಸಮಯ ಬಿಲ್ಲುಗಾರಿಕೆ ನಡೆಯಿತು. ಮೊತ್ತ ಮೊದಲ ಬಾಣವನ್ನು ಮುಶ್ರಿಕರ ಒಬ್ಬ ವ್ಯಕ್ತಿ ಎಸೆದನು. ಮುಸ್ಲಿಮರು ಕೂಡ ಸ್ವಲ್ಪ ಸಮಯ ಬಿಲ್ಲುಗಾರಿಕೆ ನಡೆಸಿದರು. ಅನಂತರ ದಾಳಿ ನಡೆಸಲು ಹಝ್ರತ್ ಪೈಗಂಬರ್(ಸ) ಸಹಾಬಿಯರಿಗೆ ಆದೇಶ ನೀಡಿದರು. ಅವರು ಒಗ್ಗಟ್ಟಾಗಿ ದಾಳಿ ನಡೆಸಿದರು. ಮುಶ್ರಿಕರಲ್ಲಿ ಯಾರಿಗೂ ಪರಾರಿಯಾಗಲು ಸಾಧ್ಯವಾಗಲಿಲ್ಲ. ಅವರಲ್ಲಿ 10 ಜನರು ವಧಿಸಲ್ಪಟ್ಟರು. ಉಳಿದವರನ್ನು ಬಂಧಿಸಲಾಯಿತು. ಹಝ್ರತ್ ಪೈಗಂಬರ್(ಸ) ಅವರ ಪುರುಷರನ್ನೂ ಮಹಿಳೆಯರನ್ನೂ ಮಕ್ಕಳನ್ನೂ ಜಾನುವಾರುಗಳನ್ನೂ ಬಂಧನಕ್ಕೊಳಪಡಿಸಿದರು. (ಸಬ್ಲುಲ್ ಹುದಾ ವರ್‌ರಶಾದ್, ಸಂಪುಟ-4, ಪುಟ-345, ದಾರುಲ್ ಕುತುಬ್ ಇಲ್ಮಿಯಾ ಬೈರುತ್ 1993)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಇದರ ಬಗ್ಗೆ ಹೀಗೆ ವಿವರಣೆ ನೀಡಿರುವರು: ಹಝ್ರತ್ ಪೈಗಂಬರ್(ಸ) ಮುರೈಸೀಅ್‌ಗೆ ತಲುಪಿದಾಗ ಡೇರೆ ಹಾಕಲು ಆದೇಶ ನೀಡಿದರು. ಸೇನಾ ಪಂಕ್ತಿಗಳನ್ನು ಸರಿಪಡಿಸಿ ಧ್ವಜಗಳನ್ನು ವಿತರಿಸಿದ ನಂತರ ಹಝ್ರತ್ ಪೈಗಂಬರ್(ಸ)ರ ಆದೇಶ ಪ್ರಕಾರ ಹಝ್ರತ್ ಉಮರ್(ರ) ಬನೂ ಮುಸ್ತಲಿಖ್ ಗೋತ್ರದಲ್ಲಿ ಹೀಗೆ ಘೋಷಣೆ ಮಾಡಿದರು: "ಈಗಲಾದರೂ ಇಸ್ಲಾಮಿನ ಶತ್ರುತ್ವದಿಂದ ಬಿಟ್ಟುನಿಂತು ಹಝ್ರತ್ ಪೈಗಂಬರ್(ಸ)ರ ಅಧಿಕಾರವನ್ನು ಒಪ್ಪಿಕೊಂಡರೆ ನಿಮಗೆ ಅಭಯ ನೀಡಲಾಗುವುದು ಮತ್ತು ಮುಸ್ಲಿಮರು ಮರಳಿ ಹೋಗುವರು." ಆದರೆ ಅವರು ಅದನ್ನು ಶಕ್ತವಾಗಿ ನಿರಾಕರಿಸಿದರು ಮತ್ತು ಯುದ್ಧಕ್ಕಾಗಿ ತಯಾರಾದರು. ಎಷ್ಟೆಂದರೆ ಈ ಯುದ್ಧದಲ್ಲಿ ಚಲಾಯಿಸಲಾದ ಮೊದಲ ಬಾಣ ಅವರ ವ್ಯಕ್ತಿಯಿಂದಲೇ ಆಗಿತ್ತು. ಹಝ್ರತ್ ಪೈಗಂಬರ್(ಸ) ಅವರ ಸ್ಥಿತಿಯನ್ನು ನೋಡಿದಾಗ ಅವರು ಕೂಡ ಸಹಾಬಿಯರೊಡನೆ ಹೋರಾಡಲು ಆದೇಶ ನೀಡಿದರು. ಸ್ವಲ್ಪ ಸಮಯ ಉಭಯ ಪಕ್ಷಗಳ ನಡುವೆ ಶಕ್ತವಾದ ಬಿಲ್ಲುಗಾರಿಕೆ ನಡೆಯಿತು. ಅನಂತರ ಒಂದೇ ಸವನೆ ದಾಳಿ ನಡೆಸಲು ಹಝ್ರತ್ ಪೈಗಂಬರ್(ಸ) ಸಹಾಬಿಯರಿಗೆ ಆದೇಶ ನೀಡಿದರು. ಈ ಅಚಾನಕ್ಕಾದ ಹಲ್ಲೆಯ ಕಾರಣದಿಂದ ಸತ್ಯನಿಷೇಧಿಗಳ ಹೆಜ್ಜೆ ಅಸ್ಥಿರಗೊಂಡಿತು. ಆದರೆ ಮುಸ್ಲಿಮರು ಎಷ್ಟು ಹುಶಾರಾಗಿ ಅವರನ್ನು ಸುತ್ತುವರೆದರು ಎಂದರೆ ಪೂರ್ತಿ ಕೋಮು ಸುತ್ತುವರೆಯಲ್ಪಟ್ಟು ಆಯುಧವನ್ನು ಕೆಳಗೆ ಹಾಕಲು ನಿರ್ಬಂಧಿತರಾದರು. ಕೇವಲ ಹತ್ತು ಸತ್ಯನಿಷೇಧಿಗಳ ಮತ್ತು ಒಬ್ಬ ಮುಸ್ಲಿಮನ ವಧೆಯೊಂದಿಗೆ ಒಂದು ಅಪಾಯಕಾರಿಯಾದ ಸ್ಥಿತಿಗೆ ತಲುಪಬಹುದಾಗಿದ್ದ ಯುದ್ಧ ಕೊನೆಗೊಂಡಿತು. (ಸೀರತ್ ಖಾತಮುನ್ನಬಿಯೀನ್(ಸ), ಹಝ್ರತ್ ಸಾಹಿಬ್‌ಝಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ(ರ), ಪುಟ-558, 559)

ಇಂದು ನಾನು ಓರ್ವ ಶಹೀದರನ್ನು ಮತ್ತು ಕೆಲವು ದಿವಂಗತರನ್ನು ಉಲ್ಲೇಖಿಸಬೇಕಾಗಿದೆ. ಆದ್ದರಿಂದ, ನಾನು ಈ ಮುಖ್ಯ ಖುತ್‌ಬವನ್ನು ಸಂಕ್ಷಿಪ್ತವಾಗಿ ನೀಡುತ್ತಿದ್ದೇನೆ, ಮತ್ತು ಇಂದು ಮುಹರ್‌ರಮ್ ಸಂಬಂಧವಾಗಿ ದುಆದ ಕಡೆಗೆ ಗಮನಸೆಳೆಯಲು ಬಯಸುತ್ತೇನೆ.

ಅದು ದೌರ್ಜನ್ಯ ಮತ್ತು ಬರ್ಬರತೆಯ ಕಟ್ಟಕಡೆಯ ಎಲ್ಲೆಯನ್ನು ದಾಟಿದ ಒಂದು ವೇದನಾಜನಕ ಘಟನೆಯಾಗಿತ್ತು. ಹಝ್ರತ್ ಪೈಗಂಬರ್(ಸ)ರ ಮೊಮ್ಮಗ ಮತ್ತು ಹಝ್ರತ್ ಪೈಗಂಬರ್(ಸ)ರ ಕುಟುಂಬದ ಜನರನ್ನು ಶಹೀದ್ ಮಾಡಲಾಗಿತ್ತು. ಆದರೆ ಮುಸ್ಲಿಮರ ದೌರ್ಭಾಗ್ಯವೇನೆಂದರೆ, ಅವರು ಅದರಿಂದ ಪಾಠ ಕಲಿಯುವುದಕ್ಕೆ ಬದಲಾಗಿ ಅಂತಹ ದೌರ್ಜನ್ಯವನ್ನು ಈಗಲೂ ನಡೆಸುತ್ತಿದ್ದಾರೆ. ಮುಹರ್‌ರಮ್ ತಿಂಗಳಲ್ಲಿ ಶಿಯಾ ಸುನ್ನಿ ಗಲಭೆ ಅಥವಾ ಭಯೋತ್ಪಾದಕ ಹಲ್ಲೆಗಳ ಘಟನೆಗಳು ವರ್ಧಿಸುತ್ತಿವೆ. ಉಭಯ ಪಕ್ಷಗಳಲ್ಲೂ ಜೀವಹಾನಿಗಳು ಆಗುತ್ತಿವೆ. ಈ ಪಂಥೀಯತೆ ಮತ್ತು ವೈಯಕ್ತಿಕ ಹಿತಾಸಕ್ತಿಗಳನ್ನು ಸಾಧಿಸುವ ಬಯಕೆಯು ಮುಸ್ಲಿಂ ಜಗತ್ತಿನಲ್ಲಿ ಒಂದು ರೀತಿಯ ಪಿತೂರಿತನ ಮತ್ತು ಭ್ರಷ್ಟಾಚಾರವನ್ನು ಸೃಷ್ಟಿಸಿದೆ, ಅದಲ್ಲದೆ ವಿದ್ವಾಂಸರ ಕಡೆಯಿಂದ ವಿವಿಧ ಗುಂಪುಗಳು ಮತ್ತು ಸರ್ಕಾರಗಳಿಂದಲೂ ವರ್ಷವಿಡೀ ಪರಸ್ಪರ ಹಿಂಸಾಚಾರವನ್ನು ವ್ಯಕ್ತಪಡಿಸಲಾಗುತ್ತದೆ. ಅವರಿಗೆ ಏನನ್ನೂ ಕಲಿಯುವ ಪ್ರಜ್ಞೆ ಇಲ್ಲ. ಸ್ವಲ್ಪವಾದರು ದೇವರ ಭಯವನ್ನು ಸೃಷ್ಟಿಸಿಕೊಳ್ಳಿ.

ಅಲ್ಲಾಹನು ಈ ಗಲಭೆಯನ್ನು ಕೊನೆಗೊಳಿಸಲಿಕ್ಕಾಗಿ ತನ್ನ ವಾಗ್ದಾನಗಳ ಪ್ರಕಾರ ಮಾಡಿದ ವ್ಯವಸ್ಥೆಯನ್ನು ಸ್ವೀಕಾರ ಮಾಡಲು ಅವರು ಸಿದ್ಧರಲ್ಲ. ಏಕೈಕ ಸಾಧನವಾಗಿರುವ ಮಸೀಹ್ ಮೌಊದ್‌ರ ಬೈಅತ್ ಗೆ ಬರಲು ಅವರು ಬಯಸುವುದಿಲ್ಲ. ಅದು ಉಮ್ಮತ್ ಅನ್ನು ಉಮ್ಮತೆ ವಾಹಿದ ಎನ್ನಾಗಿ ತೋರಿಸಬಹುದು ಮತ್ತು ಎಲ್ಲಾ ರೀತಿಯ ಗಲಭೆಗಳನ್ನು ಕೊನೆಗೊಳಿಸಬಹುದು. ಮುಸ್ಲಿಮರ ಏಕತೆಯನ್ನು ಸ್ಥಾಪಿಸುವ ಮೂಲಕ ಅವರ ಖ್ಯಾತಿಯನ್ನು ಸ್ಥಾಪಿಸಬಹುದು. ಇದೊಂದು ಮೂಲವಾಗಿದೆ. ಈ ಜನರಿಗೆ ತಿಳಿವು ಉಂಟಾದರೆ ಎಷ್ಟು ಚೆನ್ನ!

ಹೇಗಿದ್ದರೂ ಈ ದಿನಗಳಲ್ಲಿ ದುರೂದ್ ಮಾಡಲು ಮತ್ತು ಮುಸ್ಲಿಮರ ಐಕ್ಯಕ್ಕಾಗಿ ವಿಶೇಷವಾಗಿ ದುಆಗಳನ್ನು ಮಾಡಲು ಅಹ್ಮದಿಯರು ಗಮನ ನೀಡಬೇಕು. ತಮ್ಮ ಅವಸ್ಥೆಗಳನ್ನು ಉತ್ತಮಗೊಳಿಸಲು ಮತ್ತು ಅಲ್ಲಾಹನೊಂದಿಗೆ ಸಂಬಂಧವನ್ನು ವರ್ಧಿಸಲು ಸಹ ವಿಶೇಷ ಗಮನ ನೀಡಬೇಕು. ಅಲ್ಲಾಹನು ಎಲ್ಲರಿಗೂ ಅದರ ಸೌಭಾಗ್ಯ ನೀಡಲಿ.

ನಾನು ಹೇಳಿದಂತೆ, ಕೆಲವು ಶಹೀದರನ್ನು ಮತ್ತು ಮೃತರನ್ನು ಉಲ್ಲೇಖಿಸಬೇಕಾಗಿದೆ. ಓರ್ವ ಶಹೀದ್ ಇದ್ದಾರೆ. ಈ ಶಹೀದರ ಹೆಸರು ಸನ್ಮಾನ್ಯ ಬೊಂಜಾ ಮಹ್ಮೂದ್ ಸಾಹಿಬ್, ಇವರು ಟೋಗೋವಿನ ತಮಾಂಜೌರೆಯ ನಿವಾಸಿಯಾಗಿದ್ದರು. ಜೂನ್ 21 ರಂದು ಉಗ್ರರು ಅವರ ಮನೆಗೆ ನುಗ್ಗಿ ಶಹೀದ್ ಮಾಡಿದ್ದಾರೆ. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರಿಗೆ ಅರವತ್ನಾಲ್ಕು ವರ್ಷ ವಯಸ್ಸಾಗಿತ್ತು. ಅವರು ಇಬ್ಬರು ಪತ್ನಿಯರನ್ನು ಮತ್ತು ಹದಿನಾಲ್ಕು ಮಕ್ಕಳನ್ನು ಅಗಲಿದ್ದಾರೆ.

ನವೀದ್ ನಯೀಮ್ ಸಾಹಿಬ್ ಬೋಧಕರು (ಮುಬಲ್ಲಿಗ್ ಸಿಲ್‌ಸಿಲ) ಬರೆಯುತ್ತಾರೆ: ಈ ಜಮಾಅತ್ ಟೋಗೋವಿನ ಉತ್ತರ ಪ್ರದೇಶದ ಮುಖ್ಯ ನಗರವಾದ ತಮಂಜುರೆ ಬಳಿ ಇದೆ. ಈ ಪ್ರದೇಶವು ಬುರ್ಕಿನಾ ಫಾಸೊವಿನ ಗಡಿಯಲ್ಲಿದೆ. ಬೋಂಜಾ ಮಹ್ಮೂದ್ ಸಾಹಿಬ್ ಅವರು ಈ ಜಮಾಅತ್‌ನ ಆರಂಭಿಕ ಸದಸ್ಯರಲ್ಲಿ ಸೇರಿದ್ದರು. ವ್ಯವಸಾಯ ಮಾಡಿ ಜೀವನ ಸಾಗಿಸುತ್ತಿದ್ದರು. ಮಳೆಗಾಲದಲ್ಲಿ ಪತ್ನಿಯರನ್ನು ಮತ್ತು ಮಕ್ಕಳನ್ನು ಕರೆದುಕೊಂಡು ಅಲ್ಲಿ ತಾತ್ಕಾಲಿಕ ನಿವಾಸವನ್ನು ನಿರ್ಮಿಸಿದ್ದರು. ಬರಗಾಲದಲ್ಲಿ ದೂರದ ಊರಿಗೆ ಬರುತ್ತಿದ್ದರು. ಮತ್ತೆ ಮಳೆಗಾಲದಲ್ಲಿ ಅಲ್ಲಿಗೆ ಹೋಗುತ್ತಿದ್ದರು. ಅಂದು, ಜೂನ್ 21 ರ ರಾತ್ರಿ 8 ಗಂಟೆಗೆ ನಾಲ್ವರು ಭಯೋತ್ಪಾದಕರು ಅವರ ಮನೆಗೆ ಪ್ರವೇಶಿಸಿದಾಗ ಅವರು ತಮ್ಮ ಫಾರ್ಮ್‌ನಲ್ಲಿಯೇ ಇದ್ದರು. ಟಾರ್ಚ್ ಅನ್ನು ಬೆಳಗಿಸಿದರು. ಅವರ 14

ವರ್ಷ ವಯಸ್ಸಿನ ಪುತ್ರ ಮನೆಯಲ್ಲಿ ಬೆಳಕು ಬೆಳಗಿದ್ದನ್ನು ಕಂಡಾಗ ತಕ್ಷಣ ಮನೇಗೆ ಬಂದು ನೋಡಿದಾಗ ತನ್ನ ತಂದೆಯನ್ನು ಭಯೋತ್ಪಾದಕರು ಸುತ್ತುವರೆದಿದ್ದನ್ನು ಕಂಡನು. ಆತ ಹೆದರಿ ಅಲ್ಲಿಂದ ಓಡಿ ಹೋದ. ಆದಾಗ್ಯೂ, ಆ ಬಳಿಕ ಉಗ್ರರು ಮೃತರ ಗಲ್ಲದ ಕೆಳ ಭಾಗದಲ್ಲಿ ಬಂದೂಕನ್ನಿರಿಸಿ ಗುಂಡು ಹಾರಿಸಿದ್ದು, ಗುಂಡು ಮೂಗನ್ನು ಸೀಳುತ್ತ ಹೊರಬಂದಿದೆ. ಅವರು ಸ್ಥಳದಲ್ಲೇ ಅಲ್ಲಾಹನಿಗೆ ಪ್ರಿಯರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಈ ಕಾರ್ಯಾಚರಣೆಯ ನಂತರ ಭಯೋತ್ಪಾದಕರು ಸ್ಥಳವನ್ನು ತೊರೆದರು ಮತ್ತು ಮನೆಯ ಇತರ ಸದಸ್ಯರಿಗೆ ಹಾನಿ ಮಾಡಲಿಲ್ಲ. ಹುತಾತ್ಮರಾಗುವುದೊಂದೇ ಗುರಿ ಎಂದೆನಿಸಿತು, ಅದಕ್ಕೇ ಅವರು ಬಂದಿದ್ದರು. ಘಟನೆ ಕುರಿತು ಮಾಹಿತಿ ಪಡೆದ ಸೇನಾ ಸಿಬ್ಬಂದಿ ಕೂಡ ಅಲ್ಲಿಗೆ ತಲುಪಿದ್ದಾರೆ. ಇತ್ತೀಚಿನ ದಿನಗಳಲ್ಲಿ ಸರ್ಕಾರದ ಅಧಿಕಾರಗಳು ಬಹಳ ಸೀಮಿತವಾಗಿವೆ. ಭಯೋತ್ಪಾದಕರು ಎಲ್ಲಾ ಸ್ಥಳಗಳನ್ನು ಆಕ್ರಮಿಸಿಕೊಂಡಿದ್ದಾರೆ. ಮೃತ ದೇಹವನ್ನು ಸೇನೆಯು ವಶಕ್ಕೆ ತೆಗೆದುಕೊಂಡಿತು ಮತ್ತು ಸುತ್ತಮುತ್ತಲಿನ ಪ್ರದೇಶಗಳನ್ನು ಪರಿಶೀಲಿಸಿದ ನಂತರ ಮತ್ತು ಅವರ ಎಂದಿನ ಕ್ರಮವನ್ನು ಕೈಗೊಂಡ ನಂತರ ಮರುದಿನ ಮೃತದೇಹವನ್ನು ಸಂಬಂಧಿಕರಿಗೆ ಹಸ್ತಾಂತರಿಸಲಾಯಿತು.

ಈ ಪ್ರದೇಶದ ಸ್ಥಳೀಯ ಮಿಷನರಿಯಾಗಿರುವ ಮಾಮಾ ಬೆಲೌ ಸಾಹಿಬ್, ಅವರು ಹೇಳುತ್ತಾರೆ: ಮೃತರು ಆರಂಭಿಕ ಬೈಅತ್ ಮಾಡಿದವರಲ್ಲಿ ಒಬ್ಬರಾಗಿದ್ದರು. ಆರಂಭದಲ್ಲಿಯೇ ಅವರು ಬೈಅತ್ ಮಾಡಿದ್ದರು. ಬೈಅತ್ ಮಾಡಿದ ನಂತರ, ಅವರು ನಿಯಮಿತವಾಗಿ ನಮಾಝ್‌ಗಳಲ್ಲಿ ಮತ್ತು ಎಲ್ಲಾ ಜಮಾಅತ್ತಿನ ಕಾರ್ಯಕ್ರಮಗಳಿಗೆ ಹಾಜರಾಗುತ್ತಿದ್ದರು. ಅಂತೆಯೇ ನಿತ್ಯವೂ ಚಂದಗಳನ್ನು ನೀಡಲಾರಂಭಿಸಿದರು.

ಅಲ್ಲಿನ ಕ್ಷೇತ್ರೀಯ ಮಿಷನರಿ ಜದಾವಾ ತಾಹಿರ್ ಸಾಹಿಬ್ ಹೇಳುತ್ತಾರೆ: 2007 ರಲ್ಲಿ ಅವರ ಬೈಅತ್ ನಂತರ ರಮಝಾನ್ ಪವಿತ್ರ ಮಾಸ ಪ್ರಾರಂಭವಾಯಿತು. ಆಗ ಮಳೆಗಾಲವಾಗಿತ್ತು. ಫಸಲಿಗಾಗಿ ಭೂಮಿಯ ಸಿದ್ಧತೆ ಶುರುವಾಗಿತ್ತು. ಅಲ್ಲಿನ ಸ್ಥಳೀಯ ಜನರು ಅವರಿಗೆ ಈಗ ನೀವು ಮುಸಲ್ಮಾನರಾಗಿದ್ದೀರಿ, ಉಪವಾಸ ಮಾಡುವಿರೋ ಅಥವಾ ಹೊಲದಲ್ಲಿ ಕೆಲಸ ಮಾಡುವಿರಿ, ಏಕೆಂದರೆ ನೀವು ಉಪವಾಸದಿಂದ ಕಷ್ಟಪಟ್ಟು ಕೆಲಸ ಮಾಡಲು ಸಾಧ್ಯವಾಗವುದಿಲ್ಲ, ನಾವು ಕಷ್ಟಪಟ್ಟು ನಮ್ಮ ಬೆಳೆ ಚೆನ್ನಾಗಿ ಬೆಳೆಸುತ್ತೇವೆ ಎಂದು ಗೇಲಿ ಮಾಡಲು ಪ್ರಾರಂಭಿಸಿದರು. ಅದಕ್ಕೆ ಅವರು ಹೇಳಿದರು: ನಾನು ಇಸ್ಲಾಂ ಧರ್ಮವನ್ನು ಮನಃಪೂರ್ವಕವಾಗಿ ಸ್ವೀಕರಿಸಿದ್ದೇನೆ, ಆದ್ದರಿಂದ ಉಪವಾಸವನ್ನು ಅವಶ್ಯವಾಗಿ ಅನುಷ್ಠಿಸುತ್ತೇನೆ. ಫಸಲಿನ ಒಡೆಯ ಅಲ್ಲಾಹನಾಗಿರುವನು. ನನ್ನ ಕೈಲಾದಷ್ಟು ಮಾಡುತ್ತೇನೆ. ನನ್ನ ಹಣೆಬರಹದಲ್ಲಿರುವುದನ್ನು ದೇವರು ಖಂಡಿತವಾಗಿ ನನಗೆ ನೀಡುತ್ತಾನೆ. ಅಲ್ಲಾಹನು ಆ ದಿನಗಳಲ್ಲಿ ಏನು ಮಾಡಿದನು ಎಂದರೆ ಆ ದಿನಗಳಲ್ಲಿ ಮಳೆಯು ಸಂಪೂರ್ಣವಾಗಿ ನಿಂತುಹೋಯಿತು ಮತ್ತು ಇಡೀ ರಮಝಾನ್ ಮಾಸ ಮಳೆಯಾಗಲಿಲ್ಲ. ಅವರು ಆರಾಮವಾಗಿ ಉಪವಾಸ ಮಾಡಿ ಈದ್‌ನ ಮರುದಿವಸ ಮಳೆ ಶುರುವಾಯಿತು ಮತ್ತು ಆ ಪ್ರದೇಶದಲ್ಲಿ ವ್ಯವಸಾಯ ಮಾಡುವ ರೀತಿಯಲ್ಲಿ ಜನರೆಲ್ಲರು ಮತ್ತೆ ಹೊರ ಹೋಗಿ ತಮ್ಮ ತಮ್ಮ ಹೊಲಗಳಿಗೆ ತೆರಳಿದ್ದರು. ಸರ್ವಶಕ್ತನಾದ ಅಲ್ಲಾಹನು ಅವರನ್ನು ಗೇಲಿ ಮಾಡುವವರನ್ನು ಸಹ ಕೆಲಸದಿಂದ ತಡೆದು ತನ್ನ ಸೇವಕನಿಗೆ ಆರಾಧನೆ ಮಾಡಲು ಅವಕಾಶ ಮಾಡಿಕೊಟ್ಟನು.

ಜಮಾಅತ್ ಸ್ಥಾಪನೆಯಾದ ನಾಲ್ಕು ವರ್ಷಗಳ ನಂತರ ಕೇಂದ್ರದಿಂದ ಮಸೀದಿ ನಿರ್ಮಾಣ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಈ ಮಸೀದಿಯ ಅವಶ್ಯಕತೆ ಇಲ್ಲ ಎಂದು ಅಹ್ಮದೀಯರಲ್ಲದವರು ಅವರನ್ನು ತುಂಬಾ ಒತ್ತಾಯಿಸಿದರು. ನೀವು ನಮ್ಮ ಮಸೀದಿಯಲ್ಲೇ ನಮಾಝ್ ನಿರ್ವಹಿಸಬೇಕು, ಆದರೆ ಅವರು ಹೇಳಿದರು ನಾವು ನಮ್ಮದೇ ಮಸೀದಿಯನ್ನು ನಾವೇ ಕಟ್ಟುತ್ತೇವೆ ಮತ್ತು ಈ ಮಸೀದಿ ಕಟ್ಟಿದ ನಂತರ ಅವರು ಹಳ್ಳಿಯಲ್ಲಿದ್ದಾಗಲೆಲ್ಲಾ ಮಸೀದಿಯಲ್ಲಿ ಐದೂ ಹೊತ್ತಿನ ನಮಾಝ್‌ಗಳನ್ನು ನಿಯಮಿತವಾಗಿ ನಿರ್ವಹಿಸುತ್ತಿದ್ದರು. ಅವರ ಹಿರಿಯ ಸಹೋದರ ಯಾಕೂಬ್ ಅವರು ಹೇಳುತ್ತಾರೆ: ಮೃತರು ತುಂಬಾ ಮೃದು ಹೃದಯವನ್ನು ಹೊಂದಿದ್ದರು. ಯಾರಿಗೂ ಹಾನಿಯನ್ನು ಬಯಸಲಿಲ್ಲ. ಕುಟುಂಬದ ಯಾವುದೇ ಸಮಸ್ಯೆ ಯಾರಿಂದಲೂ ಪರಿಹರಿಸಲು ಸಾಧ್ಯವಾಗದಿದ್ದಾಗ ಅವರ ಬಳಿಗೆ ಬಂದಾಗ ಮೃತರು ಬಹಳ ಸುಲಭವಾಗಿ ಪರಿಹರಿಸುತ್ತಿದ್ದರು.

ಸರ್ವಶಕ್ತನಾದ ಅಲ್ಲಾಹನು ಮೃತರ ಪದವಿಯನ್ನು ವರ್ಧಿಸಲಿ. ಅವರ ಮಕ್ಕಳು ಮತ್ತು ಪೀಳಿಗೆಗೂ ಅವರ ಒಳ್ಳೆಯ ಕಾರ್ಯಗಳನ್ನು ಮುಂದುವರಿಸಲು ಸೌಭಾಗ್ಯ ನೀಡಲಿ. ಸರ್ವಶಕ್ತನಾದ ಅಲ್ಲಾಹನು ಈ ಪ್ರದೇಶಗಳಲ್ಲಿ ಭಯೋತ್ಪಾದಕರನ್ನು ನಿರ್ಮೂಲನೆ ಮಾಡಿ ಶಾಂತಿ ಮತ್ತು ಸುವ್ಯವಸ್ಥೆಯನ್ನು ಸ್ಥಾಪಿಸಲಿ. ಈ ಪರಿಸ್ಥಿತಿಯು ಜನರು ತಮ್ಮೊಳಗೆ ಜಗಳವಾಡುತ್ತಿದ್ದಾರೆ ಅಥವಾ ಮುಸ್ಲಿಂ ಗುಂಪುಗಳು ದೇಶದ್ರೋಹವನ್ನು ಉಂಟುಮಾಡುತ್ತಿದ್ದಾರೆ ಎಂದು ಹೇಳುತ್ತಾರೆ, ಆದರೆ ಈ ದೇಶಗಳಲ್ಲಿ ಭಯೋತ್ಪಾದನೆಯನ್ನು ತಮ್ಮ ಹಿತಾಸಕ್ತಿಗಾಗಿ ಬಳಸಿಕೊಳ್ಳುತ್ತಿರುವ ದೊಡ್ಡ ಶಕ್ತಿಗಳು ಬೆಂಬಲ ನೀಡುತ್ತವೆ ಮತ್ತು ನಂತರ ಅವರು ಸಹಾನುಭೂತಿ ಹೊಂದಲು ಶಾಂತಿಸ್ಥಾಪನೆಗಾಗಿ ನಾವು ಪ್ರಯತ್ನಿಸುತ್ತಿದ್ದೇವೆ ಎಂದು ಹೇಳಿಕೆಗಳನ್ನು ನೀಡುತ್ತಾರೆ. ಈ ಜನರು ಅವರನ್ನು ಬೆಂಬಲಿಸದಿದ್ದರೆ, ಈ ಸಂಘಟನೆಗಳು ನಿರ್ವಹಿಸಲು ಸಾಧ್ಯವೇ ಇಲ್ಲ ಮತ್ತು ನಾವು ಏನು ಮಾಡುತ್ತಿದ್ದೇವೆಂದು ಮುಸ್ಲಿಮರಿಗೆ ಅರ್ಥವಾಗುತ್ತಿಲ್ಲ. ಕೆಲವು ಮುಸ್ಲಿಂ ಸಂಘಟನೆಗಳು ಮತ್ತು ಕೆಲವು ರಾಜಕೀಯ ಜನರು ಸಹ ಈ ಭಯೋತ್ಪಾದಕರ ಜೊತೆ ಸೇರಿಕೊಂಡಿದ್ದಾರೆ.

ಮುಂದಿನ ಉಲ್ಲೇಖ ಸನ್ಮಾನ್ಯ ನೂರ್ ಹುಸೇನ್ ಸಾಹಿಬ್ ಅವರ ಪುತ್ರರಾಗಿದ್ದ ಸಾರ್ವಜನಿಕ ವ್ಯವಹಾರಗಳ ಮಾಜಿ ಸಹಾಯಕ ಅಧೀಕ್ಷಕರಾದ ಸನ್ಮಾನ್ಯ ರಶೀದ್ ಅಹ್ಮದ್ ಸಾಹಿಬ್ ಅವರದ್ದಾಗಿದೆ. ಅವರು ಇತ್ತೀಚೆಗೆ ಎಂಬತ್ತಾರು ವರ್ಷ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**.

ಅವರು ಖಾದಿಯಾನ್‌ನಲ್ಲಿ ಜನಿಸಿದರು. ಅವರು ಹುಟ್ಟಿನಿಂದಲೇ ಅಹ್ಮದಿಯಾಗಿದ್ದರು. ಅವರ ಕುಟುಂಬದಲ್ಲಿ ಅಹ್ಮದೀಯತ್ ಅವರ ತಂದೆ ನೂರ್ ಹುಸೇನ್ ಸಾಹಿಬ್ ಅವರ ಮೂಲಕ ಪ್ರವೇಶಿಸಿತು. ಅವರು ಎರಡನೇ ಖಲೀಫರ ಅವಧಿಯಲ್ಲಿ 1924 ರಲ್ಲಿ ಬೈಅತ್ ಮಾಡುವ ಮೂಲಕ ಅಹ್ಮದಿಯತ್ ಅನ್ನು ಸೇರುವ ವಿಶೇಷತೆಯನ್ನು ಹೊಂದಿದ್ದರು. ರಶೀದ್ ಸಾಹಿಬ್ ತಮ್ಮ ಪ್ರಾಥಮಿಕ ಶಿಕ್ಷಣವನ್ನು ಖಾದಿಯಾನ್‌ನಲ್ಲಿ ಪಡೆದರು. ಪಾಕಿಸ್ತಾನ ಸ್ಥಾಪನೆಯ ನಂತರ, ಮೆಟ್ರಿಕ್ಯುಲೇಷನ್ ನಂತರ, ಅವರು ತಮ್ಮ ಜಮಾಅತ್ತಿನ ಸೇವೆಗಳನ್ನು ಪ್ರಾರಂಭಿಸಿದರು. ಅವರು 1998 ರಲ್ಲಿ ನಿವೃತ್ತರಾಗಿದ್ದರೂ, ಅವರು ಮರು-ಉದ್ಯೋಗ ಪಡೆದರು ಮತ್ತು ಅವರ ಆರೋಗ್ಯವು ಅನುಮತಿಸುವವರೆಗೆ 2021 ರವರೆಗೆ ಸೇವೆ ಸಲ್ಲಿಸಲು ಅವಕಾಶ ಪಡೆದರು. ಮೃತರ ಒಟ್ಟಾರೆ ಸೇವೆಯು ಸುಮಾರು ಅರವತ್ತೈದು ವರ್ಷಗಳವರೆಗೆ ವ್ಯಾಪಿಸಿದೆ.

ಅವರು ಅನೇಕ ಗುಣಲಕ್ಷಣಗಳನ್ನು ಹೊಂದಿದ್ದರು. ದಿನನಿತ್ಯದ ಕೆಲಸ ಅದೇ ದಿನ ಮಾಡುವುದನ್ನು ರೂಢಿಸಿಕೊಂಡಿದ್ದರು. ಅತ್ಯಂತ ನಿಷ್ಠಾವಂತ ಮತ್ತು ಜವಾಬ್ದಾರಿಯ ಹೊರತಾಗಿ, ಎಲ್ಲಾ ಜಮಾಅತ್ತಿನ ವ್ಯವಹಾರಗಳನ್ನು ಗೌಪ್ಯವಾಗಿ ಕಾರ್ಯನಿರ್ವಹಿಸುತ್ತಿದ್ದರು. ಸಮಯಪ್ರಜ್ಞೆಯು ಒಂದು ಪ್ರಮುಖ ಲಕ್ಷಣವಾಗಿತ್ತು. ಅವರು ಮೂಸಿಯಾಗಿದ್ದರು. ಮತ್ತು ಚಂದ ಪಾವತಿಯ ಬಗ್ಗೆ ತುಂಬಾ ಕಾಳಜಿ ವಹಿಸುತ್ತಿದ್ದರು. ಮೊತ್ತ ಮೊದಲಿಗೆ ಚಂದ ನೀಡುತ್ತಿದ್ದರು. ಅವರು ಪ್ರತಿಯೊಂದು ಜಮಾಅತ್ತಿನ ಯೋಜನೆಗಳಲ್ಲಿ ಭಾಗವಹಿಸಲು ಪ್ರಯತ್ನಿಸುತ್ತಿದ್ದರು. ಸಂಬಂಧಿಕರೊಂದಿಗೆ ಆತ್ಮೀಯತೆಯ ಸಂಬಂಧ ಹೊಂದಿದ್ದರು. ಅವರು ಖಿಲಾಫತ್‌ನೊಂದಿಗೆ ವಿಶೇಷ ಪ್ರೀತಿ ಮತ್ತು ಸಂಪರ್ಕವನ್ನು ಹೊಂದಿದ್ದರು, ಅಗತ್ಯವಿರುವವರಿಗೆ ಮೌನವಾಗಿ ಸಹಾಯ ಮಾಡುತ್ತಿದ್ದರು. ಎರಡನೇ ಖಲೀಫರಿಂದ ಐದನೇ ಖಲೀಫತ್ ವರೆಗೆ ವಿವಿಧ ಸೇವೆಗಳನ್ನು ನಿಯೋಜಿಸಲಾಯಿತು ಮತ್ತು ಅತ್ಯಂತ ನಿಷ್ಠೆಯಿಂದ ಸೇವೆ ಸಲ್ಲಿಸಿದರು. ಅವರು ತುಂಬಾ ಶಾಂತವಾಗಿ ಕಾರ್ಯನಿರ್ವಹಿಸುವವರಾಗಿದ್ದರು. ಮತ್ತು ಅತ್ಯಂತ ನಿಸ್ವಾರ್ಥ ಸೇವಕರಾಗಿದ್ದರು. 1974 ಮತ್ತು 1984 ರ ಪ್ರಕ್ಷುಬ್ಧ ಅವಧಿಯಲ್ಲಿ, ಅವರು ಪ್ರತಿಕೂಲ ಪರಿಸ್ಥಿತಿಗಳನ್ನು ಎದುರಿಸುವ ಅವಕಾಶವನ್ನೂ ಪಡೆದರು. 1974 ರ ಪ್ರತಿಕೂಲ ಪರಿಸ್ಥಿತಿಯಲ್ಲಿ, ಪೊಲೀಸರು ಅವರನ್ನು ಬಂಧಿಸಿದರು ಮತ್ತು ಅವರನ್ನು ಬಂಧಿಸಿದ ನಂತರ, ಪೊಲೀಸರು ಅವರನ್ನು ಬಸ್‌ನಲ್ಲಿ ಫೈಸಲಾಬಾದ್‌ಗೆ ಕರೆದೊಯ್ಯುತ್ತಿದ್ದಾಗ, ವಿರೋಧಿಗಳ ಗುಂಪೊಂದು ಪೊಲೀಸರು ಅವರನ್ನು ಕರೆದೊಯ್ಯುತ್ತಿದ್ದ ಬಸ್‌ನ ಮೇಲೆ ದಾಳಿ ಮಾಡಿದರು. ಪೊಲೀಸರು ಮತ್ತು ಬಸ್ಸಿನಲ್ಲಿದ್ದ ಇತರ ಪ್ರಯಾಣಿಕರು ಅವರನ್ನು ಬಿಟ್ಟು ಓಡಿಹೋದರು. ಪೊಲೀಸರು ಅವರಿಗೆ ಕೈಕೋಳ ಹಾಕಿದ್ದರು. ಮೆರವಣಿಗೆಯಲ್ಲಿ ಭಾಗಿಯಾಗಿದ್ದವರು ಅವರನ್ನು ಕೈಕೋಳ ಹಾಕಿದ ಪರಿಸ್ಥಿತಿಯಲ್ಲಿ ಚಾಕುವಿನಿಂದ ಗಂಭೀರವಾಗಿ ಗಾಯಗೊಳಿಸಿದರು. ಪವಾಡದ ರೀತಿಯಲ್ಲಿ ಜೀವದ ರಕ್ಷಣೆಯಾಯಿತು. ಹಲವಾರು ತಿಂಗಳುಗಳ ಕಾಲ ಆಸ್ಪತ್ರೆಯಲ್ಲಿದ್ದರು. ಆ ನಂತರ ಅವರನ್ನು ಮತ್ತೆ ಜೈಲಿಗೆ ವರ್ಗಾಯಿಸಲಾಯಿತು. ಇದರಿಂದಾಗಿ ಅವರ ಕೈಬೆರಳುಗಳೂ ಕತ್ತರಿಸಲ್ಪಟ್ಟಿದ್ದವು. ಅವರ ಮುಖದ ಮೇಲೂ ಗಾಯಗಳಾಗಿದ್ದು, ಬಹಳ ಹೊತ್ತು ಮಾತನಾಡಲು ಕಷ್ಟವಾಯಿತು, ಆದರೆ ಸರ್ವಶಕ್ತನಾದ ಅಲ್ಲಾಹನು ಅವರ ಜೀವವನ್ನು ಉಳಿಸಿದನು.

ಸೆಪ್ಟೆಂಬರ್ 1979 ರಲ್ಲಿ, ರಬ್ವಾದಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್(ರಹ್) ಮತ್ತು ಇತರ ಹುದ್ದೆದಾರರ ವಿರುದ್ಧ ಪ್ರಕರಣವನ್ನು ದಾಖಲಿಸಲಾಯಿತು. ಅದರಲ್ಲಿ ರಶೀದ್ ಅಹ್ಮದ್ ಸಾಹಿಬ್ ಅವರ ಹೆಸರೂ

ಸಹ ಒತ್ತು, ಈ ಪ್ರಕರಣವನ್ನು ಬಹಳ ಕಾಲದವರೆಗೆ ನಡೆಯಿತು. 1987 ರಲ್ಲಿ, ರಶೀದ್ ಸಾಹಿಬ್ ಮತ್ತು ಇತರ ಮೂವರು ಜಮಾಅತ್ತಿನ ಹುದ್ದೆದಾರರ ವಿರುದ್ಧ ರಬ್ವಾಹ್ ಪೊಲೀಸ್ ಠಾಣೆಯಲ್ಲಿ ಮತ್ತೊಂದು ಪ್ರಕರಣವನ್ನು ದಾಖಲಿಸಲಾಯಿತು ಮತ್ತು ಅವರು ಹಲವು ವರ್ಷಗಳ ಕಾಲ ನ್ಯಾಯಾಲಯಗಳನ್ನು ಸುತ್ತಬೇಕಾಯಿತು.

ಅವರ ಪುತ್ರಿ ಅಮತುಸ್ಸುಬೂರ್ ಸಾಹಿಬ ಹೇಳುತ್ತಾರೆ: ಅವರು ಬಾಜಮಾಅತ್ ನಮಾಝ್ ನಿರ್ವಹಿಸುತ್ತಿದ್ದರು, ದಾಸರ ಹಕ್ಕುಗಳನ್ನು ಇಡೇರಿಸುವವರಾಗಿದ್ದರು, ಇತರರ ನೋವನ್ನು ತನ್ನನೋವೆಂದು ಪರಿಗಣಿಸುತ್ತಿದ್ದರು ಮತ್ತು ಅನೇಕ ಬಾರಿ ಅವರು ವಿಷಯವನ್ನು ಮುಕ್ತಾಯಗೊಳಿಸಲು ತಮ್ಮ ಹಕ್ಕನ್ನು ಬಿಟ್ಟುಬಿಡುತ್ತಿದ್ದರು. ಅವರ ಪುತ್ರಿ ಹೇಳುತ್ತಾರೆ: ನನ್ನ ತಾಯಿಯ ಮರಣದ ನಂತರ, ನಾನು ಅವರ ಬಳಿಗೆ ಹೋಗಲು ನಿರ್ಧರಿಸಿದೆ ಮತ್ತು ನಾನು ನನ್ನ ಮಕ್ಕಳೊಂದಿಗೆ ಅವರ ಬಳಿಗೆ ಬಂದೆ ಬಂದತಕ್ಷಣ ಅವರು ನನಗೆ ಬಹಳ ಪ್ರೀತಿಯಿಂದ ಹೀಗೆ ಸಲಹೆ ನೀಡಿರು: ನೀನು ನನ್ನ ಬಳಿ ನಿನ್ನ ಮಕ್ಕಳೊಂದಿಗೆ ಬಂದಿರಬೇಕೆಂದರೆ ನಿನ್ನ ಮಕ್ಕಳನ್ನು ಬಾಜಮಾಅತ್ ನಮಾಝ್ ನಿಯಮಿತವಾಗಿ ನಿರ್ವಹಿಸಬೇಕು, ಜಮಾಅತ್ತಿನ ಚಟುವಟಿಕೆಗಳಲ್ಲಿ ಭಾಗವಹಿಸಬೇಕು. ಸಂಜೆಯ ನಂತರ ಅವರು ಮನೆಯಿಂದ ಹೊರಗೆ ಹೋಗುವುದಿಲ್ಲ ಮತ್ತು ಜಮಾಅತ್ತಿನ ಹುದ್ದೆದಾರರು ಅವರಿಗೆ ಕರೆದರೆ ನಿರಾಕರಿಸುವುದಿಲ್ಲ ಎಂದು ತಿಳಿಹೇಳು. ಅವರು ಹೇಳುತ್ತಾರೆ: ಈ ತರಬೇತಿಯು ನನಗೆ ತುಂಬಾ ಪ್ರಯೋಜನವನ್ನು ನೀಡಿತು. ಸರ್ವಶಕ್ತನಾದ ಅಲ್ಲಾಹನು ಮೃತರ ಮೇಲೆ ಕರುಣೆ ಮತ್ತು ಮಗ್‌ಫಿರತ್ ಅನ್ನು ನೀಡಲಿ. ಪದವಿಗಳನ್ನು ವರ್ಧಿಸಲಿ. ಅವರ ಮಕ್ಕಳು ಮತ್ತು ವಂಶಸ್ಥರು ಅವರ ಒಳ್ಳೆಯ ಕಾರ್ಯಗಳನ್ನು ಮುಂದುವರಿಸಲಿ.

ಮುಂದಿನ ಉಲ್ಲೇಖವು ಸನ್ಮಾನ್ಯ ಚೌಧರಿ ಅಲೀ ಅಕ್ಬರ್ ಸಾಹಿಬ್ ಅವರ ಪುತ್ರ ಸನ್ಮಾನ್ಯ ಚೌಧರಿ ಮುತಿಯುರ್ ರೆಹಮಾನ್ ಸಾಹಿಬ್, ಸಾರ್ವಜನಿಕ ವ್ಯವಹಾರಗಳ ಉಪ ಮೇಲ್ವಿಚಾರಕರದ್ದಾಗಿದೆ. ಅವರು 89ನೇ ವಯಸ್ಸಿನಲ್ಲಿ ಇತ್ತೀಚೆಗೆ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**

ಅವರು ಹುಟ್ಟಿನಿಂದ ಅಹ್ಮದಿಯಾಗಿದ್ದರು. ಫೆಬ್ರವರಿ 1916 ರಲ್ಲಿ ಎರಡನೇ ಖಲೀಫರ ಕಲದಲ್ಲಿ ಬೈಅತ್ ಮಾಡುವ ಸೌಭಾಗ್ಯ ಪಡೆದರು. ಅವರ ತಂದೆ ಚೌಧರಿ ಅಲಿ ಅಕ್ಬರ್ ಸಾಹಿಬ್ ಮೂಲಕ ಅವರ ಕುಟುಂಬದಲ್ಲಿ ಅಹ್ಮದಿಯತ್ ಪ್ರಭಾವವು ಬಂದಿತು. ಪಾಕಿಸ್ತಾನದ ಸ್ಥಾಪನೆಯ ನಂತರ, ಅವರ ತಂದೆ ಚೌಧರಿ ಅಲಿ ಅಕ್ಬರ್ ಸಾಹಿಬ್ ಅವರು ಶಿಕ್ಷಣದ ಉಪ ಮೇಲ್ವಿಚಾರಕರಾಗಿ ಸೇವೆ ಸಲ್ಲಿಸುವ ಅವಕಾಶವನ್ನು ಪಡೆದರು. ಚೌಧರಿ ಮುತಿಯುರ್ ರೆಹಮಾನ್ ಸಾಹಿಬ್ ತಮ್ಮ ಪ್ರಾಥಮಿಕ ಶಿಕ್ಷಣವನ್ನು ಖಾದಿಯಾನ್‌ನಿಂದ ಪಡೆದರು. ಪಾಕಿಸ್ತಾನದ ಸ್ಥಾಪನೆಯ ನಂತರ, ಶಿಕ್ಷಣವನ್ನು ಪೂರ್ಣಗೊಳಿಸಿದ ನಂತರ, ಅವರು ಶಿಕ್ಷಣ ಇಲಾಖೆಯೊಂದಿಗೆ ಸಂಬಂಧ ಹೊಂದಿದ್ದರು. ನಿವೃತ್ತಿಯ ನಂತರ, ಅವರು ಜಮಾಅತ್ತಿನ ಸೇವೆಗೆ ತಮ್ಮನ್ನು ಅರ್ಪಿಸಿಕೊಂಡರು ಮತ್ತು ಇಪ್ಪತ್ತೈದು ವರ್ಷಗಳಿಗಿಂತ ಹೆಚ್ಚು ಕಾಲ ತಮ್ಮ ಸೇವೆಯ ಅಂತ್ಯದವರೆಗೆ ಸಾರ್ವಜನಿಕ ವ್ಯವಹಾರಗಳ ಉಪ ಮೇಲ್ವಿಚಾರಕರಾಗಿ ಸೇವೆ ಸಲ್ಲಿಸಲು ಸಾಧ್ಯವಾಯಿತು. ಅವರು ತುಂಬಾ ಶಾಂತ ಮತ್ತು ಕಠಿಣ ಶ್ರಮವಹಿಸುವ ಶ್ರಮಜೀವಿಯಾಗಿದ್ದರು.

ಚೌಧರಿ ಮುತಿಯುರ್ ರೆಹಮಾನ್ ಸಾಹಿಬ್ ಹಲವಾರು ಗುಣಲಕ್ಷಣಗಳನ್ನು ಹೊಂದಿದ್ದರು. ಚಿಕ್ಕವಯಸ್ಸಿನಲ್ಲೇ ವಸಿಯ್ಯತ್ ವ್ಯವಸ್ಥೆಗೆ ಸೇರುವ ಸೌಭಾಗ್ಯ ಅವರಿಗೆ ಲಭಿಸಿತ್ತು. ವಸಿಯ್ಯತ್‌ನ ಖಾತೆಯನ್ನು ನಿಯಮಿತವಾಗಿ ಪೂರ್ಣವಾಗಿಡುತ್ತಿದ್ದರು. ಅವರು ಸಮಯಪಾಲನೆ ಮಾಡುತ್ತಿದ್ದರು. ನಿಯಮಿತವಾಗಿ ನಮಾಝ್ ಬಾಜಮಾಅತ್ ನಿರ್ವಹಿಸುವುದರಲ್ಲಿ ಬದ್ಧರಾಗಿದ್ದರು, ಜಮಾಅತ್ತಿನ ಚಂದಗಳನ್ನು ನೀಡುವುದರಲ್ಲಿ ಮೊದಲ ಹೊತ್ತಿನಲ್ಲಿ ನೀಡುತ್ತಿದ್ದರು. ಶೈಕ್ಷಣಿಕ ಅಭಿರುಚಿ ಪ್ರಮುಖವಾಗಿತ್ತು. ಅವರದ್ದು ಸರಳ ಸ್ವಭಾವ. ಎಲ್ಲರೂಂದಿಗೆ ಸ್ನೇಹ ಮತ್ತು ಪ್ರೀತಿಯಿಂದ ವರ್ತಿಸುತ್ತಿದ್ದರು. ಕೆಲವೊಮ್ಮೆ, ಸಹೋದ್ಯೋಗಿಯೊಂದಿಗೆ ಏನಾದರೂ ಕೆಲಸವಿದ್ದರೆ, ಅಂದರೆ ಏನಾದರೂ ಅಸಮಾಧಾನವಿದ್ದರೆ, ಅವರು ಮೊದಲು ರಾಜಿ ಮಾಡಲು ಕೈ ಚಾಚುತ್ತಿದ್ದರು. ಕಚ್ಚೇರಿಯ ವತಿಯಿಂದ ಅವರಿಗೆ ವಹಿಸಲಾದ ಯಾವುದೇ ಕರ್ತವ್ಯವನ್ನು ಅವರು ಸಾಧ್ಯವಾದಷ್ಟು ಬೇಗ ಪೂರ್ಣಗೊಳಿಸುತ್ತಿದ್ದರು. ಅವರು ಕೆಲಸವನ್ನು Pending ಇಡಲು ಇಷ್ಟಪಡುತ್ತಿರಲಿಲ್ಲ ಮತ್ತು ಕೊನೆಯವರೆಗೂ ಈ ಗುಣಲಕ್ಷಣವನ್ನು ಮುಂದುವರೆಸಿದರು. ಕಛೇರಿಯ ಕೆಲಸವನ್ನು ಎಂದಿಗೂ Pending ಇಡಲಿಲ್ಲ. ಮೃತರು ಯಾವಾಗಲೂ ಖಿಲಾಫತ್‌ನೊಂದಿಗೆ ಸಂಪರ್ಕದಲ್ಲಿರಲು ಮತ್ತು ನಿಝಾಮೆ ಜಮಾಅತ್‌ಗೆ ವಿಧೇಯರಾಗಿರಲು ಸಲಹೆ ನೀಡುತ್ತಿದ್ದರು ಮತ್ತು ಅವರು ಯಾವಾಗಲೂ ತಮ್ಮ ಸಂಬಂಧಿಕರಿಗೆ ಮತ್ತು ಅವರ ಪುತ್ರಿಗೆ ಮತ್ತು ಮಕ್ಕಳಿಗೆ ಯಾವಾಗಲು ಖಿಲಾಫತ್‌ನೊಂದಿಗೆ ದೃಢ ಸಂಬಂಧ ಇರಿಸಲು ಹೇಳುತ್ತಿದ್ದರು.

ಕೆಲ ವರ್ಷಗಳ ಮುಂಚೆಯೆ ಅವರ ಪತ್ನಿಯೂ ಮೃತಪಟ್ಟಿದ್ದರು. ಅವರಿಗೆ ಒಬ್ಬಳೇ ಮಗಳಿದ್ದು, ಅವರ ಪತಿಯೂ ನಿಧನಹೊಂದಿದ್ದಾರೆ ಮತ್ತು ಅವರು ಈ ಎಲ್ಲಾ ಆಘಾತಗಳನ್ನು ಬಹಳ ತಾಳ್ಮೆಯಿಂದ ಸಹಿಸಿಕೊಂಡರು. ಅಲ್ಲಾಹನು ಅವರ ಮೇಲೆ ಕರುಣೆ ಮತ್ತು ಮಗ್‌ಫಿರತ್ ಅನ್ನು ನೀಡಲಿ. ಪದವಿಗಳನ್ನು ವರ್ಧಿಸಲಿ. ದಿವಂಗತರು ಚೌಧರಿ ಇಝಾಝುರ್ ರೆಹಮಾನ್ ಸಾಹಿಬ್ ಮಾಜಿ ಅಧ್ಯಕ್ಷ ಅನ್ಸರುಲ್ಲಾ ಯುಕೆ ಅವರ ಚಿಕ್ಕಪ್ಪ ಆಗಿದ್ದರು.

ಮುಂದಿನ ಉಲ್ಲೇಖ ಸನ್ಮಾನ್ಯ ದಿ॥ ಮಹ್ಮೂದ್ ಅಹ್ಮದ್ ಭಟ್ಟಿ ಸಾಹಿಬ್ ಸರ್ಗೋದ ಅವರ ಪತ್ನಿ ಮಂಝೂರ್ ಬೇಗಂ ಸಾಹಿಬಾ ಅವರದ್ದಾಗಿದೆ. ಅವರು ಇತ್ತೀಚಿನ ದಿನಗಳಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಸಹಾಬಿ ಹಝ್ರತ್ ಚೌಧರಿ ಗುಲಾಮ್ ಹುಸೇನ್ ಸಾಹಿಬ್ ಅವರ ಸೊಸೆಯಾಗಿದ್ದರು.

ಅವರ ತಾಯಿಯ ಚಿಕ್ಕಪ್ಪ ಚೌಧರಿ ಗುಲಾಮ್ ನಬಿ ಅಲ್ವಿ ಸಾಹಿಬ್ ಮತ್ತು ಚಿಕ್ಕಪ್ಪ ಮಾನ್ಯ ಚೌಧರಿ ಅತಾ ಮುಹಮ್ಮದ್ ಅಲ್ವಿ ಸಾಹಿಬ್ ಅವರ ಮೂಲಕ ಅವರ ಕುಟುಂಬದಲ್ಲಿ ಅಹ್ಮದಿಯ್ಯತ್ ಪ್ರವೇಶಿಸಿತು. ಈ ಇಬ್ಬರು ಹಿರಿಯರು ಚಿಚಾವತನಿ ಎಂಬ ಊರಿನಲ್ಲಿ (ಮುನಾಝಿರ) ಚರ್ಚೆಯನ್ನು ಆಲಿಸಿದ ನಂತರ ಬೈಅತ್ ಮಾಡಿದ್ದರು. ಮೃತರ ತಂದೆ ಚೌಧರಿ ಮುಹಮ್ಮದ್ ಅಬ್ದುಲ್ಲಾ ಅಲ್ವಿ ಸಾಹಿಬ್ ಅವರು ಮೂರು ವರ್ಷಗಳ ಕಾಲ ಸಂಶೋಧನೆ ನಡೆಸಿದ ನಂತರ 1935 ರಲ್ಲಿ ಅಹ್ಮದಿಯತ್ ಅನ್ನು ಸ್ವೀಕರಿಸಿದರು. ಅವರ ಪತಿ ದಿ॥ ಮಹ್ಮೂದ್ ಅಹ್ಮದ್ ಭಟ್ಟಿ ಸಾಹಿಬ್ ಮತ್ತು ಅವರ ಪುತ್ರ ತಾಹಿರ್ ಮಹ್ಮೂದ್ ಭಟ್ಟಿ ಸಾಹಿಬ್ ಅವರಿಗೆ ದೈವಮಾರ್ಗದಲ್ಲಿ ಬಂಧನಕ್ಕೊಳಗಾದರು. ಅವರ ಓರ್ವ ಸಹೋದರ ನಸೀರ್ ಅಹ್ಮದ್ ಅಲ್ವಿ ಸಾಹಿಬ್ ಅವರಿಗೆ 1991 ರಲ್ಲಿ ಸಿಂಧ್‌ನಲ್ಲಿ ಅಹ್ಮದಿಯತ್‌ನ ಹೆಸರಿನಲ್ಲಿ ಶಹೀದ್ ಮಾಡಲಾಯಿತು. ಮೃತರು ಮುಸಿಯಾಗಿದ್ದರು. ಅವರು ಮೂವರು ಪುತ್ರಿಯರು ಮತ್ತು ಏಳು ಪುತ್ರರನ್ನು ಅಗಲಿದ್ದಾರೆ. ಅವರ ಪುತ್ರರಲ್ಲಿ ಒಬ್ಬರಾದ ಆಬಿದ್ ಮಹ್ಮೂದ್ ಭಟ್ಟಿ ಸಾಹಿಬ್ ವಖಿಫೆ ಝಿಂದಗಿಯಾಗಿದ್ದಾರೆ. ಮುರಬ್ಬಿಯಾಗಿದ್ದಾರೆ. ಜಾಮಿಯಾ ಅಹ್ಮದಿಯಾದ ಪ್ರಾಂಶುಪಾಲ ಹಗೂ ತನ್‌ಝೀಮಿಯಾ ಜಮಾಅತ್ತಿನ ನಾಯಿಬ್ ಅಮೀರ್ ಆಗಿದ್ದರು. ಮತ್ತು ಕ್ರಿಯಾ ಕ್ಷೇತ್ರದಲ್ಲಿದ್ದ ಕಾರಣದಿಂದ ತಾಯಿಯ ಜನಾಝದಲ್ಲಿ ಭಾಗವಹಿಸಲು ಸಾಧ್ಯವಾಗಲಿಲ್ಲ.

ಈ ಚಕ್ ನ ಲಜ್ನಾ ಇಮಾಇಲ್ಲಾಹ್‌ದ ಮಾಜಿ ಅಧ್ಯಕ್ಷೆ ಖಯ್ಯೂಮ್ ಸಾಹಿಬಾ ಅವರು ಹೇಳುತ್ತಾರೆ: ನನಗೆ ಹದಿನೈದು ವರ್ಷ ಲಜ್ನಾ ಅಧ್ಯಕ್ಷರಾಗಿ ಸೇವೆ ಸಲ್ಲಿಸುವ ಅವಕಾಶ ಲಭಿಸಿತು, ಈ ಅವಧಿಯಲ್ಲಿ ನಾನು ಮೃತರ ಅನೇಕ ಗುಣಲಕ್ಷಣಗಳನ್ನು ನೋಡಿದ್ದೇನೆ. ಉಪವಾಸ ಮತ್ತು ನಮಾಝುನ್ನು ನಿರ್ವಹಿಸುವುದರಲ್ಲಿ ಕಡ್ಡಾಯವಾಗಿದ್ದರು, ಅವರು ಐದು ಹೊತ್ತಿನ ನಮಾಝುನ್ನು ನಿಯಮಿತವಾಗಿ ನಿರ್ವಹಿಸುತ್ತಿದ್ದರು. ಲಜ್ನಾಗೆ ಮಸೀದಿಗೆ ಬರಲು ಅವಕಾಶವಿರುವವರೆಗೆ, ಅವರು ಶುಕ್ರವಾರ ನಿಯಮಿತವಾಗಿ ಬರುತ್ತಿದ್ದರು ಮತ್ತು ಯಾವಾಗಲೂ ಮೊದಲ ಸಾಲಿನಲ್ಲಿ ಕುಳಿತುಕೊಳ್ಳುತ್ತಿದ್ದರು. ಈಗ ನಿರ್ಬಂಧಗಳಿವೆ, ಮಹಿಳೆಯರು ಮಸೀದಿಗೆ ಹೋಗುವಂತಿಲ್ಲ, ಶುಕ್ರವಾರದ ನಮಾಝುನ್ನು ಸಹ ನಿರ್ವಹಿಸುವಂತಿಲ್ಲ, ಈದ್‌ನಲ್ಲಿ ನಮಾಝ್ ನಿರ್ವಹಿಸುವಂತಿಲ್ಲ. ಮನೆಯಲ್ಲಿ ಕುಳಿತಿದ್ದೇವೆ ಮತ್ತು ನಮ್ಮ ಪರಿಸ್ಥಿತಿಗಳು ಯಾವಾಗ ಸರಿಯಾಗುತ್ತವೆ ಮತ್ತು ನಾವು ಯಾವಾಗ ಮಸೀದಿಗಳಿಗೆ ಹೋಗಬಹುದು ಎಂಬ ಆತಂಕದಲ್ಲಿರುತ್ತಿದ್ದರು. ಅವರಿಗಾಗಿಯೂ ದುಆ ಮಾಡಿರಿ ಸರ್ವಶಕ್ತನಾದ ಅಲ್ಲಾಹನು ಪಾಕಿಸ್ತಾನದ ಜನರ ಮೇಲೆ ಕರುಣಿಸಲಿ. ಪ್ರತಿ ಸಭೆಯಲ್ಲೂ ಅವರು ಹಾಜರಾಗುತ್ತಿದ್ದರು. ರಮಾಝಾನಿನ ಪವಿತ್ರ ಮಾಸದಲ್ಲಿ ಅವರು ನಿಯಮಿತವಾಗಿ ಲಜ್ನಾದೊಂದಿಗೆ ಮಸೀದಿಯಲ್ಲಿ ತರಾವೀಹ್ ನಿರ್ವಹಿಸುತ್ತಿದ್ದರು. ತಮ್ಮ ಮಕ್ಕಳನ್ನು ಮತ್ತು ಮೊಮ್ಮಕ್ಕಳನ್ನು ಯಾವಾಗಲೂ ಮಸೀದಿಗೆ ಜೋಡಿಸುತ್ತಿದ್ದರು. ಮಕ್ಕಳಿಗೆ ಬಹಳ ಉತ್ತಮವಾಗಿ ತರಬೇತಿ ನೀಡಿದರು. ಮಕ್ಕಳನ್ನು ಸದಾ ಜಮಾಅತ್ತಿನ ಸೇವೆಯತ್ತ ಆಕರ್ಷಿಸುತ್ತಿದ್ದರು.

ಖೈಸರ್ ಮಹಮೂದ್ ಭಟ್ಟಿ ಸಾಹಿಬ್, ಅವರ ಪುತ್ರ ಅವರ ಚಂದಗಳನ್ನು ನೀಡುವ ಬಗ್ಗೆ ಬರೆಯುತ್ತಾರೆ: ಅವರು ಯಾವಾಗಲೂ ತಮ್ಮ ಜೇಬಿನಿಂದ ತಮ್ಮ ಚಂದಗಳನ್ನು ಪಾವತಿಸುತ್ತಿದ್ದರು. ಅವರು ತಮ್ಮ ಉಳಿತಾಯದ ಹಣದಿಂದ ವಸಿಯ್ಯತ್‌ನ ಚಂದವನ್ನು ನೀಡುತ್ತಿದ್ದರು. ವಸಿಯ್ಯತ್‌ನಲ್ಲಿ ಆಸ್ತಿಯ ಭಾಗವನ್ನು ನಾವು ಪಾವತಿಸುತ್ತೇವೆ ಎಂದು ಅವರಿಗೆ ಹೇಳಿದಾಗ ಅವರು ನಾನು ಅಲ್ಲಾಹನ ಮಾರ್ಗದಲ್ಲಿ ವಸಿಯ್ಯತ್ ಮಾಡಿರುವುದು ಅದಕ್ಕಾಗಿ ನಾನೇ ಸ್ವತಃ ಅದನ್ನು ಪಾವತಿಸುತ್ತೇನೆ ಎಂದು

ಹೇಳಿದರು. ಆಕೆಗೆ ಧರ್ಮದ ಬಗ್ಗೆ ವಿಶೇಷ ಗೌರವ ಮತ್ತು ಘನತೆ ಇತ್ತು. 1989 ರಲ್ಲಿ, ಗ್ರಾಮದಲ್ಲಿ ಜಮಾಅತ್‌ನ ಪರಿಸ್ಥಿತಿ ಉದ್ವಿಗ್ನಗೊಂಡಿತು ಮತ್ತು ವಿರೋಧಿಗಳು ಗ್ರಾಮದ ಅಹ್ಮದಿಯರ ಮನೆಗಳಿಗೆ ಬೆಂಕಿ ಹಚ್ಚಿ ಮಸೀದಿಯನ್ನು ಆಕ್ರಮಿಸಿಕೊಳ್ಳಲು ಬಯಸಿದ್ದರು, ಆದ್ದರಿಂದ ಅವರು ತನ್ನ ಪತಿ ಮತ್ತು ತನ್ನ ಮಕ್ಕಳನ್ನು ಮಸೀದಿಗೆ ಹೋಗುವಂತೆ ಕೇಳಿಕೊಂಡರು. ನಾನು ಒಬ್ಬಂಟಿಯಾಗಿ ಮನೆಯನ್ನು ರಕ್ಷಿಸುತ್ತೇನೆ ಎಂದು ಹೇಳಿದರು. ಆ ದಇನಗಳಲ್ಲಿ ಆಕೆಯ ಪತಿ ಮತ್ತು ಅವರ ಪುತ್ರರನ್ನು ಸಹ ಪೊಲೀಸರು ಬಂಧಿಸಿದರು, ಆದರೆ ಈ ಕಡೆಯಿಂದ ಯಾವುದೇ ತೊಂದರೆ ಇರಲಿಲ್ಲ, ಆದರೆ ಅವರು ರಾತ್ರಿಯಿಡೀ ಅಲ್ಲಾಹನಲ್ಲಿ ತನ್ನ ಪತಿ ಮತ್ತು ಮಕ್ಕಳಿಗೆ ಜಮಾತ್‌ನೊಂದಿಗೆ ದೃಢವಾಗಿ ನಿಲ್ಲಲು ಸಹಾಯ ಮಾಡು ಎಂದು ಸರ್ವಶಕ್ತನಾದ ಅಲ್ಲಾಹನಲ್ಲಿ ಪ್ರಾರ್ಥಿಸುತ್ತಿದ್ದರು ಎಂದು ಅವರ ಮಕ್ಕಳು ಹೇಳುತ್ತಾರೆ. ಸರ್ವಶಕ್ತನಾದ ಅಲ್ಲಾಹನು ಅವರಿಗೆ ಕ್ಷಮೆ ಮತ್ತು ಮಗ್‌ಫಿರತ್ ಅನ್ನು ನೀಡಲಿ ಮತ್ತು ಅವರ ಮಕ್ಕಳಿಗೆ ಅವರ ಒಳ್ಳೆಯ ಕಾರ್ಯಗಳನ್ನು ಮುಂದುವರಿಸುವ ಸಾಮರ್ಥ್ಯವನ್ನು ನೀಡಲಿ.

ಮುಂದಿನ ಉಲ್ಲೇಖವು ಮಾಸ್ಟರ್ ಸಾದತ್ ಅಹ್ಮದ್ ಅಶ್ರಫ್ ಸಾಹಿಬ್ ಅವರದ್ದಾಗಿದೆ. ಅವರು ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ಅವರ ಅಂಗರಕ್ಷಕರಾಗಿದ್ದ ಮಾನ್ಯ ಖುಷಿ ಮುಹಮ್ಮದ್ ಸಾಹಿಬ್ ಅವರ ಪುತ್ರ ಆಗಿದ್ದರು. ಅವರು ಇತ್ತೀಚೆಗೆ ಎಂಬತ್ತಮೂರು ವರ್ಷ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರು ಪತ್ನಿ, ಮೂವರು ಪುತ್ರರು ಹಾಗೂ ಮೂವರು ಪುತ್ರಿಯರನ್ನು ಅಗಲಿದ್ದಾರೆ. ಒಬ್ಬ ಪುತ್ರ, ಉಸ್ಮಾನ್ ಅಹ್ಮದ್ ತಾಲೆ ಸಾಹಿಬ್ ಸೆರಾಲಿಯೋನ್‌ನಲ್ಲಿ ಮುರಬ್ಬಿಯಾಗಿದ್ದಾರೆ. ಅವರು ಕ್ರಿಯಾ ಕ್ಷೇತ್ರದಲ್ಲಿದ್ದ ಕಾರಣ ಅವರ ಜನಾಝದಲ್ಲಿ ಭಾಗವಹಿಸಲು ಸಾಧ್ಯವಾಗಲಿಲ್ಲ.

ಉಸ್ಮಾನ್ ಸಾಹಿಬ್ ಮುರಬ್ಬಿ ಸಿಲ್‌ಸಿಲಾ ಬರೆಯುತ್ತಾರೆ: ನಮ್ಮ ತಂದೆ ವೃತ್ತಿಯಲ್ಲಿ ಶಿಕ್ಷಕರಾಗಿದ್ದರು. 1963 ರಲ್ಲಿ, ಹಝ್ರತ್ ಮುಸ್ಲೆಹ್ ಮೌಊದ್(ರ) ಅವರ ಅಭಿಯಾನಕ್ಕೆ ಮುಂದಾಗಿ ಬಶೀರಾಬಾದ್ ಸಿಂಧ್‌ಗೆ ವಲಸೆ ಬಂದರು ಮತ್ತು ತಾಲೀಮುಲ್ ಇಸ್ಲಾಂ ಹೈಸ್ಕೂಲ್‌ನಲ್ಲಿ ಅರಬಿ ಭಾಷೆಯನ್ನು ಬೋಧಿಸಲು ನಿಯೋಜಿಸಲ್ಪಟ್ಟರು. ಸಿಂಧ್ ವಲಸೆಯ ಮೊದಲು ದಾರುಲ್ ರಹಮತ್ ಘರ್ಬಿಯಲ್ಲಿ ಬಶೀರಾಬಾದ್‌ನಲ್ಲಿ ವಾಸಿಸುತ್ತಿದ್ದರು. ಅವರು ಹಝ್ರತ್ ಮೌಲಾನಾ ಗುಲಾಂ ರಸೂಲ್ ಸಾಹಿಬ್ ರಾಜಿಕಿ(ರ) ಅವರನ್ನು ತುಂಬಾ ಇಷ್ಟಪಡುತ್ತಿದ್ದರು. ಮೌಲಾನಾ ರಾಜಿಕಿ ಸಾಹಿಬ್ ಅವರು ನನ್ನ ತಂದೆಯನ್ನು ಅವರ ಮಗ ಎಂದು ಕರೆಯುತ್ತಿದ್ದರು ಮತ್ತು ಅವರ ಒಳ್ಳೆಯ ಸ್ವಭಾವದಿಂದಾಗಿ ಅವರು ಅವರನ್ನು ತುಂಬಾ ಪ್ರೀತಿಯಿಂದ ನಡೆಸಿಕೊಳ್ಳುತ್ತಿದ್ದರು ಎಂದು ಹೇಳುತ್ತಾರೆ. ಮೌಲ್ವಿ ಸಾಹಿಬ್ ಅವರಿಂದ ತಮ್ಮ ವೈಯುಕ್ತಿಕ ಕೆಲಸಗಳನ್ನು ಸಹ ಮಾಡಿಸಿಕೊಳ್ಳುತ್ತಿದ್ದರು ಎಂದು ಅವರು ಬರೆದಿದ್ದಾರೆ. ಮೌಲಾನಾ ರಾಜಿಕಿ ಸಾಹಿಬ್ ಅವರಿಗೆ ಪ್ರಾರ್ಥನೆಯ ಉದ್ದೇಶದಿಂದ ಯಾರಾದರೂ ಕಾಣಿಕೆಯಾಗಿ ಹಣವನ್ನು ನೀಡಿದಾಗ, ಅವರು ನನ್ನ ತಂದೆಗೆ ಕರೆ ಮಾಡಿ ಈ ಹಣವನ್ನು ದಾರುಲ್-ಜಿಯಾಫತ್‌ನಲ್ಲಿ ಜಮಾ ಮಾಡಿ ರಸೀದಿಯನ್ನು ತರಲು ಹೇಳುತ್ತಿದ್ದರು. ಚಂದದಲ್ಲಿ ಹಣವನ್ನು ನೀಡುತ್ತಿದ್ದರು. ಅವರು ಹೇಳುತ್ತಾರೆ: ಬೇಸಿಗೆಯಲ್ಲಿ ಒಂದು ದಿನ ಹಝ್ರತ್ ಮೌಲಾನಾ ರಾಜಿಕಿ ಸಾಹಿಬ್ ಮನೆಗೆ ಬಂದು ಬಾಗಿಲು ತಟ್ಟಿದರು. ನಮ್ಮ ತಂದೆ ಹೊರಗೆ ಬಂದರು. ಅವರು ಮೌಲಾನಾ ಸಾಹೇಬರನ್ನು ಕೇಳಿದರು, ನೀವು ಯಾಕೆ ಇಷ್ಟು ಬಿಸಿಯಲ್ಲಿ ಬಂದಿದ್ದೀರಿ. ನನ್ನನ್ನು ಕರೆದಿದ್ದರೆ ನಾನು ಹಾಜರಾಗುತ್ತಿದ್ದೆ. ಅದಕ್ಕೆ ಮೌಲ್ವಿ ಸಾಹೇಬರು ನಮ್ಮ ತಂದೆಗೆ ಹೇಳಿದರು: ನಿಮಗೆ ಹಣ ಬೇಕಾದರೆ ನೀವು ಹೇಳಬೇಕಾಗಿತ್ತು. ಮುಂದೆ ಹಝ್ರತ್ ಮೌಲಾನಾ ರಾಜಿಕಿ(ರ) ಸಾಹಿಬ್ ಅವರು ಹೇಳಿದರು: ಸರ್ವಶಕ್ತನಾದ ಅಲ್ಲಾಹನು ಸಾದತ್ತಿಗೆ ಹಣದ ಅವಶ್ಯಕತೆ ಇದೆ ಹೋಗಿ ಅವನಿಗೆ ಹಣ ನೀಡು ಎಂದು ನನಗೆ ಆದೇಶಿಸಿದ್ದಾನೆ. ನಂತರ ಹಝ್ರತ್ ಮೌಲಾನಾ ರಾಜಿಕಿ ಸಾಹೇಬರು ತಮ್ಮ ಜೇಬಿನಿಂದ ರೂಪಾಯಿಗಳನ್ನು ತೆಗೆದು ಅವರಿಗೆ ಕೊಟ್ಟು ಹೋದರು. ಈ ರೀತಿಯಾಗಿ, ಅವರು ಸರ್ವಶಕ್ತನಾದ ಅಲ್ಲಾಹನೊಂದಿಗಿನ ಸಂಬಂಧವನ್ನು ಹೊಂದಿದ್ದರು, ಹೀಗೆ ಅದು ಅವರ ಇನ್ನೊಬ್ಬ ಒಳ್ಳೆಯ ದಾಸನ ಹೃದಯದಲ್ಲಿ ಹೋಗಿ ಆತನಿಗೆ ಸಹಾಯ ಮಾಡುವಂತೆ ಮಾಡಿತು.

ಖಿಲಾಫತ್‌ಗೆ ವಿಧೇಯತೆಯ ಅವರ ಗುಣವು ಅಸೂಯೆ ಹುಟ್ಟಿಸುವಂತಿತ್ತು. ಮುರಬ್ಬಿ ಸಾಹಿಬ್ ಹೇಳುವಂತೆ ಕಳೆದ ದಿನಗಳ ಮುಂಚೆ ನಾನು ರಜೆ ತೆಗೆದುಕೊಂಡು ಪಾಕಿಸ್ತಾನಕ್ಕೆ ಅವರನ್ನು ಭೇಟಿಯಾಗಲು ಹೋದೆ. ಅವರ ಅವಸ್ಥೆ ನೋಡಿದ ಮೇಲೆ ನನಗೆ ಸೂಕ್ತ ಎನಿಸಿದರೆ ಇನ್ನು ರಜೆ ಹಾಕಬೇಕು ಎಂದಿದ್ದೆ, ಅದಕ್ಕೆ ಅವರು ಮುಂದೆ ಇಂತಹ ಆಲೋಚನೆ ಬೇಡ ಎಂದು ಬಹಳ ಕಠೋರವಾಗಿ ಹೇಳಿದರು. ಅದನ್ನು ನಿಮ್ಮ ನಾಲಿಗೆಗೆ ತರಬೇಡಿ. ಖಲೀಫರು ನಿಮ್ಮನ್ನು ಒಂದು ಜವಾಬ್ದಾರಿಯನ್ನು ವಹಿಸಿದ್ದಾರೆ, ಅಲ್ಲಿ ಕುಳಿತು ನಿಮ್ಮ ಕೊನೆಯ ಉಸಿರು ಇರುವವರೆಗೂ ಜಮಾಅತ್ ಅನ್ನು ಸೇವೆ ಮಾಡಿ ಮತ್ತು ರಕ್ಷಿಸಿ. ಅವರು ತಮ್ಮ ಒಡಹುಟ್ಟಿದವರಿಗೆ ಅವರು ಪ್ರಯಾಣಿಸುವಾಗಲೆಲ್ಲಾ ದುರೂದ್ ಷರೀಫ್ ಮತ್ತು **ಲಾ ಹೌಲ ವಲಾ ಖುವ್ವತ ಇಲ್ಲಾ ಬಿಲ್ಲಾಹ್** ಅನ್ನು ಪಠಿಸುವಂತೆ ಸಲಹೆ ನೀಡುತ್ತಿದ್ದರು.

ಅವರು ಮುಬಾಷರ್ ಗೊಂಡಲ್ ಸಾಹಿಬ್ ಅವರನ್ನು ಉಲ್ಲೇಖಿಸಿ ತಮ್ಮ ಒಂದು ಘಟನೆಯನ್ನು ಬರೆದಿದ್ದಾರೆ, ಅವರು ಬಿ.ಇಡಿ ಪರೀಕ್ಷೆಯನ್ನು ನೀಡುವಾಗ, ಅರೇಬಿಕ್ ಪೇಪರ್ ಸಾಕಷ್ಟು ಕಷ್ಟಕರವಾಗಿತ್ತು ಮತ್ತು ಕೆಲವು ವಿಷಯಗಳು ಪಠ್ಯಕ್ರಮದಿಂದ ಹೊರಗಿದ್ದವು, ಅವರು ಹೇಳುತ್ತಾರೆ: ನಮ್ಮ ತಂದೆಯು ಸ್ವಲ್ಪ ಸಮಯದ ನಂತರ ಒಂದು ಹೆಚ್ಚುವರಿಯಾಗಿ ಹಾಳೆಯನ್ನು ತೆಗೆದುಕೊಂಡು ಬರೆಯುತ್ತಿದ್ದರು. ತದನಂತರ ಅವರು ಮತ್ತೆ ಹಾಳೆಗಳನ್ನು ತೆಗೆದುಕೊಳ್ಳುತ್ತಿದ್ದರು. ಹೆಚ್ಚು ಷೀಟ್‌ಗಳನ್ನು ತೆಗೆದುಕೊಳ್ಳುವುದನ್ನು ಮುಂದುವರಿಸಿದರು. ಸಂಗಡಿಗರು ಅವರಿಗೆ ಹೇಳಿದರು ನಮಗೆ ನಿಡಿರುವ ಪೇಪರ್‌ಗಳೆ ಮುಗುಯಲಿಲ್ಲ ನೀವು ಅದೇನು ಬರೆಯುತ್ತಿದ್ದೀರಿ ಎಂದು ವಿಚಾರಿಸಿದರು. ಅದಕ್ಕೆ ಅವರು ನನಗೆ ಬಂದದ್ದನ್ನು ನಾನು ಬರೆದಿದ್ದೇನೆ ಎಂದು ಉತ್ತರಿಸಿದರು. ತದನಂತರ, ನಾನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಯಾ ಐನಾ ಫೈಝಿಲ್ಲಾಹಿ ವಲ್ ಇರ್ಫಾನಿ ಖಸೀದದ ಎಪ್ಪತ್ತು ಪದ್ಯಗಳನ್ನು ಸಹ ಬರೆದಿದ್ದೇನೆ, ಆದ್ದರಿಂದ ಅವುಗಳನ್ನು ಓದುವವರಿಗೆ ಕನಿಷ್ಠ ತಬ್ಲೀಗ್ ಆದರು ಆಗುತ್ತದೆ ಎಂದರು. ಪಾಸಾಗುತ್ತೇನೊ ಇಲ್ಲವೊ ನನಗೆ ತಿಳಿದಿಲ್ಲ. ಕನಿಷ್ಠಪಕ್ಷ ಕವನವನ್ನು ಓದುವ ಮೂಲಕ, ಇದು ಅಹ್ಮದಿ ಬರೆದಿದ್ದಾರೆ ಎಂದು ಭಾವಿಸುತ್ತಾರೆ, ಮತ್ತು ನಂತರ ಅವರು ಸಂಶೋಧನೆ ಮಾಡುತ್ತಾರೆ ಮತ್ತು ಈ ಅರ್ಥದಲ್ಲಿ ಉಪದೇಶದ ಮಾರ್ಗವು ತೆರೆದುಕೊಳ್ಳುತ್ತದೆ. ಆದಾಗ್ಯೂ, ಆ ಪರೀಕ್ಷೆಯಲ್ಲಿ ಕೇವಲ ಮೂರು ಜನರು ಉತ್ತೀರ್ಣರಾಗಿದ್ದಾರೆ ಮತ್ತು ಅವರ ತಂದೆಯು ಅವರಲ್ಲಿ ಒಬ್ಬರಾಗಿದ್ದರು. ಅವರು ಹೇಳುತ್ತಾರೆ ಇದು ಕೇವಲ ಸರ್ವಶಕ್ತನಾದ ಅಲ್ಲಾಹನ ಅನುಗ್ರಹವಾಗಿದೆ ಮತ್ತು ಖಸೀದದ ಅನುಗ್ರಹವಾಗಿದೆ ಎಂದು ಅವರು ಹೇಳುತ್ತಾರೆ.

ನವಾಫಿಲ್, ಆರಾಧನೆ ಮತ್ತು ಉಪವಾಸಗಳನ್ನು ಆಗಾಗ್ಗೆ ಅನುಷ್ಠಿಸುತ್ತಿದ್ದರು. ಪವಿತ್ರ ಖುರ್‌ಆನ್‌ನ ಪ್ರೀತಿ ಮತ್ತು ಪಠಣದ ಬಗ್ಗೆ ಅವರಿಗೆ ಹೆಚ್ಚಿನ ಉತ್ಸಾಹವಿತ್ತು. ಪವಿತ್ರ ಖುರ್‌ಆನ್‌ನ ಕೆಲವು ಸೂರಾಗಳನ್ನು ಯಾವಾಗಲೂ ಗುನುಗುವುದನ್ನು ಕೇಳಲಾಗುತ್ತಿತ್ತು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಖಾಸಿದಾವನ್ನು ಯಾವಾಗಲೂ ಪಠಿಸುವುದನ್ನು ನಾನು ಕೇಳುತ್ತಿದ್ದೆ. ಆಗಾಗ್ಗೆ, ಖಸಿದಾವನ್ನು ಓದುವಾಗ, ಅವರ ಕಣ್ಣುಗಳಿಂದ ಕಣ್ಣೀರು ಹರಿಯುತ್ತಿತ್ತು. ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾವ್ ಅವರ ಪುಸ್ತಕಗಳನ್ನು ಅಧ್ಯಯನ ಮಾಡುತ್ತಿದ್ದರು ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಸಹಾಬೀಯರ ಕಥೆಗಳನ್ನು ಹೇಳುತ್ತಿದ್ದರು. ವಿಶೇಷವಾಗಿ ಹಝ್ರತ್ ಮೌಲಾನಾ ಗುಲಾಮ್ ರಸೂಲ್ ರಾಜಿಕಿ ಸಾಹಿಬ್(ರ) ಅವರು ತಮ್ಮ ವಿದ್ಯಾರ್ಥಿಗಳಿಗೆ ಕಥೆಗಳನ್ನು ಹೇಳುತ್ತಿದ್ದರು. ಭಾವೋದ್ರಿಕ್ತ ಬೋಧಕರಾಗಿದ್ದರು ಮತ್ತು ಶ್ರದ್ಧೆಯ ವ್ಯಕ್ತಿತ್ವವನ್ನು ಹೊಂದಿದ್ದರು. ಜಮಾಅತ್ತಿನ ಕಾರ್ಯಕ್ರಮಗಳಲ್ಲಿ ಸದಾ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ಸರ್ವಶಕ್ತನಾದ ಅಲ್ಲಾಹನು ಕರುಣೆ ಮತ್ತು ಮಗ್‌ಫಿರತ್ ಅನ್ನು ದಯಪಾಲಿಸಲಿ. ಪದವಿಗಳನ್ನು ವರ್ಧಿಸಲಿ ಮತ್ತು ಅವರ ಮಕ್ಕಳಿಗೆ ಅವರ ಒಳ್ಳೆಯ ಕಾರ್ಯಗಳನ್ನು ಮುಂದುವರಿಸಲು ಸೌಭಾಗ್ಯ ನೀಡಲಿ. ಆಮೀನ್

**(ಅಲ್-ಫಝಲ್ ಇಂಟರ್‌ನ್ಯಾಶನಲ್, ಆಗಸ್ಟ್ 2, 2024, ಪುಟ 2-6)**

-------------*****-------------

***129 ನೇ ಜಲ್ಸಾ ಸಾಲಾನ ಖಾದಿಯಾನ್***

***27, 28, 29 ಡಿಸೆಂಬರ್ 2024ರಂದು ಆಯೋಜಿಸಲಾಗುವುದು***

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 129ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 27, 28 ಮತ್ತು 29ನೇ ಡಿಸೆಂಬರ್ 2024 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮಲ್ಲಾಹ್.**

**(ನಾಝಿರ್ ಇಸ್ಲಾಹ್-ವ-ಇರ್‌ಶಾದ್ ಖಾದಿಯಾನ್)**

# ಖುತ್‌ಬ ಜುಮುಅ

ಹಝ್ರತ್ ಪೈಗಂಬರ್(ಸ)ರು ಪ್ರಸಿದ್ಧ ಗೋತ್ರ ಬನೂ ಮುಸ್ತಲಖ್‌ನ ಸರದಾರನ ಪುತ್ರಿಯನ್ನು ವಿವಾಹವಾಗುತ್ತಿರುವುದನ್ನು ಸಹಾಬಿಯರು ನೋಡಿದಾಗ ಅವರೆಲ್ಲರು ಹಝ್ರತ್ ಪೈಗಂಬರ್(ಸ)ರ ಪತ್ನಿಯ ಮನೆಯವರನ್ನು ತಮ್ಮ ಕೈಗಳಲ್ಲಿ ಬಂಧಿಯಾಗಿ ಇಡುವುದನ್ನು ಇಷ್ಟಪಡಲಿಲ್ಲ. ಆದ್ದರಿಂದ ನೂರು ಕುಟುಂಬದವರನ್ನು ಎಂದರೆ ನೂರಾರು ಕೈದಿಗಳನ್ನು ಪರಿಹಾರಧನವನ್ನು ಪಡೆಯದೇ ಒಂದೇ ಕ್ಷಣದಲ್ಲಿ ಸ್ವತಂತ್ರಗೊಳಿಸಲಾಯಿತು.

**ಬನೂ ಮುಸ್ತಲಕ್ ಯುದ್ಧಕ್ಕೆ ಕಾರಣಗಳು ಹಾಗೂ ಘಟನೆಗಳ ವಿವರಾತ್ಮಕ ಪ್ರಸ್ತಾವನೆ ಹಾಗೂ ಮುಹರ್ರಮ್ ಮಾಸದಲ್ಲಿ ದರೂದೆ ಷರೀಫ್ ಪಠಿಸಲು ಹಾಗೂ ದುಆ ಮಾಡಲು ಕೋರಿಕೆ**

ಹಝ್ರತ್ ಪೈಗಂಬರ್(ಸ) ಈ ಯುದ್ಧದಿಂದ ವಿಜಯಿ ಮತ್ತು ಯಶಸ್ವಿಯಾಗಿ ಮರಳಿ ಬಂದರು.

ಮುಂದಿನ ಜುಮಾದಿಂದ ಬ್ರಿಟನಿನ ವಾರ್ಷಿಕ ಜಲ್ಸ ಆರಂಭವಾಗುವುದು. ಅದಕ್ಕಾಗಿಯೂ ದುಆ ಮಾಡಿರಿ. ಅಲ್ಲಾಹನು ಎಲ್ಲ ವಿಧದಲ್ಲೂ ಅನುಗ್ರಹೀತಗೊಳಿಸಲಿ. ಎಲ್ಲ ಕಾರ್ಯಕರ್ತರಿಗೂ ಉನ್ನತ ಸ್ವಭಾವಗುಣಗಳನ್ನು ತೋರಿಸುತ್ತಾ ತ್ಯಾಗ ಮನೋಭಾವದಿಂದ ತಮ್ಮ ಕರ್ತವ್ಯಗಳನ್ನು ನೆರವೇರಿಸಲು ಅಲ್ಲಾಹನು ಸೌಭಾಗ್ಯ ನೀಡಲಿ. ಆಗಮಿಸಿರುವ ಮತ್ತು ಯಾತ್ರೆಯಲ್ಲಿರುವ ಅತಿಥಿಗಳನ್ನು ಅಲ್ಲಾಹನು ಸಂರಕ್ಷಿಸಲಿ. ಆಮೀನ್.

ಇತ್ತೀಚಿಕೆ ನಿಧನರಾದ ಮೂರು ದಿವಂಗತರು ಸನ್ಮಾನ್ಯ ಸಲೀಮಾ ಬೇಗಮ್ ಸಾಹಿಬಾ, ಸನ್ಮಾನ್ಯ ನೂರುಲ್ ಹಖ್ ಮಝ್‌ಹರ್ ಸಾಹಿಬ್ ಹಾಗೂ ಮಾನ್ಯ ಅಮತುಲ್ ಹಫೀಝ್ ನಿಗ್‌ಹತ್ ಸಾಹಿಬಾ ಅವರೆಲ್ಲರ ಸದ್ಗುಣಗಳ ಪ್ರಸ್ತಾವನೆ ಹಾಗೂ ನಮಾಝೆ ಜನಾಝ ನಿರ್ವಹಣೆ

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **'ಮಸ್ಜಿದ್ ಮುಬಾರಕ್'** ನಿಂದ **19-07-2024** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔

اِيَّاكَ نَعْبُدُ وَاِيَّاكَ نَسْتَعِيْنُ۔ اِهْدِنَا الصِّرَاطَ الْمُسْتَقِيْمَ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

ಬನೂ ಮುಸ್ತಲಖ್ ಯುದ್ಧದ ಪ್ರಸ್ತಾಪ ಕಳೆದ ಖುತ್ಬದಲ್ಲಿ ನಡೆಯುತ್ತಿತ್ತು. ಇದರ ಇನ್ನಷ್ಟು ವಿವರಣೆ ಹದೀಸುಗಳಲ್ಲಿ ಮತ್ತು ಚರಿತ್ರೆಗಳಲ್ಲಿ ಲಭಿಸುತ್ತದೆ.

ಸಹೀಹ್ ಬುಖಾರಿಯಲ್ಲಿ ಇದನ್ನು ವಿವರಿಸುತ್ತಾ ಹೀಗೆ ಬರೆಯಲಾಗಿದೆ: ಹಝ್ರತ್ ಪೈಗಂಬರ್(ಸ) ಬನೂ ಮುಸ್ತಲಖ್ ಗೋತ್ರದವರ ಮೇಲೆ ದಾಳಿ ನಡೆಸಿದಾಗ ಅವರು ಅಜಾಗರೂಕರಾಗಿದ್ದರು. ಮತ್ತು ಅವರರು ತಮ್ಮ ಜಾನುವಾರುಗಳನ್ನು ಚಿಲುಮೆಯಲ್ಲಿ ನೀರುಣಿಸುತ್ತಿದ್ದರು ಮತ್ತು ಹಝ್ರತ್ ಪೈಗಂಬರ್(ಸ) ಅವರಲ್ಲಿ ಯುದ್ಧವಾಡಿದವರನ್ನು ವಧಿಸಿದರು ಮತ್ತು ಅವರ ಮಕ್ಕಳನ್ನು ಬಂಧಿಸಲ್ಪಟ್ಟರು ಮತ್ತು ಅದೇ ದಿನ ಜುವೈರಿಯಾ(ರ) ಹಝ್ರತ್ ಪೈಗಂಬರ್(ಸ)ರನ್ನು ಭೇಟಿಯಾದರು. ವರದಿಗಾರರು ಹೇಳುತ್ತಾರೆ ಈ ಘಟನೆಯನ್ನು ಹಝ್ರತ್ ಅಬ್ದುಲ್ಲಾ ಬಿನ್ ಉಮರ್(ರ) ಅವರು ನನಗೆ ತಿಳಿಸಿದರು ಮತ್ತು ಅವರು ಆ ಸೈನ್ಯದಲ್ಲಿದ್ದರು. (ಸಹೀಹ್ ಅಲ್-ಬುಖಾರಿ, ಕಿತಾಬುಲ್ ಅತಕ್, ಹದೀಸ್-2541)

ಇತಿಹಾಸಗಾರರು ಮತ್ತು ಜೀವನಚರಿತ್ರೆಗಾರರು, ಬನೂ ಮುಸ್ತಾಲಿಕ್ ಅವರ ಅಭಿಯಾನದಲ್ಲಿ ಈ ದಾಳಿಯ ವಿವರಗಳನ್ನು ವಿವರಿಸುತ್ತಾರೆ, ಬುಖಾರಿ ಸಂಪ್ರದಾಯಗಳಲ್ಲಿ ಬನೂ ಮುಸ್ತಲಖ್‌ನ ದಾಳಿಯ ಪರಿಸ್ಥಿತಿಯ ವಿವರಣೆಯಲ್ಲಿ ಭಿನ್ನಾಭಿಪ್ರಾಯವಿದೆ ಎಂಬ ರೀತಿಯಲ್ಲಿ ಎರಡೂ ವರದಿಗಳನ್ನು ವಿವರಿಸುತ್ತಾರೆ, ಏಕೆಂದರೆ ಬುಖಾರಿಯ ವರದಿಯ ಪ್ರಕಾರ ಮುಸ್ಲಿಮರು ಹಠಾತ್ತನೆ ಅಜಾಗರೂಕ ಸ್ಥಿತಿಯಲ್ಲಿ ಆಕ್ರಮಣ ಮಾಡಿದರು ಮತ್ತು ಈ ವರದಿಗಳ ವ್ಯತ್ಯಾಸವು ಬುಖಾರಿಯ ವ್ಯಾಖ್ಯಾನಕಾರ ಅಲ್ಲಾಮಾ ಇಬ್ನ್ ಹಜರ್ ಅವರ ಮುಂದೆಯೂ ಇತ್ತು. ಆದ್ದರಿಂದ, ಅಲ್ಲಾಮಾ ಇಬ್ನ್ ಹಜರ್, ಎರಡೂ ರೀತಿಯ ವರದಿಗಳನ್ನು ಅನ್ವಯಿಸಿ ಹೀಗೆ ಬರೆದಿದ್ದಾರೆ: ಅಂದರೆ ಇಸ್ಲಾಮಿನ ಸೈನ್ಯವು ಚಿಲುಮೆಯಲ್ಲಿ ಅವರನ್ನು ಸುತ್ತುವರೆದಿರುವ ಸಾಧ್ಯತೆಯಿದೆ ಆಗ ಅವರು ಸ್ವಲ್ಪ ಸಮಯದವರೆಗೆ ಪರಸ್ಪರ ದೃಢವಾಗಿ ಅಲ್ಲಿಯೇ ನೆಲೆನಿಂತಿದ್ದರು, ನಂತರ ಅವರ ನಡುವೆ ಯುದ್ಧವೂ ನಡೆಯಿತು. ಮುಸ್ಲಿಮರು ವಿಜಯಶಾಲಿಯಾದರು ಮತ್ತು ಬನೂ ಮುಸ್ತಲಖ್ ಸೋಲಿಸಲ್ಪಟ್ಟರು. (ಫತಹ್ ಅಲ್-ಬಾರಿ, ಸಂಪುಟ-7, ಪುಟ-547, ಓಲ್ಡ್ ಲೈಬ್ರರಿ ಕರಾಚಿಯಿಂದ ಆಯ್ದುಕೊಳ್ಳಲಾಗಿದೆ) ಅಂದರೆ, ಮೊದಲು ದಾಳಿ ನಡೆದಾಗ, ಇಮಾಮ್ ಬುಖಾರಿ ವಿವರಿಸಿದಂತೆ ಅವರು ಅಜಾಗೃತ ಸ್ಥಿತಿಯಲ್ಲಿದ್ದರು, ಆದರೆ ನಂತರ ಅವರು ಸಾಲಾಗಿ ನಿಂತರು, ಇತ್ಯಾದಿ. ಮತ್ತು ಜೀವನಚರಿತ್ರೆಗಾರರು ವಿವರಿಸಿದಂತೆ ಎರಡೂ ಪಕ್ಷಗಳ ನಡುವೆ ಯುದ್ಧ ಪ್ರಾರಂಭವಾಯಿತು.

ಈ ನಿಟ್ಟಿನಲ್ಲಿ, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಅವರು ಸೀರತ್ ಖಾಮನ್ನಬೀಯೀನ್(ಸ)ನಲ್ಲಿ ಈ ಎರಡು ಘಟನೆಗಳನ್ನು ಅನ್ವಯಿಸಿದ್ದಾರೆ, ಅದು ಈ ಕೆಳಗಿನಂತಿದೆ. ನೀವು ಜೀವನಚರಿತ್ರೆಕಾರರ ಮತ್ತು ಸಹೀಹ್ ಬುಖಾರಿಯ ವರದಿಯನ್ನು ಉಲ್ಲೇಖಿಸಿ ಹೀಗೆ ಬರೆದಿದ್ದಾರೆ:

ಈ ಯುದ್ಧದ ಕುರಿತು ಸಹೀಹ್ ಬುಖಾರಿಯಲ್ಲಿ ಹೀಗೊಂದು ವರದಿಯಿದೆ: ಬನೂ ಮುಸ್ತಲಖ್ ಗೋತ್ರದವರು ಅಜಾಗರೂಕರಾಗಿ ಇದ್ದ ಸ್ಥಿತಿಯಲ್ಲಿ ಮತ್ತು ತಮ್ಮ ಜಾನುವಾರುಗಳಿಗೆ ನೀರು ಕುಡಿಸುತ್ತಿದ್ದ ವೇಳೆ ಹಝ್ರತ್ ಪೈಗಂಬರ್(ಸ) ಅವರ ಮೇಲೆ ದಾಳಿ ನಡೆಸಿದರು. ಚಿಂತಿಸಿ ನೋಡುವುದಾದರೆ ಈ ವರದಿ ಚರಿತ್ರೆಗಾರರ ವರದಿಗೆ ವಿರುದ್ಧವಲ್ಲ. ಸತ್ಯದಲ್ಲಿ ಈ ಎರಡು ವರದಿಗಳು ಎರಡು ಸಮಯಗಳಿಗೆ ಸಂಬಂಧಿಸಿಯಾಗಿವೆ. ಘಟನೆಯೇನೆಂದರೆ, ಇಸ್ಲಾಮಿನ ಸೇನೆ ಬನೂ ಮುಸ್ತಲಖ್ ಗೋತ್ರದ ಸಮೀಪಕ್ಕೆ ತಲುಪಿದಾಗ, ಇಸ್ಲಾಮಿನ ಸೇನೆ ಬರುವುದರ ಬಗ್ಗೆ ಅವರಿಗೆ ಖಂಡಿತವಾಗಿಯೂ ಅರಿವಿತ್ತಾದರೂ ಮುಸ್ಲಿಮರು ಇಷ್ಟು ಸಮೀಪಕ್ಕೆ ತಲುಪಿದ್ದಾರೆ ಎಂಬ ಸಂಗತಿ ಅವರಿಗೆ ಗೊತ್ತಿರಲಿಲ್ಲ. ಆದ್ದರಿಂದ ಅವರು ಸಮಾಧಾನದಿಂದ ಮತ್ತು ಯಾವುದೇ ಸಿದ್ಧತೆಯಿಲ್ಲದೇ ಕುಳಿತುಕೊಂಡಿದ್ದರು. ಇದೇ ಸ್ಥಿತಿಯ ಬಗ್ಗೆ ಬುಖಾರಿಯ ವರದಿಯಲ್ಲಿ ಸೂಚಿಸಲಾಗಿದೆ. ಆದರೆ ಅವರಿಗೆ ಇಸ್ಲಾಮಿನ ಸೇನೆ ತಲುಪಿದ ಬಗ್ಗೆ ಗೊತ್ತಾದಾಗ ಹಿಂದಿನ ಸ್ಥಾಯಿಯಾದ ತಯಾರಿಯ ಅನುಸಾರ ಬೇಗನೇ ಪಂಕ್ತಿ ಮಾಡಿ ಯುದ್ಧಕ್ಕಾಗಿ ತಯಾರಾದರು. ಈ ಸ್ಥಿತಿಯ ಬಗ್ಗೆ ಚರಿತ್ರೆಗಾರರು ಬರೆದಿರುವರು. ಅಲ್ಲಾಮಾ ಇಬ್ನ್ ಹಜರ್ ಮತ್ತು ಇತರ ಕೆಲವು ಸಂಶೋಧಕರು ಈ ವ್ಯತ್ಯಾಸದ ಈ ವ್ಯಾಖ್ಯಾನವನ್ನು ನೀಡಿದ್ದಾರೆ ಮತ್ತು ಇದು ಸರಿಯಾಗಿದೆ ಎಂದು ತೋರುತ್ತದೆ. (ಸೀರತ್ ಖಾತಮನ್ನಬಿಯೀನ್(ಸ), ಹಝ್ರತ್ ಸಾಹಿಬ್‌ಝಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ-559)

ಈ ಯುದ್ಧದಲ್ಲಿ ಒಬ್ಬರೇ ಸಹಾಬಿ ಹಝ್ರತ್ ಹಿಶಾನ್ ಬಿನ್ ಸುಬಾಬ(ರ) ಶಹೀದ್ ಆಗಿದ್ದರು. ಅವರ ಘಟನೆಯಲ್ಲಿ ಹೀಗೆ ಬರೆಯಲಾಗಿದೆ: ಅದು ಕೂಡ ಪ್ರಮಾದದಿಂದ ಆಗಿತ್ತು. ಅವರಿಗೆ ಓರ್ವ ಅನ್ಸಾರಿ ಸಹಾಬಿ ಹಝ್ರತ್ ಔಸ್(ರ) ಅವರನ್ನು ಕಾಫಿರ್ ಎಂದು ಭಾವಿಸಿ ಶಹೀದ್ ಮಾಡಿದ್ದರು. ಹಿಶಾಮ್(ರ) ಹಝ್ರತ್ ಉಬಾದಾ ಬಿನ್ ಸಮಿತ್(ರ) ಅವರ ಗೋತ್ರದವರಾಗಿದ್ದರು. ಹಿಶಾಮ್ ಬಿನ್

ಸುಬಾಬಾ(ರ) ಅವರ ಹುತಾತ್ಮತೆಯ ಘಟನೆಯು ಹೇಗೆ ಸಂಭವಿಸಿತು ಎಂದರೆ ಇವರು ಶತ್ರುವನ್ನು ಹುಡುಕಲು ಹೊರಟಿದ್ದರು. ಅವರು ಹಿಂತಿರುಗಿ ಬರುವಾಗ ಜೋರಾಗಿ ಬಿರುಗಾಳಿ ಬೀಸುತ್ತಿತ್ತು ಮತ್ತು ಗಾಳಿಯು ಧೂಳಿನಿಂದ ತುಂಬಿತ್ತು. ಈ ಪರಿಸ್ಥಿತಿಯಲ್ಲಿ, ಅವರು ಅನ್ಸಾರಿ ಸಹಾಬಿ ಹಝ್ರತ್ ಔಸ್(ರ) ಅವರ ಮುಂದೆ ಬಂದರು. ಅವರಿಗೆ ಅವರನ್ನು ಗುರುತಿಸಲಾಗಲಿಲ್ಲ. ಅವರು ಕಾಫಿರ್ (ಅವಿಶ್ವಾಸಿ) ಎಂದು ಭಾವಿಸಿ ಹಿಶಾಮ್ ಮೇಲೆ ದಾಳಿ ಮಾಡಿ ಶಹೀದ್ ಮಾಡಿದರು. ಹಿಶಾಮ್‌ರ ಸಹೋದರ, ಮಕ್ಕಾದಲ್ಲಿ ವಾಸಿಸುತ್ತಿದ್ದರು ಅವರ ಹೆಸರು ಮಿಕೈಸ್ ಬಿನ್ ಸುಬಾಬಹ್ ಎಂದಾಗಿತ್ತು ಅವರು ಮದೀನಾಗೆ ಬಂದು ಇಸ್ಲಾಂ ಧರ್ಮವನ್ನು ಸ್ವೀಕರಿಸಿದರು ಮತ್ತು ಹಝ್ರತ್ ಪೈಗಂಬರ್(ಸ) ಅವರಿಗೆ ಪರಿಹಾರ ಧನವನ್ನು ನೀಡುವುದಾಗಿ ಕೇಳಿದರು ಅದಕ್ಕೆ ಹಝ್ರತ್ ಪೈಗಂಬರ್(ಸ)ರು ಹಿಶಾಮ್(ರ)ರ ಸಹೋದರ ಮಿಕೈಸ್ ಬಿನ್ ಸುಬಾಬಹ್ ಅವರನ್ನು ಪರಿಹಾರಧನವನ್ನು ನೀಡಿದರು. ಹಝ್ರತ್ ಔಸ್(ರ) ಅವರಿಂದ ಹಿಶಾಮ್(ರ) ಅವರ ಸಹೋದರ, ಮಿಕೈಸ್ ಬಿನ್ ಸುಬಾಬಾ ಪರಿಹಾರಧನವನ್ನು ಸ್ವೀಕರಿಸಿದರು, ಆದರೆ ಪರಿಹಾರಧನವನ್ನು ತೆಗೆದುಕೊಂಡ ನಂತರ, ಮಿಕೈಸ್ ತನ್ನ ಸಹೋದರನನ್ನು ಕೊಂದಿದ್ದಕ್ಕಾಗಿ ಹಝ್ರತ್ ಔಸ್(ರ) ಅವರನ್ನು ಕೊಂದು ಧರ್ಮಭ್ರಷ್ಟನಾಗಿ ಖುರೈಶರೊಂದಿಗೆ ಸೇರಿಕೊಂಡನು. ಇದು ಯೋಜಿಸಲಾಗಿದೆ ಎಂದು ತೋರುತ್ತದೆ. ಅರಬ್ಬರ ಸಾಮಾನ್ಯ ಸಂವಿಧಾನಕ್ಕೆ ವಿರುದ್ಧವಾದ ಈ ಬಂಡಾಯ ಮನೋಭಾವದ ಮೇಲೆ, ಪರಿಹಾರಧನವನ್ನು ತೆಗೆದುಕೊಂಡ ನಂತರವೂ ಅವನನ್ನು ಕೊಲ್ಲಿದ್ದರಿಂದ ಹಝ್ರತ್ ಪೈಗಂಬರ್(ಸ) ರವರು ಈ ಅನ್ಯಾಯದ ಹತ್ಯೆಗೆ ಪ್ರತೀಕಾರವಾಗಿ ಅವನನ್ನು ಕೊಲ್ಲಲು ನಿರ್ಧರಿಸಿದರು. ಆದ್ದರಿಂದ, ಸಹಬೀಯರಲ್ಲಿ ಒಬ್ಬರಾದ ನುಮೈಲಾ ಅವರು ಮಕ್ಕಾ ವಿಜಯದ ದಿನದಂದು ಮಿಕೈಸ್ ಅನ್ನು ವಧಿಸಿದರು. (ಸೀರತ್ ಇಬ್ನ್ ಹಿಶಾಮ್, ಪುಟ-248, ದಾರುಲ್-ಮಾರಿಫಾ, ಬೈರುತ್, 2000) (ಕಿತಾಬುಲ್-ಮುಘಾಝಿ, ಲಿಲ್-ವಾಕಿದಿ, ಸಂಪುಟ-1, ಪುಟಗಳು 407-408, ಆಲಂ ಅಲ್-ಕಿತಾಬ್, ಬೈರುತ್, 1984)

ಈ ಯುದ್ಧದ ಸಂದರ್ಭದಲ್ಲಿ ದೇವದೂತರುಗಳ ಬೆಂಬಲದ ಬಗ್ಗೆಯು ಸಹ ಉಲ್ಲೇಖಿಸಲಾಗಿದೆ. ಉಮ್ಮುಲ್ ಮುಅ್‌ಮಿನೀನ್ ಹಝ್ರತ್ ಜುವೈರಿಯ(ರ) ಹೇಳುತ್ತಾರೆ: ನಾವು ಮುರೈಸೀ ಯಲ್ಲಿ ಇದ್ದಾಗ ಹಝ್ರತ್ ಪೈಗಂಬರ್(ಸ) ನಮ್ಮ ಬಳಿಗೆ ಬಂದರು. ನಾನು ನನ್ನ ತಂದೆಯನ್ನು ಹೀಗೆ ಹೇಳುತ್ತಿರುವುದಾಗಿ ನಾನು ಆಲಿಸಿದ್ದೇನೆ: ಎಷ್ಟು ದೊಡ್ಡ ಸೈನ್ಯ ಆಗಮಿಸಿದೆ ಎಂದರೆ, ಅದನ್ನು ಎದುರಿಸಲು ನಮಗೆ ಸಾಮರ್ಥ್ಯವಿಲ್ಲ. ಹಝ್ರತ್ ಜುವೈರಿಯ(ರ) ಹೇಳುತ್ತಾರೆ: ನಾನು ಸ್ವತಃ ಎಷ್ಟು ಹೆಚ್ಚು ಜನರನ್ನು, ಆಯುಧಗಳನ್ನು ಮತ್ತು ಕುದುರೆಗಳನ್ನು ನೋಡಿದ್ದೆ ಎಂದರೆ, ಅದನ್ನು ನನಗೆ ವಿವರಿಸಲು ಸಾಧ್ಯವಿಲ್ಲ. ನಾನು ಇಸ್ಲಾಂ ಸ್ವೀಕಾರ ಮಾಡಿದ ನಂತರ ಹಝ್ರತ್ ಪೈಗಂಬರ್(ಸ) ನನ್ನೊಂದಿಗೆ ವಿವಾಹ ಮಾಡಿದರು. ನಾವು ಮರಳಿ ಬಂದಾಗ ನಾನು ನೋಡಿದ್ದೇನೆಂದರೆ, ಮುಸ್ಲಿಮರು ನನಗೆ ಹಿಂದಿನಂತೆ ಅಧಿಕವಿರುವುದಾಗಿ ತೋರುತ್ತಿರಲಿಲ್ಲ. ಅದು ಮುಶ್ರಿಕರ ಹೃದಯಗಳಲ್ಲಿ ಅಲ್ಲಾಹನು ಹಾಕುವ ಭಯವಾಗಿದೆ ಎಂದು ಆಗ ನನಗೆ ಗೊತ್ತಾಯಿತು. ನಂತರ ಇಸ್ಲಾಂಗೆ ಮತಾಂತರಗೊಂಡ ಬನೂ ಮುಸ್ತಲಖ್‌ನ ವ್ಯಕ್ತಿಯೊಬ್ಬರು ಹೇಳುತ್ತಿದ್ದರು, ನಾವು ಬಿಳಿ ಪುರುಷರು ಅಬ್ಲಾಕ್ ಅಂದರೆ ಕಪ್ಪು ಮತ್ತು ಬಿಳಿ ಕುದುರೆಗಳನ್ನು ಸವಾರಿ ಮಾಡುವುದನ್ನು ನೋಡಿದ್ದೇವೆ. ನಾವು ಅವರನ್ನು ಮೊದಲು ಅಥವಾ ನಂತರ ನೋಡಿಲ್ಲ.
(ಸೀರತ್ ಎನ್ಸೈಕ್ಲೋಪೀಡಿಯಾ, ಸಂಪುಟ-7, ಪುಟ-164, 165 ದಾರುಸ್ಸಲಾಮ್ ರಿಯಾದ್)

ಯುದ್ಧ ಸಂಪತ್ತಾಗಿ ಲಭಿಸಿದ ಒಂಟೆಗಳ ಸಂಖ್ಯೆ ಎರಡು ಸಾವಿರ, ಆಡುಗಳ ಸಂಖ್ಯೆ ಐದು ಸಾವಿರ ಆಗಿತ್ತು ಹಾಗೂ ಕೈದಿಗಳ ಸಂಖ್ಯೆ ಇನ್ನೂರು ಕುಟುಂಬಗಳನ್ನು ಒಳಗೊಂಡಿತ್ತು. (ಸಬ್ಲುಲ್ ಹುದಾ ವರ್‌ಶಾದ್, ಸಂಪುಟ-4, ಪುಟ-346, ದಅರುಲ್ ಕುತುಬ್ ಇಲ್‌ಮಿಯಾ ಬೈರುತ್)

ಕೆಲವು ಚರಿತ್ರೆಗಾರರು ಕೈದಿಗಳ ಸಂಖ್ಯೆ ಏಳು ನೂರಕ್ಕಿಂತ ಅಧಿಕವೆಂದೂ ಹೇಳಿರುವರು. (ಸೀರತ್ ಹಲಬೀಯಾ, ಸಂಪುಟ-2, ಪುಟ-379, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಹಝ್ರತ್ ಪೈಗಂಬರ್(ಸ) ಹಝ್ರತ್ ಬುರೈದ(ರ)ರನ್ನು ಆ ಕೈದಿಗಳ ಮೇಲ್ನೋಟಗಾರನನ್ನಾಗಿ ನೇಮಿಸಿದರು. ಅವರಲ್ಲಿದ್ದ ಎಲ್ಲಾ ಆಸ್ತಿ, ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಲಾಯಿತು. ಪ್ರಾಣಿಗಳನ್ನು ಓಡಿಸಿ ತರಲಾಯಿತು. ಹಝ್ರತ್ ಪೈಗಂಬರ್(ಸ) ಅವರು ತಮ್ಮ ಗುಲಾಮ ಹಝ್ರತ್ ಶುಕ್ರಾನ್(ರ) ಅವರನ್ನು ಮೇಲ್ವಿಚಾರಕರನ್ನಾಗಿ ಅವರ ಮೇಲೆ ನೇಮಿಸಿದರು. ಖುಮ್ಸ್ ಮತ್ತು ಮುಸ್ಲಿಮರ ಭಾಗಗಳ ಮೇಲ್ವಿಚಾರಕರಾಗಿ ಹಝ್ರತ್ ಮಹ್ಮಿಯಾ ಬಿನ್ ಜಾಝಾ(ರ) ಅವರನ್ನು ನೇಮಿಸಿದರು. ಹಝ್ರತ್ ಪೈಗಂಬರ್(ಸ) ಪೂರ್ತಿ ಯುದ್ಧ ಸಂಪತ್ತಿನಿಂದ ಐದನೇ ಒಂದು ಭಾಗವನ್ನು ಬೇರ್ಪಡಿಸಿದರು. ಅದು ಅಲ್ಲಾಹನ ಆದೇಶ ಪ್ರಕಾರ ಬೇರ್ಪಡಿಸಲಾಗುವ ಭಾಗವಾಗಿದೆ. ಅದನ್ನು ಅಲ್ಲಾಹನು, ಅಲ್ಲಾಹನ ಪ್ರವಾದಿ ಮತ್ತು ಪ್ರವಾದಿಯ ನಿಕಟ ಸಂಬಂಧಿಕರಿಗೆ ಹಾಗೂ ಇಸ್ಲಾಮಿನ ಸಾಮೂಹಿಕ ಅಗತ್ಯಗಳಿಗೆ ಬೇರ್ಪಡಿಸಲಾಗುತ್ತದೆ. ಕೈದಿಗಳನ್ನು ಜನರ ನಡುವೆ ಹಂಚಲಾಯಿತು ಮತ್ತು ಪ್ರಾಣಿಗಳು ಮತ್ತು ಕುರಿಗಳನ್ನು ಮತ್ತು ಎಲ್ಲಾ ಸರಕುಗಳನ್ನು ಸಹ ವಿತರಿಸಲಾಯಿತು. (ಕಿತಾಬುಲ್-ಮಘಾಜಿ, ಸಂಪುಟ-1, ಪುಟ-410, ಆಲಂ ಅಲ್-ಕಿತಾಬ್, ಬೈರುತ್, 1984) (ಸೀರತ್ ಖಾಮನ್ನಬಿಯೀನ್(ಸ), ಹಝ್ರತ್ ಸಾಹಿಬ್ಜಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂಎ, ಪುಟ-88)

ಹಝ್ರತ್ ಜುವೈರಿಯಾ(ರ) ರವರು ಹಝ್ರತ್ ಪೈಗಂಬರ್(ಸ.ಅ) ರ ವಿವಾಹಕ್ಕೆ ಬಂದ ಘಟನೆಯನ್ನು ನಾನು ಮೊದಲೇ ಹೇಳಿದಂತೆ ಬರೆಯಲಾಗಿದೆ.

"ಬನೂ ಮುಸ್ತಲಖ್ ಗೋತ್ರದ ಬಂಧಿಯಾದ ಜನರಲ್ಲಿ ಅವರ ಸರದಾರ ಹಾರಿಸ್ ಬಿನ್ ಅಬೀ ಝಿರಾರ್‌ನ ಪುತ್ರಿಯಾದ ಬರ್ರ ಕೂಡ ಇದ್ದರು. ಅವರ ಹೆಸರನ್ನು ಬದಲಾಯಿಸಿ ಹಝ್ರತ್ ಪೈಗಂಬರ್(ಸ) ಜುವೈರಿಯ ಎಂದು ಇಟ್ಟರು. ಅವರು ಮುರಾಸೀ ಯುದ್ಧದಲ್ಲಿ ವಧಿಸಲ್ಪಟ್ಟ ಮುಸಾಫಿ ಬಿನ್ ಸಫ್ವಾನ್‌ನೊಂದಿಗೆ ವಿವಾಹವಾಗಿದ್ದರು. ಈ ಖೈದಿಗಳನ್ನು ಹಝ್ರತ್ ಪೈಗಂಬರ್(ಸ) ಅವರು ನಿಯಮಗಳ ಪ್ರಕಾರ ಮುಸ್ಲಿಂ ಸೈನಿಕರಲ್ಲಿ ವಿತರಿಸಿದರು ಮತ್ತು ಕೈದಿಗಳ ವಿತರಣೆ ವೇಳೆ ಜುವೈರಿಯ(ರ) ಒಬ್ಬ ಅನ್ಸಾರಿ ಸಹಾಬಿಯಾದ ಸಾಬಿತ್ ಬಿನ್ ಖೈಸ್(ರ)ರಿಗೆ ಒಪ್ಪಿಸಲಾಗಿತ್ತು. ಸಾಬಿತ್ ಬಿನ್ ಖೈಸ್‌ರೊಂದಿಗೆ ಮುಕಾತಿಬತ್‌ನ ರೂಪದಲ್ಲಿ ಬರ್ರ ಒಪ್ಪಂದ ಮಾಡಿದ್ದರು. (ಮುಕಾತಿಬತ್ ಎಂದರೆ, ದಾಸಿ ಅಥವಾ ಗುಲಾಮನು ತನ್ನ ಮಾಲಿಕನಿಗೆ ಏನಾದರೂ ಪರಿಹಾರಧನವನ್ನು ಕೊಟ್ಟು ಸ್ವತಂತ್ರಗೊಳ್ಳುವುದಾಗಿದೆ. ಇಲ್ಲಿ ನಿಶ್ಚಯಿಸಲಾದ ಮೊಬಲಗು ಒಂಬತ್ತು ಔಖಿಯ ಚಿನ್ನವಾಗಿತ್ತು. ಅದರ ಬೆಲೆ ಮುನ್ನೂರ ಆರುವತ್ತು ದಿರ್ಹಮ್ ಆಗಿದೆ.) ಈ ಒಪ್ಪಂದದ ನಂತರ ಬರ್ರ ಹಝ್ರತ್ ಪೈಗಂಬರ್(ಸ)ರ ಸನ್ನಿಧಿಯಲ್ಲಿ ಹಾಜರಾದರು ಮತ್ತು ಎಲ್ಲ ಅವಸ್ಥೆಗಳನ್ನು ಹೇಳಿದರು. ತಾನು ಬನೂ ಮುಸ್ತಲಖ್ ಗೋತ್ರದ ಸರದಾರನ ಪುತ್ರಿಯಾಗಿರುವೆ ಎಂದು ಹೇಳಿ ಪರಿಹಾರ ಧನಕ್ಕಾಗಿ ಹಝ್ರತ್ ಪೈಗಂಬರ್(ಸ)ರ ನೆರವನ್ನು ಕೇಳಿದರು. ಈ ಘಟನೆಯಿಂದ ಹಝ್ರತ್ ಪೈಗಂಬರ್(ಸ) ಪ್ರಭಾವಿತರಾದರು ಮತ್ತು ಆಕೆ ಪ್ರಸಿದ್ಧ ಗೋತ್ರದ ಸರದಾರನ ಪುತ್ರಿಯಾಗಿರುವುದರಿಂದ ಅವಳನ್ನು ವಿವಾಹ ಮಾಡಿದರೆ ಅವಳ ಗೋತ್ರದವರಿಗೆ ತಬ್ಲೀಗ್ ಮಾಡುವುದು ಸುಲಭವಾಗುವುದು ಎಂದು ಭಾವಿಸಿಕೊಂಡು ಅವಳನ್ನು ತಾನು ವಿವಾಹ ಮಾಡಲು ಉದ್ದೇಶಿಸಿದರು. ಬರ್ರ ಅದಕ್ಕೆ ಸಮ್ಮತಿ ಸೂಚಿಸಿದಾಗ ಹಝ್ರತ್ ಪೈಗಂಬರ್(ಸ) ಪರಿಹಾರಧನವನ್ನು ಪಾವತಿಸಿ ಅವರೊಂದಿಗೆ ವಿವಾಹ ಮಾಡಿಕೊಂಡರು. ಸಹಾಬಿಯರು ಇದನ್ನು ನೋಡಿದಾಗ ಹಝ್ರತ್ ಪೈಗಂಬರ್(ಸ)ರ ಪತ್ನಿಯ ಮನೆಯವರನ್ನು ತಮ್ಮ ಕೈಗಳಲ್ಲಿ ಬಂಧಿಯಾಗಿ ಇಡುವುದನ್ನು ಇಷ್ಟಪಡಲಿಲ್ಲ. ಆದ್ದರಿಂದ ನೂರು ಕುಟುಂಬದವರನ್ನು ಎಂದರೆ ನೂರಾರು ಕೈದಿಗಳನ್ನು ಪರಿಹಾರಧನವನ್ನು ಪಡೆಯದೇ ಒಂದೇ ಕ್ಷಣದಲ್ಲಿ ಸ್ವತಂತ್ರಗೊಳಿಸಲಾಯಿತು. ಆದ್ದರಿಂದಲೇ ಹಝ್ರತ್ ಆಯಿಶ(ರ) ಹೀಗೆ ಹೇಳುತ್ತಿದ್ದರು: ಜುವೈರಿಯ ತನ್ನ ಸಮುದಾಯಕ್ಕಾಗಿ ಅತ್ಯಂತ ಅನುಗ್ರಹೀತ ಮಹಿಳೆಯಾದಳು. ಈ ಸಂಬಂಧ ಮತ್ತು ಈ ದಯೆಯ ಫಲಿತಾಂಶವೆಂದರೆ ಬನೂ ಮುಸ್ತಲಿಖ್‌ನ ಜನರು ಇಸ್ಲಾಂ ಧರ್ಮದ ಬೋಧನೆಗಳಿಂದ ಪ್ರೇರಿತರಾದರು ಮತ್ತು ಹಝ್ರತ್ ಪೈಗಂಬರ್(ಸ)ರ ವಲಯವನ್ನು ಪ್ರವೇಶಿಸಿದರು. (ಸೀರತ್ ಖಾತಮನ್ನಬಿಯೀನ್(ಸ), ಹಝ್ರತ್ ಸಾಹಿಬ್ಜಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂಎ, ಪುಟ-570, 571)

ಹಝ್ರತ್ ಜುವೈರಿಯಾ(ರ) ಅವರ ತಂದೆ ಹಝ್ರತ್ ಹಾರಿಸ್(ರ) ಅವರು ತಮ್ಮ ಪುತ್ರಿಯ ಪರಿಹಾರಧನವನ್ನು ತೆಗೆದುಕೊಂಡು ಹಝ್ರತ್ ಪೈಗಂಬರ್(ಸ) ರ ಸೇವೆಗೆ ಬಂದರು ಮತ್ತು ಹಝ್ರತ್ ಜುವೈರಿಯಾ(ರ) ಅವರನ್ನು ಸ್ವತಂತ್ರಗೊಳಿಸಿದ ನಂತರ ಅವರು ಸ್ವತಃ ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದ ನಂತರ ಅವರನ್ನು ಹಝ್ರತ್ ಪೈಗಂಬರ್(ಸ) ಅವರೊಂದಿಗೆ ವಿವಾಹ ಮಾಡಿಸಿದರು ಎಂಬ ವರದಿಯು ಇದೆ.

ಸೀರತ್ ಇಬ್ನ್ ಹಿಶಾಮ್‌ನಲ್ಲಿ, ಹಝ್ರತ್ ಪೈಗಂಬರ್(ಸ)ರು ಬನೂ ಮುಸ್ತಲಖ್ ಯುದ್ಧದಿಂದ ಮದೀನಾಗೆ ಹಿಂದಿರುಗಿದಾಗ, ಹಝ್ರತ್ ಜುವೈರಿಯಾ(ರ) ಅವರ ತಂದೆ ಹಾರಿಸ್ ಬಿನ್ ಅಬಿ ಝರಾರ್ ಅವರು ತಮ್ಮ ಪುತ್ರಿಯ ಪರಿಹಾರಧನವನ್ನು ಪಾವತಿಸಲು ಹಝ್ರತ್

ಪೈಗಂಬರ್(ಸ)ರ ಬಳಿಗೆ ಬಂದರು. ಅವರು ಅಖೀಖ್ ಕಣಿವೆಗೆ ತಲುಪಿದಾಗ, ಅವನು ತನ್ನ ಪುತ್ರಿಯನ್ನು ವಿಮೋಚನೆಗೊಳಿಸಲು ತನ್ನೊಂದಿಗೆ ತಂದಿದ್ದ ಎರಡು ಒಂಟೆಗಳನ್ನು ಇಷ್ಟಪಟ್ಟನು. ಅವನು ಆ ಒಂಟೆಗಳನ್ನು ಅಖೀಖ್ ಕಣಿವೆಯಲ್ಲಿ ಬಚ್ಚಿಟ್ಟನು. ನಂತರ ಆತನು ಹಝ್ರತ್ ಪೈಗಂಬರ್(ಸ) ರ ಬಳಿಗೆ ಬಂದು ಹೀಗೆ ಹೇಳಿದನು: ಎಲೈ ಮುಹಮ್ಮದ್(ಸ)!! ನೀವು ನನ್ನ ಮಗಳನ್ನು ಬಂಧಿಸಿದ್ದೀರಿ. ಅದಕ್ಕೆ ಅವರು(ಸ) ಹೇಳಿದರು: ಅಖೀಖ್‌ನ ಕಣಿವೆಯಲ್ಲಿ ನೀವು ಬಚ್ಚಿಟ್ಟ ಆ ಎರಡು ಒಂಟೆಗಳು ಎಲ್ಲಿವೆ? ಆತನು ಈ ಮಾತಿನಿಂದ ಪ್ರಭಾವಿತನಾಗಿ ಹಾರಿಸ್ ಹೇಳಿದನು: ಅಲ್ಲಾಹನನ್ನು ಹೊರತುಪಡಿಸಿ ಬೇರೆ ದೇವರು ಇಲ್ಲ ಮತ್ತು ನೀವು ಅಲ್ಲಾಹನ ಸಂದೇಶವಾಹಕರು ಎಂದು ಸಾಕ್ಷಿ ಹೇಳಿದನು. ಮತ್ತೆ ಹೇಳಿದನು ಅಲ್ಲಾಹನ ಆಣೆ!! ಆ ಸಮಯದಲ್ಲಿ ಆ ಒಂಟೆಗಳೊಂದಿಗೆ ಹಾರಿಸ್ ಹೊರತುಪಡಿಸಿ ಬೇರೆ ಯಾರೂ ಇರಲಿಲ್ಲ ಎಂಬ ಕಾರಣಕ್ಕೆ ಅಲ್ಲಾಹನೇ ನಿಮಗೆ ಇದನ್ನು ತಿಳಿಸಿದ್ದಾನೆ. ನಂತರ ಹಾರಿಸ್ ಇಸ್ಲಾಂ ಧರ್ಮವನ್ನು ಸ್ವೀಕರಿಸಿದನು ಮತ್ತು ಅವನೊಂದಿಗೆ ಅವನ ಇಬ್ಬರು ಪುತ್ರರು ಮತ್ತು ಅವನ ಕೆಲವು ಜನರು ಸಹ ಇಸ್ಲಾಂ ಧರ್ಮವನ್ನು ಸ್ವೀಕರಿಸಿದರು.
(ಅಸ್ಸೀರತುನ್ನಬವೀಯ ಲಿಇಬ್ನೆ ಹಿಶಾಮ್, ಪುಟ–273, 274, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಒಂದು ವರದಿಯ ಪ್ರಕಾರ ಹಝ್ರತ್ ಜುವೈರಿಯಾ(ರ) ಅವರ ಸಹೋದರ ಅಬ್ದುಲ್ಲಾ ಬಿನ್ ಹಾರಿಸ್ ಅವರು ಬನೂ ಮುಸ್ತಲಿಖ್‌ನ ಕೈದಿಗಳ ಪರಿಹಾರಧನವನ್ನು ತಂದರು ಎಂದು ಉಲ್ಲೇಖಿಸಲಾಗಿದೆ, ಆದರೆ ದಾರಿಯಲ್ಲಿ ಅವರು ಒಂಟೆಗಳನ್ನು ಮತ್ತು ಅಬಿಸ್ಸಿನಿಯನ್ನರ ದಾಸಿಯನ್ನು ಒಂದು ಸ್ಥಳದಲ್ಲಿ ಮರೆಮಾಡಿದರು. ತದನಂತರ, ಅಬ್ದುಲ್ಲಾ ಅವರು ಹಝ್ರತ್ ಪೈಗಂಬರ್(ಸ) ಅವರ ಬಳಿಗೆ ಬಂದು ಕೈದಿಗಳ ವಿಮೋಚನೆಯ ಬಗ್ಗೆ ಮಾತನಾಡಿದರು. ಅದಕ್ಕೆ ಹಝ್ರತ್ ಪೈಗಂಬರ್(ಸ) ಹೇಳಿದರು ಸರಿ, ಆದರೆ ನೀವು ಪರಿಹಾರಧನದಲ್ಲಿ ಏನು ತಂದಿದ್ದೀರಿ? ಅದಕ್ಕೆ ಅವನು ನಾನು ಏನನ್ನೂ ತಂದಿಲ್ಲ ಎಂದು ಹೇಳಿದರು. ಅದಕ್ಕೆ ಹಝ್ರತ್ ಪೈಗಂಬರ್(ಸ) ಹೇಳೀದರು: ಹಾಗಾದರೆ, ನೀವು ಅಂತಹ ಸ್ಥಳದಲ್ಲಿ ಮರೆಮಾಡಿದ ಯುವ ಒಂಟೆ ಮತ್ತು ಕಪ್ಪು ಮಹಿಳೆ ಎಲ್ಲಿದೆ? ಇದನ್ನು ಕೇಳಿದ ಅಬ್ದುಲ್ಲಾ ಹೇಳಿದರು: ನಾನು ಸರ್ವಶಕ್ತನಾದ ಅಲ್ಲಾಹನು ಒಬ್ಬನೇ ಆಗಿದ್ದಾನೆ ಮತ್ತು ಮುಹಮ್ಮದ್ ಅಲ್ಲಾಹನ ಸಂದೇಶವಾಹಕ ಎಂದು ನಾನು ಸಾಕ್ಷಿ ಹೇಳುತ್ತೇನೆ ಮತ್ತು ನಾನು ಈ ಪರಿಹಾರಧನವನ್ನು ಮರೆಮಾಡಿದಾಗ ನನ್ನೊಂದಿಗೆ ಯಾರೂ ಇರಲಿಲ್ಲ ಮತ್ತು ಈ ಘಟನೆಯ ನಂತರ ಯಾರೂ ನನ್ನ ಮುಂದೆ ತಲುಪಲಿಲ್ಲ. ಹೀಗೆ ಆ ನಂತರ ಅವರು ಮುಸ್ಲಿಂ ಆದರು. (ಅಲ್–ಇಸ್ತಿಯಾಬ್ ಫಿ ಮರಫಹ್ ಅಲ್–ಅಶಬ್, ಸಂಪುಟ–3, ಪುಟ–20, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಈ ಬಗ್ಗೆ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಅವರು ಸೀರತ್ ಖತಮುನ್ನಬಿಯೀನ್‌ನಲ್ಲಿ ಹೀಗೆ ಬರೆದಿದ್ದಾರೆ:

ಹಝ್ರತ್ ಜುವೈರಿಯಾ ಅವರ ವಿವಾಹಕ್ಕೆ ಸಂಬಂಧಿಸಿದ ವರದಿಯು ಇದೆ, ಅವರ ತಂದೆ ಅವರನ್ನು ರಕ್ಷಿಸಲು ಹಝ್ರತ್ ಪೈಗಂಬರ್(ಸ) ಅವರ ಸೇವೆಗೆ ಬಂದಾಗ, ಅವರು ಹಝ್ರತ್ ಪೈಗಂಬರ್(ಸ) ರ ಪವಿತ್ರ ಸಹವಾಸದಿಂದ ಪ್ರಭಾವಿತರಾಗಿ ಇಸ್ಲಾಂಗೆ ಮತಾಂತರಗೊಂಡರು. ತದನಂತರ ಹಝ್ರತ್ ಪೈಗಂಬರ್(ಸ) ಅವರಿಂದ ಸಂದೇಶ ಲಭಿಸಿದ್ದರಿಂದ "ಅಂದರೆ, ವಿವಾಹ ಸಂಬಂಧದ ಸಂದೇಶ" ದಿಂದ ಸಂದೇಶವನ್ನು ಸ್ವೀಕರಿಸಿದ ನಂತರ, ಅವರು ತಮ್ಮ ಪುತ್ರಿಯನ್ನು ಹಝ್ರತ್ ಪೈಗಂಬರ್(ಸ)ಅವರಿಗೆ ತಮ್ಮ ಸ್ವಂತ ಇಚ್ಛೆಯಿಂದ ವಿವಾಹ ಮಾಡಿಸಿದರು." (ಸೀರತ್ ಖಾತಮನ್ನಬಿಯೀನ್(ಸ), ಹಝ್ರತ್ ಸಾಹಿಬ್ಜಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂಎ, ಪುಟ–571)

ಹಝ್ರತ್ ಜುವೈರಿಯಾ(ರ) ಅವರು ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ)ರ ಆಗಮನದ ಮೂರು ದಿನಗಳ ಮೊದಲು ನಾನು ಕನಸಿನಲ್ಲಿ ಕಂಡಿದ್ದೇನೆ, ಅಂದರೆ ಅವರು ಬಾನು ಮುಸ್ತಲಖ್‌ಗೆ ಹೋದಾಗ. ಅವರು ಹೇಳುತ್ತಾರೆ: ಚಂದ್ರನು ಯಸ್ರಿಬ್‌ನಿಂದ ಬಂದು ನನ್ನ ಮಡಿಲಿನಲ್ಲಿ ಬಿದ್ದದ್ದನ್ನು ನಾನು ಕನಸಿನಲ್ಲಿ ನೋಡಿದೆ. ಹಝ್ರತ್ ಪೈಗಂಬರ್(ಸ) ಬರುವವರೆಗೂ ನನ್ನ ಕನಸಿನ ಬಗ್ಗೆ ಯಾರಿಗೂ ಹೇಳಲು ನಾನು ಇಷ್ಟಪಡಲಿಲ್ಲ. ನಮ್ಮನ್ನು ಸೆರೆ ಹಿಡಿದಾಗ ಈ ಕನಸು ನನಸಾಗಲಿ ಎಂದು ಆಶಿಸಿದ್ದೆ. ಹಝ್ರತ್ ಪೈಗಂಬರ್(ಸ) ನನ್ನನ್ನು ವಿಮೂಚನಗೊಳಿಸಿದಾಗ ಮತ್ತು ನನ್ನನ್ನು ಮದುವೆಯಾದಾಗ, ಅಲ್ಲಾಹನ ಆಣೆ! ನಾನು ನನ್ನ ಸಮುದಾಯದ ಬಗ್ಗೆ ನಿಮ್ಮೊಂದಿಗೆ ಮಾತನಾಡಿಲ್ಲ. ಸಮುದಾಯದ ಬಿಡುಗಡೆಯ ಬಗ್ಗೆ ನಾನು ಯಾವುದೇ ಶಿಫಾರಸು ಮಾಡಲಿಲ್ಲ. ಮುಸ್ಲಿಮರು ಸ್ವತಃ ಅವರನ್ನು ಮುಕ್ತಗೊಳಿಸಿದರು. ನನ್ನ ತಂದೆಯ ಸಹೋದರಿಯೊಬ್ಬರು ನನಗೆ ಹೇಳುವವರೆಗೂ ನನಗೆ ತಿಳಿದಿರಲಿಲ್ಲ, ಆದ್ದರಿಂದ ನಾನು ಸರ್ವಶಕ್ತನಾದ ಅಲ್ಲಾಹನನ್ನು ಹೊಗಳಿದೆ. (ಸಬ್ಲುಲ್ ಹುದಾ ವರ್‌ರಶಾದ್, ಸಂಪುಟ–4, ಪುಟ–347, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಹಝ್ರತ್ ಪೈಗಂಬರ್(ಸ) ಹಝ್ರತ್ ಜುವೈರಿಯಾ(ರ) ಅವರ (ಹಖ್ ಮಹರ್) ವಧುದಕ್ಷಿಣೆಯನ್ನು ನಾನೂರು ದಿರ್ಹಮ್‌ಗಳಿಗೆ ನಿಗದಿಪಡಿಸಲಾಗಿತ್ತು ಎಂದು ಇಬ್ನ್ ಹಿಶಾಮ್ ಬರೆದಿದ್ದಾರೆ.
(ಅಸ್ಸೀರತುನ್ನಬವೀಯಾ ಲಿಇಬ್ನೆ ಹಿಶಾಮ್, ಪುಟ–674, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಆದಾಗ್ಯೂ, ಹಝ್ರತ್ ಪೈಗಂಬರ್(ಸ) ಈ ಯುದ್ಧದಿಂದ ವಿಜಯಿ ಮತ್ತು ಯಶಸ್ವಿಯಾಗಿ ಮರಳಿ ಬಂದರು. ಒಟ್ಟು 28 ದಿನಗಳು ಅವರು ಮದೀನದಿಂದ ಹೊರಗೆ ಇದ್ದರು. (ಸಬ್ಲುಲ್ ಹುದಾ ವರ್‌ರಶಾದ್, ಸಂಪುಟ–4, ಪುಟ–354, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಈ ಯುದ್ಧದಿಂದ ಮರಳಿ ಬರುವಾಗಲೇ ಕಪಟವಿಶ್ವಾಸಿಗಳ ನೇತಾರ ಅಬ್ದುಲ್ಲಾಹ್ ಬಿನ್ ಉಬಯ್ ಬಿನ್ ಸಲೂಲ್‌ನ ಕಪಟತೆ ಸ್ಪಷ್ಟವಾಗಿ ಬಯಲಾಯಿತು, ಇದನ್ನು ಇತಿಹಾಸದಲ್ಲಿಯೂ ಉಲ್ಲೇಖಿಸಲಾಗಿದೆ.

ಇದರ ವಿವರಣೆ ಏನೆಂದರೆ ಬನೂ ಮುಸ್ತಲಖ್ ಯುದ್ಧ ಮುಗಿದ ನಂತರ ಮುಸಲ್ಮಾನರು ಮುರೀಸೀಯ ಬಾವಿಯ ಬಳಿಯೇ ಇದ್ದರು, ಆ ಬಾವಿಯಲ್ಲಿ ನೀರು ತುಂಬಾ ಕಡಿಮೆಯಾಗಿತ್ತು. ನೀರು ತೆಗೆಯಲು ಬಕೆಟ್ ಹಾಕಿದಾಗ ಅರ್ಧ ತುಂಬಿ ಬರುತ್ತಿತ್ತು. ಬಾವಿಯ ಬಳಿ ಬನೂ ಖುಝಾರಾದ ಮಿತ್ರನಾಗಿದ್ದ ಸಿನಾನ್ ಬಿನ್ ವಬರ್ ಜುಹನಿ ಬಂದನು. ಆ ಸಮಯದಲ್ಲಿ ನೀರಿನ ಮೇಲೆ ಮುಹಾಜಿರೀನ್ ಮತ್ತು ಅನ್ಸಾರ್ ಗುಂಪು ಉಪಸ್ಥಿತರಿದ್ದರು. ಸಿನಾನ್ ಬಿನ್ ವಬರ್ ಜುಹನಿ ತನ್ನ ಬಕೆಟ್ ಅನ್ನು ಎಸೆದರು ಮತ್ತು ಉಮರ್ ಬಿನ್ ಖತ್ತಾಬ್(ರ) ಅವರ ಸೇವಕ ಜಹ್ಜಾ ಬಿನ್ ಮಸ್‌ಊದ್ ಗಫಾರಿ ಕೂಡ ನೀರು ಸೇದಲು ತಮ್ಮ ಬಕೆಟ್ ಅನ್ನು ಎಸೆದರು. ಸಿನಾನ್ ಮತ್ತು ಜಹ್ಜಾ ಬಕೆಟ್‌ಗಳು ಪರಸ್ಪರ ತಗುಲಿದವು, ಈ ಇಬ್ಬರು ಜನರು ಗೊಂದಲಕ್ಕೊಳಗಾದರು. ನೀರಿನ ಕೊರತೆ ಇತ್ತು, ಯಾರಿಗೂ ಪೂರ್ಣ ನೀರು ಸಿಗಲಿಲ್ಲ. ಜಹ್ಜಾ ಸಿನಾನ್‌ಗೆ ಹೊಡೆದನು ಆಗ ಅವನಿಗೆ ರಕ್ತಸ್ರಾವವಾಗಲು ಪ್ರಾರಂಭಿಸಿತು, ಆದ್ದರಿಂದ ಸಿನಾನ್ ಸಹಾಯಕ್ಕಾಗಿ ಕರೆದನು. ಓ ಅನ್ಸಾರ್! ಮತ್ತು ಜಹ್ಜಾ ಕೂಡ ಕೂಗಿದನು, ಓ ಮುಹಾಜಿರೀನರೇ! ಮತ್ತು ಒಂದು ವರದಿಯಲ್ಲಿ, ಓ ಖುರೈಶ್ ಜನರೇ! ಹೀಗೆ ಎಡರೂ ಗುಂಪುಗಳು ಸೇರಿದವು ಮತ್ತು ಆಯುಧಗಳು ಹೊರಬಂದವು. ಒಂದು ದೊಡ್ಡ ಪಿತೂರಿಯು ಉದ್ಭವಿಸಬಹುದಿತ್ತು ಆದರೆ ಹಝ್ರತ್ ಪೈಗಂಬರ್(ಸ) ತಕ್ಷಣವೇ ಮಾಹಿತಿ ಪಡೆದು ಈ ವಿಷಯವನ್ನು ಕೊನೆಗೊಳಿಸಿದರು. ಆದಾಗ್ಯೂ, ಅದರ ವಿವರಣೆಯ ಕೆಲವು ವರದಿಗಳಿವೆ.

ಸಹೀಹ್ ಬುಖಾರಿಯ ವರದಿಯ ಪ್ರಕಾರ, ಜಗಳಕ್ಕೆ ಕಾರಣವೆಂದರೆ ಮುಹಾಜಿರೀನ್‌ನ ಒಬ್ಬ ವ್ಯಕ್ತಿಯು ಅನ್ಸಾರ್‌ಗಳ ಬೆನ್ನಿನಿಂದ ಒದ್ದರು. ಆದ್ದರಿಂದ ಆ ಅನ್ಸಾರಿ ಹೇಳಿದರು, ಓ ಅನ್ಸಾರ್! ಸಹಾಯಕ್ಕಾಗಿ ಬನ್ನಿ ಮತ್ತು ಈ ಮುಹಾಜಿರ್ ಹೇಳಿದರು, ಓ ಮುಹಾಜಿರೀನರೇ! ನನ್ನ ಸಹಾಯಕ್ಕಾಗಿ ಬನ್ನಿ. ಅವರ ನಡುವಿನ ಜಗಳಕ್ಕೆ ಕಾರಣವೆಂದರೆ ಅನ್ಸಾರಿಯ ಒಂಟೆ ನೀರು ಕುಡಿದದ್ದ ನೀರಿನ ಬಾವಿಯಾಗಿತ್ತು. ಹಝ್ರತ್ ಪೈಗಂಬರ್(ಸ) ಬಂದು ಹೇಳಿದರು: ಈ ಅಜ್ಞಾನದ (ಜಾಹಿಲಿಯ್ಯತ್ ಕಾಲದ) ಕೂಗು ಎಂತಹದ್ದು? ಇವು ಅಜ್ಞಾನದ ಮಾತುಗಳಾಗಿವೆ. ಹಝ್ರತ್ ಪೈಗಂಬರ್(ಸ) ಅವರಿಗೆ ಸಂಪೂರ್ಣ ಪರಿಸ್ಥಿತಿಯನ್ನು ತಿಳಿಸಲಾಯಿತು. ಅದಕ್ಕೆ ಹಝ್ರತ್ ಪೈಗಂಬರ್(ಸ)ರು ಹೇಳಿದರು: ಇಂತಹ ವಿಷಯ ಬಿಡಿ ಇದು ಸಹೋದರತ್ವವನ್ನು ನಾಶಪಡಿಸುತ್ತದೆ. ಪ್ರತಿಯೊಬ್ಬ ಮನುಷ್ಯನು ತನ್ನ ಸಹೋದರನಿಗೆ ಸಹಾಯ ಮಾಡಬೇಕು.

ಮುಹಾಜಿರೀನರ ಗುಂಪು ಹಝ್ರತ್ ಉಬಾದಾ ಬಿನ್ ಸಾಮಿತ್(ರ) ಅವರೊಂದಿಗೆ ಮಾತನಾಡಿತು, ಮತ್ತು ಅನ್ಸಾರ್‌ಗಳ ಗುಂಪು ಸಿನಾನ್‌ನೊಂದಿಗೆ ಮಾತನಾಡಿದರು ಆಗ ಸಿನಾನ್ ತನ್ನ ಹಕ್ಕನ್ನು ಬಿಟ್ಟುಕೊಟ್ಟರು. ಹಝ್ರತ್ ಪೈಗಂಬರ್(ಸ) ಅವರ ಈ ಎಲ್ಲಾ ಮಾತುಗಳನ್ನು ಅವರಿಗೆ ತಿಳಿಸಲಾಯಿತು. ಮಾತನಾಡಿದ ಮತ್ತು ವಿವರಿಸಿದ ನಂತರ, ಸಿನಾನ್ ತನ್ನ ಹಕ್ಕನ್ನು ಬಿಟ್ಟುಕೊಟ್ಟನು, ಅಬ್ದುಲ್ಲಾ ಬಿನ್ ಉಬಯ್ ತನ್ನ ಹತ್ತು ಕಪಟ ಸಹಚರರೊಂದಿಗೆ ಕುಳಿತಿದ್ದನು. ಹಝ್ರತ್ ಝೈದ್ ಬಿನ್ ಅರ್ಕಮ್ ಕೂಡ ಅಲ್ಲಿದ್ದರು ಆದರೆ ಅವರು ಇನ್ನೂ ಚಿಕ್ಕವರಾಗಿದ್ದರು ಅಥವಾ ಕೆಲವು ವರದಿಗಳ ಪ್ರಕಾರ ಅವರು ಇನ್ನೂ ಪ್ರೌಢಾವಸ್ಥೆಯನ್ನು ತಲುಪಿರಲಿಲ್ಲ ಆದರೆ ಕೆಲವು ವರದಿಗಳ ಪ್ರಕಾರ ಅವರು ವಯಸ್ಕರಾಗಿದ್ದರು. ಅಬ್ದುಲ್ಲಾ ಬಿನ್ ಉಬಯ್‌ಗೆ ಜಹ್ಜಾನ ಈ ಧ್ವನಿಯನ್ನು ಕೇಳಿಸಿತು, ಓ ಖುರೈಶ್ ಜನರೇ!! ಅವನಿಗೆ ತುಂಬಾ ಕೋಪ ಬಂತು. ಅವನು ಹೇಳಿದನು, ಅಲ್ಲಾಹನ ಆಣೆ!! ನಾನು ಇಂದಿನಂತೆ ದಿನವನ್ನು ಎಂದೂ ನೋಡಲಿಲ್ಲ. ಅವನು ಹೇಳಿದನು, ಅಲ್ಲಾಹನ ಆಣೆ! ನನಗೆ ಹಝ್ರತ್ ಪೈಗಂಬರ್(ಸ)

ಅವರು ಮದೀನಕ್ಕೆ ಬಂದಾಗಿನಿಂದಲೇ ಈ ಧರ್ಮವನ್ನು ಬಲವಾಗಿ ಇಷ್ಟಪಡಲಿಲ್ಲ ಆದರೆ ನನ್ನ ಸಮುದಾಯದ ಜನರು ನನ್ನ ಮೇಲೆ ವಿಜಯ ಸಾಧಿಸಿದರು ಮತ್ತು ಇಸ್ಲಾಂ ಧರ್ಮವನ್ನು ಸ್ವೀಕರಿಸಿದರು. ಖುರೈಷಿಗಳ ಜನರು ನಮ್ಮ ಮೇಲೆ ಅಧಿಪತಿಗಳಾದರು ಮತ್ತು ಅವರು ನಮ್ಮ ನಗರದಲ್ಲಿ ಅಸಂಖ್ಯಾತರಾದರು ಮತ್ತು ನಮ್ಮ ಉಪಕಾರಗಳನ್ನು ತಿರಸ್ಕರಿಸಿದರು. ಈ ಖುರೈಶ್ ಜನರು ನಿಮ್ಮ ನಾಯಿಯನ್ನು ಕೊಬ್ಬಿಸಿ, ಅದು ನಿಮ್ಮನ್ನು ತಿನ್ನುತ್ತದೆ ಎಂದು ಆತನು ತುಂಬಾ ಕೊಳಕು ಉದಾಹರಣೆ ನೀಡಿದನು. ಅವನು ಮುಂದೆ ಹೇಳಿದನು, ನಾನು ಜಹ್ವಾ ನೀಡಿದಂತಹ ಕರೆ ಶಬ್ದದ ಮೊದಲು ನಾನು ಸತ್ತಿರ ಬೇಕಿತ್ತು ಎಂದು ನಾನು ಭಾವಿಸಿದೆ. ನಾನು ಇಲ್ಲಿದ್ದೇನೆ ಹಾಗಾಗಿ ಇದನ್ನೆಲ್ಲ ಸಹಿಸಲು ನನಗೆ ಸಾಧ್ಯವಿಲ್ಲ. ಅಲ್ಲಾಹನ ಆಣೆ!! ನಾವು ಮದೀನಕ್ಕೆ ತಲುಪಿ ಅತ್ಯಂತ ಆದರಣೀಯ ವ್ಯಕ್ತಿ ಅತ್ಯಂತ ನೀಚ ವ್ಯಕ್ತಿಯನ್ನು ಪಟ್ಟಣದಿಂದ ಹೊರಗೆ ಹಾಕುವನು. ನಂತರ ಅವನು ತನ್ನ ಸಮುದಾಯದ ಪ್ರಸ್ತುತ ಜನರಿಗೆ ಉದ್ದೇಶಿಸಿ ಹೀಗೆ ಹೇಳಿದನು: ನೀವು ನಿಮ್ಮ ಆತ್ಮಗಳಿಗೆ ಅನ್ಯಾಯ ಮಾಡಿದ್ದೀರಿ. ನೀವು ಅವರನ್ನು ನಿಮ್ಮ ನಗರದಲ್ಲಿ ಉಳಿಯುವಂತೆ ಮಾಡಿದ್ದೀರಿ ಮತ್ತು ಅವರು ಅಲ್ಲಿಯೇ ತಂಗಿದ್ದಾರೆ. ಅವರು ಶ್ರೀಮಂತರಾಗುವವರೆಗೆ ನೀವು ಅವರಿಗೆ ನಿಮ್ಮ ಸಂಪತ್ತಿನ ಭಾಗಗಳನ್ನು ನೇಮಿಸಿದ್ದೀರಿ. ಅಲ್ಲಾಹನ ಆಣೆ! ಈಗಲೂ ನೀವು ನಿಮ್ಮ ಹಸ್ತವನ್ನು ತಡೆದರೆ ಅವರು ನಿಮ್ಮ ಊರು ಬಿಟ್ಟು ಬೇರೆ ಊರಿಗೆ ಹೋಗುತ್ತಾರೆ. ನೀವು ಅವರಿಗಾಗಿ ಮಾಡಿದ್ದನ್ನು ಅವರು ಇನ್ನೂ ಒಪ್ಪಲಿಲ್ಲ. ಆತನು ಮುಹಾಜಿರೀನರ ವಿರುದ್ಧ ಪ್ರಚೋದಿಸಲು ಪ್ರಯತ್ನಿಸಿದನು. ನೀವು ಜನರು ಅಂದರೆ ಮುಹಮ್ಮದ್(ಸ.ಅ) ಸಲುವಾಗಿ ಕೊಲ್ಲಲ್ಪಟ್ಟಿರುವಿರಿ ಮತ್ತು ನೀವು ಜನರು ನಿಮ್ಮ ಮಕ್ಕಳನ್ನು ಅನಾಥರನ್ನಾಗಿ ಮಾಡಿದ್ದೀರಿ. ಪರಿಣಾಮವಾಗಿ, ನೀವು ಅಲ್ಪವಾಗಿದ್ದೀರಿ ಮತ್ತು ಆ ಜನರು ಬಹುಮತರಾದರು. ಮದೀನಕ್ಕೆ ತಲುಪಿ ಅತ್ಯಂತ ಆದರಣೀಯ ವ್ಯಕ್ತಿ ಅತ್ಯಂತ ನೀಚ ವ್ಯಕ್ತಿಯನ್ನು ಪಟ್ಟಣದಿಂದ ಹೊರಗೆ ಹಾಕುವನು. ಝೈದ್ ಬಿನ್ ಅರ್‌ಖವ್(ರ) ಈ ಸಂದರ್ಭದಲ್ಲಿ ಧರ್ಮಾಭಿಮಾನವನ್ನು ತೋರಿಸುತ್ತಾ ಅಬ್ದುಲ್ಲಾಹ್ ಬಿನ್ ಉಬಯ್‌ನ ಮಾತನ್ನು ತಡೆದರು ಮತ್ತು ಹೀಗೆ ಹೇಳಿದರು: ನಿನ್ನ ಸಮುದಾಯದಲ್ಲಿ ನೀನೇ ಅತ್ಯಂತ ನೀಚನು. ಮತ್ತು ಮುಹಮ್ಮದ್(ಸ) ಕರುಣಾಮಯಿ ದೇವರಿಂದ ಪ್ರಾಬಲ್ಯ ಮತ್ತು ಗೌರವವನ್ನು ಹೊಂದಿದ್ದಾರೆ ಮತ್ತು ಮುಸ್ಲಿಮರಿಂದ ಪ್ರಾಬಲ್ಯ ಸಾಧಿಸುವವರಾಗಿದ್ದಾರೆ ಎಂದು ಹೇಳಿದರು.

ಇದನ್ನು ಆಲಿಸಿ ಇಬ್ನ್ ಉಬಯ್ ಅವರಿಗೆ ಹೇಳಿದನು: ನೀನು ಸುಮ್ಮನಿರು, ನಾನು ತಮಾಷೆ ಮಾಡುತ್ತಿದ್ದೆ. ಅವನಿಗೆ ಭಯವಾಯಿತು. ಗಾಬರಿಗೊಂಡನು. ಈ ಎಲ್ಲಾ ವಿಷಯಗಳನ್ನು ಕೇಳಿದ ನಂತರ, ಝೈದ್ ಬಿನ್ ಅರ್ಕಮ್ ಹಝ್ರತ್ ಪೈಗಂಬರ್(ಸ)ರ ಬಳಿ ತಲುಪಿದರು, ಆ ಸಮಯದಲ್ಲಿ ಹಝ್ರತ್ ಪೈಗಂಬರ್(ಸ)ರ ಬಳಿ ಮುಹಾಜಿರೀನ್ ಮತ್ತು ಅನ್ಸಾರ್ ಸಹಾಬೀಯರ ಗುಂಪು ಇತ್ತು. ಆ ಸಂದರ್ಭದಲ್ಲಿ ಝೈದ್ ಬಿನ್ ಅರ್ಕಮ್ ಹಝ್ರತ್ ಪೈಗಂಬರ್(ಸ) ಅವರಿಗೆ ಸಂಪೂರ್ಣ ವಿಷಯವನ್ನು ತಿಳಿಸಿದರು. ಬುಖಾರಿಯ ವರದಿಯ ಪ್ರಕಾರ ಝೈದ್ ಬಿನ್ ಅರ್ಕಮ್ ತನ್ನ ಚಿಕ್ಕಪ್ಪನಿಗೆ ಈ ಘಟನೆಯನ್ನು ಪ್ರಸ್ತಾಪಿಸಿದರು ಮತ್ತು ಅವರ ಚಿಕ್ಕಪ್ಪ ಹಝ್ರತ್ ಪೈಗಂಬರ್(ಸ) ಅವರಿಗೆ ಈ ಘಟನೆಯ ಬಗ್ಗೆ ತಿಳಿದರು. ಆದ್ದರಿಂದ ಹಝ್ರತ್ ಪೈಗಂಬರ್(ಸ) ತಕ್ಷಣವೇ ಝೈದ್ ಅವರನ್ನು ಕರೆದರು. ಹಝ್ರತ್ ಪೈಗಂಬರ್(ಸ)ರು ಝೈದ್‌ನ ಮಾತುಗಳನ್ನು ಇಷ್ಟಪಡಲಿಲ್ಲ ಮತ್ತು ಅವರ(ಸ) ಅನುಗ್ರಹದಾಯಕ ಮುಖದ ಬಣ್ಣವು ಬದಲಾಯಿತು. ಹಝ್ರತ್ ಪೈಗಂಬರ್(ಸ) ಹೇಳಿದರು: ಓ ಹುಡುಗ! ನಿನಗೆ ಇಬ್ನೆ ಉಬಯ್ ಮೇಲೆ ಸಿಟ್ಟಿರಬೇಕು. ಅದಕ್ಕೆ ಝೈದ್ ಇಲ್ಲ ಎಂದು ಹೇಳಿದರು. ಯಾ ರಸೂಲಲ್ಲಾಹ್(ಸ)!! ಅಲ್ಲಾಹನ ಆಣೆ! ನಾನು ಈ ಮಾತುಗಳನ್ನು ಅವನಿಂದಲೇ ಕೇಳಿರುವೆನು. ಅವರು(ಸ) ಹೇಳಿದರು: ಬಹುಶಃ ನೀವು ಕೇಳುವಲ್ಲಿ ತಪ್ಪು ಮಾಡಿದ್ದೀರಿ. ಝೈದ್ ಹೇಳಿದರು, ಅಲ್ಲಾಹನ ಆಣೆ! ಯಾ ರಸೂಲಲ್ಲಾಹ್(ಸ)! ಹೀಗಿಲ್ಲ. ಅದಕ್ಕೆ ಹಝ್ರತ್ ಪೈಗಂಬರ್(ಸ) ಹೇಳಿದರು: ಬಹುಶಃ ವಿಷಯವು ನಿಮ್ಮ ಬಗ್ಗೆ ಅನುಮಾನಾಸ್ಪದವಾಗಿರಬಹುದು. ಝೈದ್ ಹೇಳಿದರು, ಯಾ ರಸೂಲಲ್ಲಾಹ್(ಸ)! ಅಲ್ಲಾಹನ ಆಣೆ! ಅದು ಹಾಗಲ್ಲ. ಇಬ್ನ್ ಉಬಯ್ಯನ ವಿಷಯವು ಇಡೀ ಸೈನ್ಯದಲ್ಲಿ ಹರಡಿತು ಮತ್ತು ಜನರಲ್ಲಿ ಚರ್ಚೆಯ ವಿಷಯವಾಗಿತ್ತು, ಮತ್ತು ಅನ್ಸಾರ್ ಜನರು ಝೈದ್ ಅವರನ್ನು ಖಂಡಿಸಿದರು ಮತ್ತು ಎಚ್ಚರಿಸಿದರು ಮತ್ತು ನೀವು ನಿಮ್ಮ ಜನರ ನಾಯಕನನ್ನು ಈ ರೀತಿ ಹೇಳುತ್ತಿದ್ದೀರಿ ಎಂದು ಹೇಳಿದರು. ಝೈದ್‌ನ ಚಿಕ್ಕಪ್ಪ ಕೂಡ ನಿರಾಸೆ ವ್ಯಕ್ತಪಡಿಸಿದರು. ಅವರು ಹೇಳಿದರು "ನಿನಗೇನು ತೊಂದರೆ?" ಹಝ್ರತ್ ಪೈಗಂಬರ್(ಸ)ರು ನಿನ್ನನ್ನು ಸುಳ್ಳುಗಾರ ಎಂದು ಕರೆದರು ಮತ್ತು ನಿನ್ನ ಮೇಲೆ ಕೋಪಗೊಂಡರು. ಅದಕ್ಕೆ ಝೈದ್ ಹೇಳಿದರು: ಅಲ್ಲಾಹನ ಆಣೆ ಆತನು ಹೇಳಿದ್ದನ್ನು ನಾನು ಸ್ವತಃ ಆಲಿಸಿದ್ದೇನೆ. ಅಲ್ಲಾಹನ ಆಣೆ!! ಖಝ್‌ರಜ್‌ನಲ್ಲಿ ನನಗೆ ಅಬ್ದುಲ್ಲಾ ಬಿನ್ ಉಬೈಗಿಂತ ಹೆಚ್ಚು ಪ್ರಿಯವಾದ ವ್ಯಕ್ತಿ ಇರಲಿಲ್ಲ. ನಾನು ಇಂತಹ ಮಾತುಗಳನ್ನು ನನ್ನ ತಂದೆಯಿಂದ ಕೇಳುತ್ತಿದ್ದರೆ, ಖಂಡಿತವಾಗಿಯು ನಾನು ಇದರ ಬಗ್ಗೆ ಹಝ್ರತ್ ಪೈಗಂಬರ್(ಸ) ಅವರಿಗೆ ತಿಳಿಸುತ್ತಿದ್ದೆ. ಅವರ ವಿಶ್ವಾಸವು ಬಹಳ ದೃಢವಾಗಿತ್ತು. ನನ್ನ ತಂದೆ ಹೇಳಿದ್ದರೂ ಸಹ, ನಾನು ಇದನ್ನು ಹಝ್ರತ್ ಪೈಗಂಬರ್(ಸ) ಅವರಿಗೆ ತಿಳಿಸುತ್ತಿದ್ದೆ ಮತ್ತು ಸರ್ವಶಕ್ತನಾದ ಅಲ್ಲಾಹನು ತನ್ನ ಪ್ರವಾದಿ ಹಝ್ರತ್ ಪೈಗಂಬರ್(ಸ) ಅವರಿಗೆ ನನ್ನ ಮಾತುಗಳನ್ನು ದೈವವಾಣಿಯ ಮೂಲಕ ಅವಶ್ಯವಾಗಿ ದೃಢೀಕರಿಸುತ್ತಾನೆ. ಈ ಪರಿಸ್ಥಿತಿಯಿಂದ ಝೈದ್ ತೀವ್ರ ದುಃಖಿತನಾಗಿದ್ದನು. ಹಿಂದೆಂದೂ ಕಂಡರಿಯದ ರೀತಿಯಲ್ಲಿ ಅವರಿಗೆ ದುಃಖವಾಯಿತು ಎಂದು ಅವರೇ ಹೇಳಿಕೊಂಡಿದ್ದಾರೆ. ನಾನು ನನ್ನ ಮನೆಯಲ್ಲಿ ಕುಳಿತಿದ್ದೆ ಇಲ್ಲಿ ಅವರು ಬಿಡಾರ ಹೂಡಿದ್ದ ಅವರ ಹೊರಾಂಗಣ ನಿವಾಸವನ್ನು ಸೂಚಿಸುತ್ತದೆ. ಈ ಇಡೀ ಘಟನೆ ಸಂಭವಿಸಿದ್ದು ಮದೀನಾದಿಂದ ಹೊರಗೆ ಆದ್ದರಿಂದ ಮದೀನದ ಮನೆಯಲ್ಲ. ಝೈದ್ ಜನರಿಂದ ತಪ್ಪಿಸಿಕೊಳ್ಳಲು ಅವರು ಜನರ ಮುಂದೆ ಬರಲಿಲ್ಲ. ಜನರು ಅವರನ್ನು ನೋಡಿ ನೀವು ಸುಳ್ಳು ಹೇಳಿದ್ದೀರಿ ಎಂದು ಜನರು ಹೇಳುತ್ತಾರೆ ಎಂಬ ಭಯ ಅವರಿಗಿತ್ತು. ಮತ್ತೊಂದೆಡೆ, ಹಝ್ರತ್ ಪೈಗಂಬರ್(ಸ)ರು ಝೈದ್ ಅವರಿಗೆ ಸಭೆಯಲ್ಲಿ ನೀಡಿದ ಉತ್ತರವನ್ನು ಆ ಸಭೆಯಲ್ಲಿದ್ದ ಅನ್ಸಾರ್‌ಗಳು ಕೇಳಿದಾಗ, ಕೆಲವರು ಅಲ್ಲಿಂದ ಎದ್ದು ಅಬ್ದುಲ್ಲಾ ಬಿನ್ ಉಬೈ ಬಳಿಗೆ ಬಂದು ಅಲ್ಲಿನ ವಿಷಯ ತಿಳಿಸಿದರು. ಮತ್ತು ಓಸ್ ಬಿನ್ ಖೌಲಿ ಹೇಳೀದನು: ಓ ಅಬು ಹುಬಾಬ್! ಇದು ಆತನ ಉಪನಾಮವಾಗಿತ್ತು, ನೀನು ಇದನ್ನು ಹೇಳಿದ್ದರೆ, ಹಝ್ರತ್ ಪೈಗಂಬರ್(ಸ) ರಿಗೆ ಹೇಳಿ, ಅವರು ನಿನಗಾಗಿ ಕ್ಷಮೆ ಕೇಳಬಹುದು ಮತ್ತು ನೀನು ಅದನ್ನು ನಿರಾಕರಿಸಬಾರದು. ನಿನ್ನ ಬಗ್ಗೆ ಯಾವುದೇ ದೈವವಾಣಿ ಬಹಿರಂಗವಾಗಿ ನೀನು ಸುಳ್ಳು ಹೇಳಿದ್ದೀಯ ಎಂದು ಸಾಬೀತಾಗಬಾರದು. ಒಂದುವೇಳೆ ನೀನು ಇದನ್ನು ಹೇಳದಿದ್ದರೆ, ಹಝ್ರತ್ ಪೈಗಂಬರ್(ಸ)ರ ಬಳಿಗೆ ಬಂದು ಅವರಿಗೆ ಇದರ ಬಗ್ಗೆ ತಿಳಿಸು ಮತ್ತು ನೀನು ಹಾಗೆ ಹೇಳಲಿಲ್ಲ ಎಂದು ಪ್ರಮಾಣ ಮಾಡು. ಆತನು ತಾನು ಏನನ್ನೂ ಹೇಳಿಲ್ಲ ಎಂದು ಅಲ್ಲಾಹನ ಮೇಲೆ ಪ್ರಮಾಣ ಮಾಡಿದನು. ನಂತರ ಇಬ್ನ್ ಉಬಯ್ ಹಝ್ರತ್ ಪೈಗಂಬರ್(ಸ)ರ ಬಳಿಗೆ ಹೋದನು. ಹಝ್ರತ್ ಪೈಗಂಬರ್(ಸ) ಹೇಳಿದರು: ಓ ಇಬ್ನ್ ಉಬಯ್! ನೀವು ಇದನ್ನು ಹೇಳಿದ್ದರೆ, ಪಶ್ಚಾತ್ತಾಪ ಪಡಿರಿ, ಆಗ ಅವನು ಝೈದ್ ಹೇಳಿದ್ದನ್ನು ನಾನು ಹೇಳಲಿಲ್ಲ ಎಂದು ಪ್ರಮಾಣ ಮಾಡಲು ಪ್ರಾರಂಭಿಸಿದನು.

ಇನ್ನೊಂದು ವರದಿಯಲ್ಲಿ, ಅಬ್ದುಲ್ಲಾ ಬಿನ್ ಉಬೈ ಅವರಿಗೆ ಸುದ್ದಿ ತಿಳಿದಾಗ, ಅವರೇ ಸ್ವತಃ ಹಝ್ರತ್ ಪೈಗಂಬರ್(ಸ)ರ ಸೇವೆಗೆ ಬಂದರು, ಮತ್ತು ಅವರು ಅಲ್ಲಾಹನ ಮೇಲೆ ಪ್ರಮಾಣ ಮಾಡಿದರು ಮತ್ತು ಝೈದ್ ನಿಮಗೆ ಹೇಳಿದ್ದನ್ನು ನಾನು ಹೇಳಲಿಲ್ಲ ಎಂದು ಹೇಳಿದನು ಎಂಬ ಉಲ್ಲೇಖವಿದೆ. ಮೂರನೇ ವರದಿಯಲ್ಲಿ ಹಝ್ರತ್ ಪೈಗಂಬರ್(ಸ) ಸ್ವತಃ ಅಬ್ದುಲ್ಲಾ ಬಿನ್ ಉಬಯ್ ಮತ್ತು ಅವರ ಸಂಗಡಿಗರನ್ನು ಕರೆಸಿದರು ಮತ್ತು ಅವರು ಅಂತಹ ಮಾತನ್ನು ಹೇಳಲಿಲ್ಲ ಎಂದು ಪ್ರಮಾಣ ಮಾಡಿದ್ದನು ಎಮಬ ಉಲ್ಲೇಖವಿದೆ. ಈ ಬಗ್ಗೆ ಅನ್ಸಾರ್ ಸಹಾಬಾ ಹೇಳಿದರು, ಆಶಾದಾಯಕವಾಗಿ, ಮಗು ಭ್ರಮೆಗೆ ಒಳಗಾಗಿರಬಹುದು ಮತ್ತು ಇಬ್ನ್ ಉಬಯ್ ಹೇಳಿದ್ದನ್ನು ನೆನಪಿಸಿಕೊಳ್ಳುತ್ತಿಲ್ಲ. ಇಬ್ನ್ ಉಬಯ್ಯನ ರಕ್ಷಣೆಗಾಗಿ ಅವರು ಇದನ್ನು ಹೇಳಿದರು ಏಕೆಂದರೆ ಅವನು ತಮ್ಮ ಸಮುದಾಯದಲ್ಲಿ ಗೌರವಾನ್ವಿತ ವ್ಯಕ್ತಿಯಾಗಿದ್ದನು. ಕೆಲವರು ಝೈದ್ ನಿಜ ಹೇಳುತ್ತಿದ್ದಾರೆಂದು ಭಾವಿಸಿದ್ದರು ಮತ್ತು ಕೆಲವರು ಅವನ ಮೇಲೆ ಅನುಮಾನ ವ್ಯಕ್ತಪಡಿಸಿದ್ದರು.

**(ಮುಂದುವರಿಯುವುದು)**

**"ಮೇಲಿನ ಕೈ ಕೆಳಗಿನ ಕೈಗಿಂತ ಉತ್ತಮವಾಗಿದೆ. (ಎಂದರೆ ಧಾನಧರ್ಮ ಕೊಡುವವನು ಅದನ್ನು ಪಡೆದುಕೊಳ್ಳುವವನಿಗಿಂತ ಉತ್ತಮವಾಗಿದ್ದಾನೆ)"**
(ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್)

**ದುಆವಿನ ಆಕಾಂಕ್ಷಿ:**
**M.B. Nasir Ahmed & Family, Bengaluru, Karnataka**

**"ಯಾರು ಜನರಿಗೆ ಕೃತಜ್ಞತೆ ಸಲ್ಲಿಸುವುದಿಲ್ಲವೋ ಅವನು ಅಲ್ಲಾಹನಿಗೂ ಕೃತಜ್ಞತೆ ಸಲ್ಲಿಸುವುದಿಲ್ಲ."**
(ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್)

**ದುಆವಿನ ಆಕಾಂಕ್ಷಿ:**
**Mubarak Ahmed Naseem & Family, Shimoga, Karnataka**

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadr.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613
Weekly **BADAR** Qadian
Distt: Gurdaspur (Pb.) INDIA Qadian - 143516
Postal Reg. No: 3000039689/2023-25 Vol No.05, Thursday, 22-29 August 2024, Issue No. 34-35

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

# ಸೈಯಿದುನಾ ಹಝ್ರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರ ಜರ್ಮನಿಯ ಪ್ರವಾಸ ಆಗಸ್ಟ್, ಸೆಪ್ಟೆಂಬರ್ 2023

*(ಬದರ್ ಸಂಚಿಕೆ-33ರ ಉಳಿದ ಭಾಗ ಮುಂದುವರಿಸಲಾಗಿದೆ)*

ನಂತರ ಮೇಯರ್ ಸಾಹಿಬ್ ಹೇಳಿದರು. ಒಬ್ಬ ಮೇಯರ್ ಆದ ನೆಲೆಯಲ್ಲಿ ನನಗೆ ತುಂಬಾ ಸಂತೋಷವಾಗುತ್ತದೆ. ಏಕೆಂದರೆ ಈ ಸಭಾಂಗಣದಲ್ಲಿ ಎತ್ತ ದೃಷ್ಟಿ ಬೀರಿದರೂ ನನಗೆ ನೋಡಲು ಸಿಗುತ್ತದೆ. ಈ ಕಾರ್ಯಕ್ರಮ ಕೇವಲ ಅಹ್ಮದಿ ಸದಸ್ಯರ ಕಾರ್ಯಕ್ರಮವಲ್ಲ. ಬದಲು ನೀವು ನಿಜವಾದ ರೂಪದಲ್ಲಿ ಕಾರ್‌ಬನ್‌ನ ಭಾಗವಾಗಿ ಬಿಟ್ಟಿದ್ದೀರಿ, ಏಕೆಂದರೆ ಇಲ್ಲಿ ಎಲ್ಲಾ ವರ್ಗದ ಜನರು ಪಾಲ್ಗೊಂಡಿದ್ದಾರೆ, ನೀವು ಸುಮಾರು ಎಲ್ಲಾ ರಾಜಕೀಯ ಪಕ್ಷಗಳ ಪ್ರತಿನಿಧಿಗಳನ್ನು ಕರೆದಿದ್ದೀರಿ. ಪೋಲೀಸರ ಪ್ರತಿನಿಧಿಗಳು ಇಲ್ಲಿದ್ದಾರೆ, ಅಗ್ನಿಶಾಮಕದವರು ಇಲ್ಲಿದ್ದಾರೆ. ಲೋಕಲ್ Sports club ನ ಸದಸ್ಯರು ಇಲ್ಲಿದ್ದಾರೆ. ಹೀಗೆ ಕಲಿಯಬೇಕಾದ ವಿಷಯವೇನೆಂದರೆ ಕಾರ್‌ಬನ್ ನಗರದ ಬಹುತೇಕ ನಾಗರಿಕರು ನಿಮ್ಮ ಆಮಂತ್ರನವನ್ನು ಸ್ವೀಕರಿಸಿದ್ದಾರೆ. ಇದು ನೀವು ಕಾರ್‌ಬನ್ ನಗರದ ಭಾಗವಾಗಿಬಿಟ್ಟಿದ್ದೀರಿ ಎಂಬುದಕ್ಕೆ ಸಾಕ್ಷಿಯಾಗಿದೆ. ನೀವು ಸಮ್ಮಿಲಿತಗೊಂಡಿದ್ದೀರಿ. ಅಹ್ಮದಿಯಾ ಮುಸ್ಲಿಂ ಜಮಾಅತಿಗೆ ಕಾರ್‌ಬನ್ ನಗರಕ್ಕೆ ಬಂದು 25 ವರ್ಷಗಳಾಗಿವೆ. ಇದೇನು ಸಾಧಾರಣ ಅವಧಿಯಲ್ಲ. ಇದು ನಿಮ್ಮ ನಾಡಾಗಿ ಬಿಟ್ಟಿದೆ.

ಅನಂತರ ಮೇಯರ್ ಸಾಹಿಬ್‌ರವರು ಹೇಳಿದರು. ನಿರ್ಮಾಣ ಕಾರ್ಯದಲ್ಲಿ ಕೇವಲ ನಿಮಗೆ ಅಷ್ಟೇ ತೊಂದರೆ ಆಗಲಿಲ್ಲ. ಬದಲಿಗೆ ನಮಗೂ ಸಹ ನಾನಾ ರೀತಿಯ ಅಡಚಣೆ ಎದುರಿಸಬೇಕಾಗುತ್ತದೆ. ಆದರೆ ಒಂದು ಮಾತು ನಮ್ಮಲ್ಲಿ ಸ್ಪಷ್ಟವಾಗಿತ್ತು. ನಾವು ಎಲ್ಲಿ ಇರುತ್ತೇವೆ ಅಲ್ಲಿ ಒಂದು ಆರಾಧನಾ ಸ್ಥಳವಿರಬೇಕು. ನಿಸ್ಸಂಶಯವಾಗಿಯೂ ತಡವಾಗಿರಬಹುದು. ಆದರೆ ಈ ಕಾರ್ಯ ಪೂರ್ತಿಗೊಂಡಿದೆ. ಕಾರ್‌ಬನ್ ನಗರದಲ್ಲಿ ನಾವು ಪ್ರತಿಯೊಬ್ಬರಿಗೂ ಸ್ವಾಗತಿಸುವೆವು. ಯಾರೂ ನಮ್ಮ ಸಂವಿಧಾನದಂತೆ ಬದುಕಬಯಸುತ್ತಾರೆ ಅವರಿಗೆ ಸ್ವಾಗತವಿದೆ. ನೀವು ವಿಶೇಷ ರೀತಿಯಲ್ಲಿ ಎಲ್ಲಾ ರೀತಿಯ ಕಡೆ ಗಮನ ನೀಡುವವರಾಗಿರಿ. ಅಲ್ಲದೇ ಸಮಾಜದ ಹಿತಾಕಾಂಕ್ಷಿಯಾಗಿದ್ದೀರಿ. ಇತರರು ಇದರಿಂದ ಕಲಿಯುವಂತಿದೆ.

ಅನಂತರ ಮೇಯರ್ ಸಾಹಿಬರು ಹೇಳಿದರು. ನಾನು ಈ ಮತನ್ನು ಸಹ ಒತ್ತಿ ಹೇಳಬಯಸುತ್ತೇನೆ. ಕೇವಲ ಒಬ್ಬರ ಧರ್ಮ ಸಂಬಂಧವಾಗಿ ಅಥವಾ ಯಾವುದೇ ಸಮುದಾಯ ನಿಮಿತ್ತವಾಗಲಿ, ಅವರ ಮೇಲೆ ದೌರ್ಜನ್ಯ ಎಸಗುವುದು ಸಹಿಸಲಾಗದ ಮಾತಾಗಿರುತ್ತವೆ. ತುಂಬಾ ವಿಷಾದದಿಂದ ಹೇಳಬೇಕಾಗುತ್ತದೆ. ಈಗಿನ ಕಾಲದಲ್ಲೂ ಇಂತಹ ಜನರಿರುತ್ತಾರೆ ಎಂದು. ಆದ್ದರಿಂದ ನಾನು ಕಾರ್‌ಬನ್ ನಗರದಲ್ಲಿ ಪ್ರತಿಯೊಬ್ಬರಿಗೂ ಸ್ವಾಗತ ಬಯಸುತ್ತೇನೆ. ಅವರ ಸಂಬಂಧ ಯಾವುದೇ ಧರ್ಮದಿಂದಿರಲಿ.

ಕೊನೆಯಲ್ಲಿ ಮೇಯರ್ ಸಾಹೇಬರು ಹೇಳಿದರು. ನನಗೆ ತುಂಬಾ ಸಂತೋಷದ ವಿಷಯವಾಗಿದೆ. ಅಹ್ಮದಿಯಾ ಮುಸ್ಲಿಂ ಜಮಾಅತಿನ ಸರ್ವೋಚ್ಛ ನೇತಾರರು ನಮ್ಮಲ್ಲಿ ಉಪಸ್ಥಿತರಿದ್ದಾರೆ. ನೀವೆಲ್ಲರೂ ಇಲ್ಲಿ ಸೇರಿದ್ದೀರಿ. ಧನ್ಯವಾದಗಳು

ಅನಂತರ 6 ಗಂಟೆ 33 ನಿಮಿಷಕ್ಕೆ ಹುಝೂರೆ ಅನ್ವರ್(ಅಬಿಅ) ಭಾಷಣ ಪ್ರಾರಂಭಿಸಿದರು.

**ಹುಝೂರೆ ಅನ್ವರ್(ಅಬಿಅ) ರವರ ಸಂಬೋಧನೆ**

ತಶಹ್ಹುದ್ ತವೂಝ್ ಮತ್ತು ತಸ್ಮಿಯ ನಂತರ ಹುಝೂರೆ ಅನ್ವರ್(ಅಬಿಅ) ಹೇಳಿದರು:

ಎಲ್ಲಾ ಗೌರವಾನ್ವಿತ ಅತಿಥಿ ಮಹೋದಯರಿಗೆ, ಅಸ್ಸಲಾಮು ಅಲೈಕುಂ ರಹಮತುಲ್ಲಾಹಿ ವ ಬರಕಾತುಹು!

ಅಲ್ಲಾಹನ ಕೃಪೆಯಿದೆ. ಇಷ್ಟೊಂದು ದೀರ್ಘ ಅವಧಿಯ ನಂತರ ಅಹ್ಮದಿಯಾ ಮುಸ್ಲಿಂ ಜಮಾಅತಿಗೆ ಈ ನಗರದಲ್ಲಿ ಮಸೀದಿ ನಿರ್ಮಾಣದ ಭಾಗ್ಯ ದೊರೆತಿದೆ. ಆದ್ದರಿಂದ ಈ ನಗರದ ಮೇಯರ್, ಕೌನ್ಸಿಲರ್ಸ್ ಮತ್ತು ನಾಗರಿಕರೆಲ್ಲರಿಗೂ ಕೃತಜ್ಞತೆ ಸಲ್ಲಿಸುತ್ತೇನೆ. ಅವರು ಮಸೀದಿ ನಿರ್ಮಾಣ ಕಾರ್ಯದಲ್ಲಿ ನಮಗೆ ನೆರವು ನೀಡಿದರು.

ಈ ಕೃತಜ್ಞತೆ ನಾಮಮಾತ್ರಕ್ಕೆ ಮಾತ್ರವಲ್ಲ. ಬದಲು ಇದು ನಮ್ಮ ಧಾರ್ಮಿಕ ಕರ್ತವ್ಯವಾಗಿದೆ. ಇಸ್ಲಾಮಿನ ಈ ಆದೇಶವಿದೆ. ಇಸ್ಲಾಂ ಧರ್ಮ ಸ್ಥಾಪಕರಾದ ಹಝ್ರತ್ ಮುಹಮ್ಮದ್ ಮುಸ್ತಫಾ(ಸ) ಹೇಳಿದರು. ನೀವು ಜನರಿಗೆ ಕೃತಜ್ಞರಾಗಿರುವುದಿಲ್ಲ ಎಂದರೆ ಅಲ್ಲಾಹನಿಗೂ ಕೃತಜ್ಞರಾಗಿರಲು ಸಾಧ್ಯವಿಲ್ಲ. ಆದ್ದರಿಂದ ಒಂದು ಲೆಕ್ಕದಲ್ಲಿ ಇದು ನಮ್ಮ ಧಾರ್ಮಿಕ ಕರ್ತವ್ಯವು ಆಗಿದೆ. ನಾವು ನಿಮಗೆ ಕೃತಜ್ಞತೆಯನ್ನು ಸಲ್ಲಿಸುತ್ತಿದ್ದೇವು. ನೀವು ನಮ್ಮ ಕಾರ್ಯದಲ್ಲಿ ನೆರವಾಗಿದ್ದೀರಿ. ಇಂದು ಅಲ್ಲಾಹನ ಅನುಗ್ರಹದಿಂದ ಅಹ್ಮದಿಯಾ ಮುಸ್ಲಿಂ ಜಮಾಅತಿಗೆ ಈ ನಗರದಲ್ಲಿ ಒಂದು ಚಿಕ್ಕದಾದ ಸುಂದರ ಮಸೀದಿ ಲಭ್ಯವಾಗಿದೆ.

ಹುಝೂರೆ ಅನ್ವರ್(ಅಬಿಅ) ಹೇಳಿದರು. ಅಬ್ದುಲ್ಲ ಸಾಹಿಬ್ ಅಮಿರ್ ಜಮಾಅತ್ ಜರ್ಮನಿ ಅವರು ಈ ನಗರದ ಇತಿಹಾಸವನ್ನು ವಿವರಿಸುತ್ತಾ ಹೇಳಿದರು. ಈ ಮಸೀದಿ ನಗರದ ನಡು ಪ್ರದೇಶದಲ್ಲಿದೆ. ಇದು ತುಂಬಾ ಒಳ್ಳೆಯ ಮಾತಾಗಿದೆ. ಲೌಕಿಕ ಮತ್ತು ಭೌತಿಕ ವಸ್ತುಗಳಿಗಾಗಿ ಹೆಚ್ಚಿನ ಸವಲತ್ತುಗಳನ್ನು ಒದಗಿಸಿಕೊಡಲಾಗುತ್ತದೆ. ಅಲ್ಲೇ ಅಲ್ಲಾಹನ ಸ್ಮರಣೆ ಮಾಡಲು ಸಹ ಅನುಕೂಲಕರ ಸ್ಥಳ ಇರಬೇಕಾಗಿದೆ. ಅಲ್ಲಿ ಎಲ್ಲರೂ ಒಟ್ಟುಗೂಡಿ ಏಕದೇವನನ್ನು ಆರಾಧಿಸಬಹುದು. ಮಸೀದಿಯಾಗಲೀ, ಚರ್ಚ್ ಆಗಲಿ ಅಥವಾ ಅನ್ಯ ಧರ್ಮದ ಆರಾಧನ ಸ್ಥಳವಾಗಿರಲಿ, ಇವರೆಲ್ಲರೂ ಒಟ್ಟುಗೂಡುವಾಗ ತಿಳಿದುಬರುವುದು, ಧರ್ಮವು ಪರಸ್ಪರ ಸೇರಿ ಒಟ್ಟುಗೂಡುವ, ಮತ್ತು ಪರಸ್ಪರ ಸಹಕಾರ ನೀಡುವ ಶಿಕ್ಷಣ ಕೊಡುತ್ತದೆ. ಯಾವ ಧರ್ಮವು ಅಥವ ಯಾವ ಧರ್ಮದ ಸ್ಥಾಪಕರು ಆಗಲಿ ಉಗ್ರವಾದದ ಶಿಕ್ಷಣ ನೀಡುವುದಿಲ್ಲ. ಹಿಂಸಿಸುವ ಶಿಕ್ಷಣ ನೀಡುವುದಿಲ್ಲ. ಎಲ್ಲಾ ಪ್ರವಾದಿಗಳು ಅವರವರ ವಿಶ್ವಾಸ ಪ್ರಕಾರ ಅವರು ದೇವನ ಕಡೆ ಬಂದವರಾದರೆ ದೇವರು ಅವರನ್ನು ಆರಾಧಿಸಲು, ಒಬ್ಬರು ಮತ್ತೊಬ್ಬರ ಹಕ್ಕುಗಳನ್ನು ಪಾಲಿಸಲು ಗಮನ ನೀಡಿರುತ್ತಾನೆ. ಶಾಂತಿಮತ್ತು ಸೌಹಾರ್ದತೆಯ ಶಿಕ್ಷಣ ನೀಡಿರುತ್ತಾನೆ. ಆದ್ದರಿಂದ ಈ ನಿಟ್ಟಿನಲ್ಲಿ ಇದೊಂದು ಒಳ್ಳೆಯ ಮಾತಾಗಿದೆ. ನಮಗೆ ಇಂಥದೊಂದು ಜಾಗದಲ್ಲಿ ಮಸೀದಿ ದೊರೆತಿದೆ. ಅದು ನಡು ನಗರದಲ್ಲಿದೆ, ಹೀಗೆ ಎಲ್ಲರ ನಡುವಿನಲ್ಲಿದ್ದು ನೆರೆಹೊರೆಯವರಿಗೆ ಇಸ್ಲಾಮಿನ ಸುಂದರವಾದ ಶಿಕ್ಷಣದ ಬಗ್ಗೆ ಮಾಹಿತಿ ನೀಡಬಹುದು, ತಪ್ಪು ಧಾರಣೆಗಳನ್ನು ಹೋಗಲಾಡಿಸಬಹುದು. ಏಕೆಂದರೆ ಈಗಿನ ಮುಸಲ್ಮಾನರು ಇಸ್ಲಾಮಿನ ಬಗ್ಗೆ ಬಹಳಷ್ಟು ತಪ್ಪು ಧಾರಣೆಗಳನ್ನು ಹುಟ್ಟು ಹಾಕಿದ್ದಾರೆ ಮತ್ತು ಬಹುಸಂಖ್ಯೆಯಲ್ಲಿ ಜನರು ಅದನ್ನೇ ನಂಬಿಕೊಂಡಿದ್ದಾರೆ. ಅದನ್ನು ನಾವು ಹೊಗಲಾಡಿಸುವೆವು ಮತ್ತು ಪವಿತ್ರ ಖುರ್‌ಆನ್ ಹಾಗೂ ಹಝ್ರತ್ ಮುಹ್ಮದ್ (ಸ) ರವರ ನಡವಳಿಕೆ ಮತ್ತು ಕೃತಿಯಿಂದ ಸಾಬೀತುಪಡಿಸುವೆವು. ಇಸ್ಲಾಮಿನ ನಿಜವಾದ ಶಿಕ್ಷಣ ಶಾಂತಿ, ಪ್ರೇಮ ಮತ್ತು ಸೌಹಾರ್ದತೆಯಾಗಿದೆ.

**(ಮುಂದುವರಿಯುವುದು)**

**ಸೂಚನೆ** ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಪ್ರತಿ ಶುಕ್ರವಾರ ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **ಖುತ್‌ಬ ಜುಮುಅ**ವನ್ನು ನೀಡುತ್ತಾರೆ. ಅದರ ನೇರ ಪ್ರಸಾರ MTA ಮುಖಾಂತರ ವೀಕ್ಷಿಸಲು ವಿನಂತಿಸಿಕೊಳ್ಳುತ್ತೇವೆ

**MUSLIM TELEVISION AHMADIYYA INTERNATIONAL**
www.mta.tv

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**

**NATIONAL TOLL FREE : 1800-103-2131**

**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**

**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.